ಜನಪದ ವಿಚಾರ

ಸಂಪುಟ ೧೮
ಜೂನ್ ೨೦೧೮
ಸಂಚಿಕೆ ೧೧



ನೀನು ಕೂಡ ನನ್ನ ಹಾಗೆ ಯಾರ ಪಗಡೆದಾಳ ?
ನಿನ್ನ ಮಕ್ಕಳೆಲ್ಲ ನಿನಗೆ ಬರಿಯ ಶೋಕಮೇಳ ?

- ಗೋಪಾಲಕೃಷ್ಣ ಅಡಿಗ

ಈ ಸಂಚಿಕೆಯಲ್ಲಿ

ಜನಪದ ವಿಚಾರ

ತಿಂಗಳ ವೈಚಾರಿಕ ಪತ್ರಿಕೆ

ಜೂನ್ - ೨೦೧೮
ಸಂಪುಟ - ೧೮
ಸಂಚಿಕೆ -೧೧

<u>ಸಂಪಾದಕರು</u>
ಸಂತೋಷ್ ಕೌಲಗಿ

<u>ಚಂದಾ ವಿವರ</u>
ವಾರ್ಷಿಕ : ರೂ ೨೦೦/-

<u>ಸಂಪರ್ಕವಿಳಾಸ</u>
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ - ೫೭೧೪೩೧
ಮಂಡ್ಯ ಜಿಲ್ಲೆ

<u>ದೂರವಾಣಿ</u>
೦೨೩೬ ೨೯೮೫೪
೭೮೨೯೪೮೯೧೪೭

Email : janapada@yahoo.com
web : janapada.org

ತಿಂಗಳ ಕವನ

ನಮಸ್ಕಾರ

ನೆಲವೆಲ್ಲ ಕಾದು ಕಾವಲಿಯಾಗಿ ಉದ್ದೋಉದ್ದ
ಬಿಸಿಲುಬೆಂಕಿಯು ಹಬ್ಬಿ
ನೀರೆಲ್ಲ ಆರಿ ಮರೀಚಿಕೆಯಾಗಿ ಕುಣಿದಿದ್ದಾಗ
ಇನ್ನೂ ತನ್ನ ಕೊಂಬೆಗಳ ಹಸಿರುಕೊಡೆ ಬಿಚ್ಚಿ
ನನ್ನ ತಲೆ ಮೇಲೆ ನೆರಳ ನೇದಿರುವ
ಮರವೇ, ನಿನಗೆ ನಮಸ್ಕಾರ.

ಮಗುವಾಗಿದ್ದ ಸಮಯ ಮರಕೋತಿಯಾಟಕ್ಕೆ
ಆಶ್ರಯವಾಗಿ ಬಾಲ್ಯ, ಯೌವನ, ಮುಪ್ಪು
ತಿರುಗಾಟದಲಿ ನವೆದು ಬದುಕೆಲ್ಲ ಒಣಗಿ
ಹಳದಿಗಟ್ಟಿದ ಸಮಯ
ಅದೆ ಅದೇ ಸಮ್ಮೃದ್ಧಿಯ ಸುರಿವ,
ಯವ್ವನದ ತೆಕ್ಕೆಯಲಿ ಮರಕೋತಿಯಾಟಕೆ ಕರೆವ
ಮರವೇ, ನಿನಗೆ ನಮಸ್ಕಾರ.

ಯಾವ ಮಣ್ಣಿನ ಜತೆಗೆ ಹೋರಾಡಿ ಸೋತೆನೋ
ಯಾವ ಗಗನದ ಕರೆಗೆ ಓಗೊಟ್ಟು ದಣಿದೆನೋ
ಅದೇ ಮಣ್ಣು, ಆಕಾಶದಲಿ,ಬೇರೂರಿ ಕೊಂಬೆಯ
ಹರಡಿ ಬದುಕುವ ಕ್ರಮವ ರೂಪಿಸಿ, ನನಗೆ
ಬೋಧಿಸಿದ ಮರವೇ, ನಿನಗೆ ನಮಸ್ಕಾರ.

ನಿನ್ನೆ, ಇಂದು, ನಾಳೆಗಳ ಅದೆತನಕ್ಕೆ ದಡ್ಡಾಗಿ
ಜೀವರಸ ಬತ್ತಿ, ಕ್ಷಣಗಳನೆಣಿಸುತಿದ್ದಾಗ
ಕಾಂಡದಲಿ ರಸವ ಕಾಪಿಟ್ಟು, ಒಳಗೊಳಗೇ
ರೆಂಬೆಕೊಂಬೆಗಳತ್ತ ಎಷ್ಟು ಬೇಕೋ ಅಷ್ಟು ಹರಿಸಿ,
ಕ್ಷಣಕ್ಷಣಕ್ಕೂ ಹೊಸ ಚಿಗುರ ಧರಿಸಿ, ಹೊಸದಾಗಿ,
ಹೊಸದಾಗಿಸುವ, ಹಸುರಿಸುವ
ಮರವೇ, ನಿನಗೆ ನಮಸ್ಕಾರ.

– ಸುಬ್ರಾಯ ಚೊಕ್ಕಾಡಿ

ನಿಮ್ಮೊಂದಿಗೆ

ಜೂನ್ ಮಾಹೆಯ ಜನಪದ ವಿಚಾರವನ್ನು ನಿಮ್ಮ ಕೈಯಲ್ಲಿ ಇಡುತ್ತಿದ್ದೇವೆ. ೧೯೭೨ ರಿಂದಲೇ ವಿಶ್ವ ಸಂಸ್ಥೆ ಜೂನ್ ಮಾಹೆಯ ೫ ನೇ ದಿನವನ್ನು 'ವಿಶ್ವ ಪರಿಸರ ದಿನ'ವೆಂದು ಘೋಷಿಸಿ ಜಾಗತಿಕ ಮಟ್ಟದಲ್ಲಿ ಪರಿಸರ ಸಂರಕ್ಷಣೆಯ ಬಗ್ಗೆ ಜನರ ಗಮನ ಸೆಳೆಯಲು ಪ್ರಯತ್ನಿಸುತ್ತಿದೆ. ಆದರೆ ಅದರ ಪ್ರಯತ್ನಗಳು ಅಂತಹ ಪರಿಣಾಮವನ್ನು ಬೀರಿದಂತೆ ಕಾಣುತ್ತಿಲ್ಲ. ಜಾಗತಿಕವಾಗಿ ಪರಿಸರದ ಪರಿಸ್ಥಿತಿ ವರ್ಷದಿಂದ ವರ್ಷಕ್ಕೆ ಬಿಗಡಾಯಿಸುತ್ತಾ ಹೋಗುತ್ತಿದೆ.

ಜಾಗತಿಕ ತಾಪಮಾನ ಊಹೆಯೇ ಅಥವಾ ವಾಸ್ತವವೇ ಎಂಬ ಅನುಮಾನ ಮಾಯವಾಗಿ ಅದು ವಾಸ್ತವವೆಂಬ ಸರ್ವಾನುಮತದ ಅಭಿಪ್ರಾಯ ಉಂಟಾಗುತ್ತಿದೆ. ಕಳೆದ ೨೦ ವರ್ಷಗಳಿಂದ ಜಾಗತಿಕ ತಾಪಮಾನದಲ್ಲಿ ಏರಿಕೆಯಾಗುತ್ತಿರುವುದು ದಾಖಲೆಯಾಗಿದೆ. ಈ ವರ್ಷವು ಗರಿಷ್ಠ ತಾಪಮಾನದ ಮೂರುವರ್ಷಗಳಲ್ಲಿ ಒಂದು ಆಗುವ ಎಲ್ಲಾ ಸಾಧ್ಯತೆಗಳು ಕಾಣ ಬರುತ್ತಿವೆ. ಕೈಗಾರಿಕಾ ಶಕೆಯ ಪೂರ್ವಾರ್ಧಕ್ಕಿಂತ ಭೂಮಿಯ ತಾಪಮಾನ ಇಂದು ಒಂದೂವರೆ ಡಿಗ್ರಿ ಸೆಲಿಸಿಯಸ್‌ನಷ್ಟು ಹೆಚ್ಚಿದೆ. ೨೦೧೩-೧೭ನೇ ವರ್ಷಗಳು ಭೂಮಿ ಕಂಡ ಅತ್ಯಂತ ಹೆಚ್ಚಿನ ತಾಪಮಾನದ ವರ್ಷಗಳಾಗಿದ್ದವು ಎಂದು ದಾಖಲೆಗಳು ಹೇಳುತ್ತಿವೆ.

ದುರಂತವೆಂದರೆ ತಾಪಮಾನ ಏರಿಕೆಯಿಂದ ಆಗುವ ಪ್ರಕೃತಿ ವಿಕೋಪ ಬಲಿಯಾಗುತ್ತಿರುವುದು ದಕ್ಷಿಣ ಗೋಲಾರ್ಧದ ಬಡ ರಾಷ್ಟ್ರಗಳು. ಇಂಗಾಲ ಹೊರಸೂಸುವಿಕೆಯಲ್ಲಿ ಉತ್ತರ ಅಮೇರಿಕಾದ ಪಾಲು ತಲಾವಾರು ೧೮.೬ ಟನ್ ಇದ್ದರೆ ಭಾರತ ದೇಶದ್ದು ೧.೯ ಟನ್ ಇದೆ. ಅಂದರೆ ಶ್ರೀಮಂತ ರಾಷ್ಟ್ರಗಳು ಬಡರಾಷ್ಟ್ರಗಳಿಗಿಂತ ಸುಮಾರು ೯ ಪಟ್ಟು ಹೆಚ್ಚು ಇಂಗಾಲವನ್ನು ಬಿಡುಗಡೆ ಮಾಡುತ್ತಿವೆ.

ಈ ವಿಚಾರ ತಿಳಿದಿದ್ದೂ ನಮ್ಮ ದೇಶವೂ ಅಮೇರಿಕಾದ ಅಭಿವೃದ್ಧಿಯ ಮಾದರಿಯನ್ನೇ ಬಹು ದೊಡ್ಡ ಮಾದರಿ ಎಂದು ಪರಿಗಣಿಸುತ್ತಿರುವುದು ನಮ್ಮ ದುರಂತವೇ ಸರಿ. ಭಾರತವೂ ಕೂಡ ಉತ್ತರ ಅಮೇರಿಕಾ ದೇಶಗಳಷ್ಟೇ ಇಂಗಾಲ ಬಿಡುಗಡೆ ಮಾಡಿದಲ್ಲಿ ಈ ದೇಶದ ನಗರಗಳು ಹೇಗಿರಬಹುದೆಂಬುದನ್ನು ಕಲ್ಪಿಸಿಕೊಂಡರೇ ಭಯವಾಗತೊಡಗುತ್ತದೆ.

ಈ ದೇಶಕ್ಕೆ ಸೂಕ್ತವಾದ ಅಭಿವೃದ್ಧಿ ಮಾದರಿಯ ಬಗ್ಗೆ ಸಾಕಷ್ಟು ಸಾರ್ವಜನಿಕ ಚರ್ಚೆ ಆಗಬೇಕಿದೆ.

ಜನಪದ ವಿಚಾರದ ಈ ಸಂಚಿಕೆಯನ್ನು ಪರಿಸರದ ವಿಚಾರಗಳನ್ನು ಕೇಂದ್ರವಾಗಿ ಇಟ್ಟುಕೊಂಡು ರೂಪಿಸಲು ಪ್ರಯತ್ನಿಸಿದ್ದೇವೆ. ಈ ಸಂಚಿಕೆಯನ್ನು ತರಲು ನೆರವಾದ ಶ್ರಿ ಟಿ.ಎಸ್. ಚನ್ನೇಶ ಅವರಿಗೆ ವಂದನೆಗಳು, ಮಿಕ್ಕಂತೆ ಎಲ್ಲಾ ಲೇಖಕರಿಗೂ ಮತ್ತು ಪತ್ರಿಕೆ ಸುಂದರವಾಗಿ ಹೊರಬರಲು ಸಹಕರಿಸಿದ ಎಲ್ಲರಿಗೂ ವಂದನೆಗಳು.

ಪತ್ರಿಕೆ ನಿಮಗೆ ಇಷ್ಟವಾಗುತ್ತದೆ ಎಂದು ಭಾವಿಸಿದ್ದೇವೆ. ದಯಮಾಡಿ ನಿಮ್ಮ ಅಭಿಪ್ರಾಯ ತಿಳಿಸಿ. ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ವಂದನೆಗಳು.

ಪರಿಸರದಿಂದಾಗುವ ಲಾಭದ ಅಳತೆಗೋಲು

- ಡಾ. ಟಿ.ಎಸ್. ಚನ್ನೇಶ್

ನಿಸರ್ಗದಿಂದ ನಾವೇನನ್ನು ಪಡೆಯುತ್ತೇವೆ? - ನೀರು, ನೆರಳು ಆಹಾರ, ಉರುವಲು, ಸ್ಫೂರ್ತಿ, ಆನಂದ ನೆಮ್ಮದಿ ಹೀಗೆ ಹೆಸರಿಸುತ್ತಾ ಹೋದರೆ ನೂರೆಂಟು ಬಗೆಯ ವಿಚಾರಗಳು ಸಾಲುಗಟ್ಟುತ್ತವೆ. ಅಷ್ಟೊಂದು ಹಿತವಾದ ಸಂಗತಿಗಳು. ಅವುಗಳ ಲಾಭವನ್ನು ಹೀಗೆ ಎಂದು ಅಳತೆ ಮಾಡಿ ಹೇಳಲು ಅದೆಷ್ಟೋ ಬಾರಿ ಸಾಧ್ಯವಾಗದೇ ಇರಬಹುದು. ಎಲ್ಲೋ ನಾವಾಗಿಯೇ ಹೀಗೆ ಅಂತಾ ಅಳತೆ ಮಾಡಿ ಹೇಳದ ಹೊರತು, ಅವುಗಳೆಲ್ಲವೂ ಅಗಾಧವಾದ ಸ್ವಯಂ ಕುರುಹುಗಳೇ. ಹಾಗಾಗಿ ಮಾನವರಿಗೆ ನಿಸರ್ಗ ಏನು ಕೊಟ್ಟಿಲ್ಲ? ಎಂದು ಪ್ರಶ್ನೆ ಕೇಳಬೇಕಷ್ಟೆ! ಅಷ್ಟೊಂದು ಹಿತವಾದ ಸಂಗತಿಗಳು. ಇಡೀ ಮನುಕುಲದ ಅಷ್ಟೇಕೆ ಎಲ್ಲಾ ಜೀವಿ ಸಂಕುಲದ ಒಟ್ಟಾರೆ ಜವಾಬ್ದಾರಿಯನ್ನು ನಿಸರ್ಗ ತನ್ನ ಸುಪರ್ದಿನಲ್ಲಿಟ್ಟು ಪೋಷಿಸಿದೆ, ಪೋಷಿಸುತ್ತಲೇ ಇದೆ. ಪರಿಸರದ ದಿನಾಚರಣೆಗಳು ಒಂದು ನೆಪವಾಗಿ ಇಷ್ಟೆಲ್ಲಾ ಕೊಟ್ಟು ಪೋಷಿಸಿದ ನಮ್ಮ ಪರಿಸರದ ಹಿತಕ್ಕಾಗಿ ನಾವೇನು ಮಾಡಬೇಕು, ಈಗ ಪರಿಸರದ ಪರಿಸ್ಥಿತಿಯ ಸ್ಥಿತ್ಯಂತರಗಳೇನು? ಎನ್ನುವುದರ ನಿಜವಾದ ಹುಡುಕಾಟವಾಗಬೇಕು. ಆ ಬಗೆಯಲ್ಲಿ ಪರಿಸರ ದಿನವನ್ನು ಆಚರಿಸಬೇಕು. ನಾವೆಲ್ಲರೂ ಒಂದು ಬಗೆಯಲ್ಲಿ ಪರಿಸರದ ಜತೆಯಲ್ಲೇ ಇದ್ದು ಅದರ ಲಾಭದ ಪರಣಾಮವನ್ನು ಅನುಭವಿಸುತ್ತಲೇ ಇದ್ದೇವೆ. ಆದರೂ ಭುಗಿಲೇಳುವ ಕೆಲವೊಂದು ಸಂದೇಹಗಳಾಗಿ ಕಾಡುವ ಸಂಗತಿಗಳಿಗೆ ವಿಜ್ಞಾನ ಯಾವಾಗಲೂ ಕಣ್ಗಾವಲಾಗಿ, ಹಲವು ಬಾರಿ ತಿಳಿವಿನಿಂದ ವಿವರಿಸುತ್ತಲೇ ಇರುತ್ತದೆ. ಇಂತಹ ಸಂದರ್ಭಗಳು ಬರುವುದು ಯಾವಾಗ ಎಂದರೆ, ನಿಸರ್ಗದ ಸಂಪನ್ಮೂಲಗಳು ಇಳಿಮುಖವಾದಾಗ ಅನೇಕ ಬಾರಿ ಇಂತಹ ತಿಳಿವುಗಳು ಜಾಣತನವನ್ನು ರೂಡಿಸಿಕೊಳ್ಳುವ ಬಗೆಗೆ ಸಹಕಾರಿಯಾಗುತ್ತವೆ.

ಮಾನವ ಜೀವನದ ಒಳಿತಿಗಾಗಿ ಹಾಗೆಯೇ ಜತೆಗೆ ನಿಸರ್ಗದ ಅವಲಂಬನೆಗಾಗಿ ಇರುವಂತಹ ಸಾಧ್ಯತೆಗಳ ಕುರಿತು ಇಂತಹ ಚರ್ಚೆಗಳಾಗುತ್ತವೆ. ಪರಿಸರದ ಹೆಸರಲ್ಲಿ ದಿನಾಚರಣೆಯನ್ನು ಆಚರಿಸುವ ಹೊತ್ತಿನಲ್ಲಿ ಇವನ್ನೆಲ್ಲಾ ಹೇಳುವ ಮುಲಾಜಿದೆ. ಕಾರಣ ಇದೀಗ ರಸಾಯನಿಕಗಳನ್ನು ಓಕುಳಿಯಂತೆ ಸಿಂಪಡಿಸುವ ನಮ್ಮ ಪರಿಸರದಲ್ಲಿ ಈ ಬಗೆಯ ತಿಳಿವನ್ನೂ ಹೇಗೆ ಒತ್ತಾಯಪೂರ್ವಕವಾಗಿ ಅರಿತಿರಬೇಕು ಎನ್ನುವುದೂ ಇದೆ. ಕಳೆದ ಶತಮಾನದ ಪರಿಸರದ ವ್ಯವಸ್ಥೆಗಳ ಕುರಿತು ಕೆಲವೊಂದು ಅಂದಾಜುಗಳನ್ನು ಮಾಡಿದ್ದಾರೆ. ಅದರಂತೆ ನಮ್ಮಲ್ಲಿನ ಒಟ್ಟಾರೆ ಪರಿಸರದಲ್ಲಿ ಸುಮಾರು ಮೂರನೇ ಎರಡು ಭಾಗದಷ್ಟು ಸಮಸ್ಯೆಗಳನ್ನು ಎದುರಿಸುತ್ತಿವೆ. ಒಂದಲ್ಲಾ ಒಂದು ಕಾರಣಕ್ಕೆ ಕೆಳಮುಖವಾಗುತ್ತಾ ಅನಾಹುತಗಳಿಗೆ ಕಾರಣವಾಗಿವೆ. ಇವೆಲ್ಲಕ್ಕೂ ಮುಖ್ಯಕಾರಣವಾಗಿ ಮಾನವನೇ ಎಂಬುದೂ ಮತ್ತೂ ಜಾಗೃತವಾಗಬೇಕಾದ ಸಂಗತಿ. ಮನುಷ್ಯನ ಒಳಿತಿಗಾಗಿ ಪರಿಸರದ ಲಾಭಗಳಿದ್ದರೂ, ಮಾನವರೇ ತಮ್ಮ ಲಾಭದ ಮೇಲೆ ಬರೆ ಎಳೆದುಕೊಂಡಿದ್ದಾರೆ. ಆದರಿಂದ ಪರಿಸರದ ಸೇವೆಗಳನ್ನು ಗುರುತರವಾಗಿ ಪೋಷಿಸುವುದರ ಮಹತ್ವಕ್ಕೆ ಎಲ್ಲಾ ನಾಗರಿಕ ಸಮುದಾಯವು ಕೈ ಜೋಡಿಸಬೇಕಿದೆ. ಉದಾಹರಣೆಗೆ ನಮ್ಮ ಜಮೀನಿನಿಂದ ಗುಣಮಟ್ಟದ ಆಹಾರದ ಉತ್ಪಾದನೆಗೆ ಆರೋಗ್ಯಕರ ವಾತವರಣವನ್ನು ಅಪೇಕ್ಷಿಸುವ ನಾಗರಿಕ ಸಮುದಾಯವು, ರೈತರು ತಮ್ಮ ಜಮೀನಿನಿಂದ ಕಳೆದುಕೊಂಡ ಸತ್ವಗಳನ್ನು ಹಿಂದಿರುಗಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಇವುಗಳ ಒಟ್ಟಾರೆ ಆಶಯಗಳು ಆಯಾ

ಸ್ಥಳ ಮತ್ತು ಸಮಯವನ್ನು ಅವಲಂಬಿಸಿರುತ್ತವೆ. ಹೀಗೆಲ್ಲಾ ಇದ್ದೂ ಲಾಭದ ಸಂಗತಿಗಳನ್ನು ಅಳೆದು ಲೆಕ್ಕಾಚಾರದಲ್ಲಿ ಒಳಪಡಿಸಿ ಅರಿಯುವ ಅವಶ್ಯಕತೆಯಿದೆಯೇ?

ಇದಕ್ಕೆಂದು ನಾಲ್ಕು ಮುಖ್ಯವಾದ ಸಂಗತಿಗಳನ್ನು ಕೆಲವು ವೈಜ್ಞಾನಿಕ ಅಧ್ಯಯನಗಳು ಹೊರಹಾಕಿವೆ. ಪರಿಸರದ ಸೇವೆಗಳು ಮತ್ತು ಅವನ್ನು ಅನುಭವಿಸುವ ಜನಾಂಗದ ನಿರ್ಧಾರ ಕೈಗೊಳ್ಳುವ ಸ್ವಾತಂತ್ರ್ಯವು ಇಂತಹ ತಿಳಿವಿನಲ್ಲಿ ಬಹು ಮುಖ್ಯ ಎಂಬುದು ಮುಖ್ಯವಾದ ಮೊದಲ ಸಂಗತಿಯಾಗಿದೆ. ಏಕೆಂದರೆ ಪರಿಸರದ ನಿರ್ವಹಣೆಯ ವಿಚಾರದಲ್ಲಿ ಬಹಳಷ್ಟು ಬಾರಿ ಅದರ ಆಸುಪಾಸಿನ ಜನಾಂಗವು ಯಾವುದೇ ಸ್ವಾತಂತ್ರವನ್ನೂ ಪಡೆಯದಿರುವುದು. ಜತೆಗೆ ಇತ್ತೀಚೆಗೆ ಆಳುವ ವರ್ಗವು ಪೋಷಿಸುವ ನೆಪದಲ್ಲಿ ಶೋಷಿಸುವ ಸಂದರ್ಭವೂ ಹೆಚ್ಚಾಗಿ ನಿರ್ವಹಿಸುವ ಜನಾಂಗವೂ ಸಹಜವಾಗಿ ನಿರ್ಲಕ್ಷಿಸುತ್ತಿದೆ. ಎರಡನೆಯದಾಗಿ ಪರಿಸರದ ಲಾಭ ಮತ್ತು ಸೇವೆಗಳು ಇಡೀ ಜನಾಂಗದಲ್ಲಿ ಹಂಚಿಕೆಯಾಗಿರುವುದನ್ನು ಅಪೇಕ್ಷಿಸುತ್ತದೆ. ಹಾಗಾದಾಗ ಪರಿಸರದ ಲಾಭಗಳು ಎಲ್ಲರನ್ನೂ ತಲುಪಿ ಅದರ ಆಶಯವು ತಿಳಿವಿನ ಭಾಗವಾಗಲಿದೆ. ಲಾಭಗಳಲ್ಲಿ ಉರುವಲು, ಸ್ವಚ್ಛ ನೀರು, ಮುಂತಾದವುಗಳೂ ಸೇರಿವೆ. ಇವು ಎಷ್ಟು ಮುಖ್ಯ ಎಂದರೆ ಇವೆರಡೂ ದಿನೇ ದಿನೇ ಸಾಮಾನ್ಯರ ಕೈತಪ್ಪಿ ಹೋಗುವ ಸೂಚನೆಗಳನ್ನು ಕಾಣುತ್ತಿದ್ದೇವೆ. ಹಿಂದೊಂದು ದಿನ ಅಡುಗೆಗೆ ಬೇಕಾದ ಉರುವಲನ್ನು ಕಾಡಿನಿಂದ ಸುಲಭವಾಗಿ ತರಬಹುದಾಗಿದ್ದರೆ ಕಾಲಕ್ರಮೇಣ ಅದೊಂದು ಮರೆತ ಜ್ಞಾನವೇ ಆಗಿದೆ. ಸ್ವಚ್ಛ ನೀರೂ ಸಹಾ ಆಗಸದ ಕಡೆಗೇ ಮುಖಮಾಡಿ ನಿಲ್ಲುವ ಪರಿಸ್ಥಿತಿಯನ್ನು ತಂದೊಡ್ಡಿದೆ. ವಿಷಯ ಹೀಗಿರುವಾಗ ಇದರಲ್ಲಿ ಜನಾಂಗದಲ್ಲಿ ಹಂಚಿಕೆಯಾಗಬಹುದಾದ ಒಡೆತನ ಹಾಗೂ ಅವನ್ನು ತಲುಪುವ ಮಾರ್ಗಗಳು ಮತ್ತೂ ಸಂಕೀರ್ಣವಾಗುತ್ತಾ ಹೋಗುತ್ತಿವೆ.

ಮೂರನೆಯದಾಗಿ ನಿರ್ವಹಿಸಲಾಗದ ಸಮಸ್ಯೆಗಳು ಮತ್ತು ಆತಂಕಗಳ ಅರಿವಿನ ಬಗೆಗೆ ಹೇಳಲಾಗಿದೆ. ಉದಾಹರಣೆಗೆ ರೈತರ ಪರಿಸರದಲ್ಲಿಯೇ ಕೃಷಿ ವ್ಯವಸ್ಥೆಯಲ್ಲಿನ ಅಗತ್ಯವಸ್ತುಗಳ ಪೂರೈಕೆಯ ಸರಪಳಿಗಳು ಪರಿಸರದ ಸೇವೆಯನ್ನು ಅವಲಂಬಿಸಿದ್ದು, ಇವೆಲ್ಲಾ ನೇರವಾಗಿ ಪರಿಸರದ ಆತಂಕಗಳಿಂದ ಸಮಸ್ಯೆಗಳನ್ನು ಅನುಭವಿಸಲಿವೆ. ಇವುಗಳನ್ನು ರೈತ ತಾನೇ ನಿರ್ವಹಿಸಲಾರ, ಆದರೆ ನಷ್ಟವನ್ನು ಅನುಭವಿಸುವಲ್ಲಿ ಮಾತ್ರ ಆತನೇ ಪ್ರಮುಖ ಪಾತ್ರದಾರ. ಮಳೆ ಗಾಳಿ ಬರ ಇವುಗಳ ಒಟ್ಟಾರೆ ಪರಿಣಾಮಗಳು ಇದರ ಭಾಗವಾಗಿವೆ. ತನ್ನದಲ್ಲದ ಕಾರಣಕ್ಕಾಗಿ ನಷ್ಟವನ್ನು ಪಾಲುಮಾಡಿಕೊಳ್ಳಲು ಒಡೆಯನಾಗುವ ಬಗೆಗಿನ ಅರಿವು ಕೃಷಿಯಲ್ಲಿ ದಿನೇ ದಿನೇ ಸಂಕೀರ್ಣ ಸನ್ನಿವೇಶವನ್ನು ವಿಕಸಿಸುತ್ತಿದೆ. ಅದಕ್ಕೇ ಬೇಸಾಯದ ಸಹವಾಸವೇ ಬೇಡ ಎಂದು ನಗರಗಳತ್ತ ಮುಖ ಮಾಡುವ ಜನರು ಹೆಚ್ಚುತ್ತಿದ್ದಾರೆ. ಇದರ ನೈಜ ಪರಿಣಾಮ ಈ ಕ್ಷಣಕ್ಕೆ ತಿಳಿಯದಿದ್ದರೂ ಕಾಲಾಂತರದಲ್ಲಿ ಬಹುದೊಡ್ಡ ಸಮಸ್ಯೆಗೆ ಮೂಲವಾಗಬಹುದು. ನಾಲ್ಕನೆಯದಾಗಿ ಅಂತಹ ಲಾಭದ ಅಳತೆಗಳ ತಿಳಿವು ಒಟ್ಟಾರೆ ಮಾನವರ ಮತ್ತು ನಿಸರ್ಗದ ನಡುವಣ ಸಂಬಂಧಗಳನ್ನು ಅರ್ಥಪೂರ್ಣವಾಗಿ ತಿಳಿಸುವುದಾಗಿದೆ. ಆಗ ನಾವು ನಿಸರ್ಗದ ಜತೆ ಪ್ರೀತಿಯಿಂದ ವರ್ತಿಸುವ ಸಾಧ್ಯತೆಗಳಿವೆ ಎನ್ನುತ್ತವೆ ಅಧ್ಯಯನಗಳು. ಹಾಗಾಗಿ ಪರಿಸರದ ಲಾಭದ ಅಳತೆಗಳ ಲೆಕ್ಕಾಚಾರದ ಅರಿವಿನಿಂದ ಪರಿಸರದಿಂದ ಇನ್ನೂ ಹೆಚ್ಚಿನ ಅನುಕೂಲಗಳಿವೆ ಎನ್ನುತ್ತವೆ ಇಂತಹ ಅಧ್ಯಯನಗಳು. ಇದೊಂದು ರೀತಿಯಲ್ಲಿ ಲೆಕ್ಕಾಚಾರ ಹಾಕಿ ಲಾಭ ನಷ್ಟಗಳ ಅರಿವಿನಿಂದ ಬದುಕು ನಿಷ್ಕರ್ಷೆಯಾಗುವುದಲ್ಲ. ಆದರೆ ಲಾಭದ ಅಳತೆಗೋಲಿನಿಂದ ನಿಸರ್ಗದ ಮೇಲಿನ ಪ್ರೀತಿ ಹಾಗೂ ಅದನ್ನು ನಿಭಾಯಿಸುವ ಜವಾಬ್ದಾರಿ ಹೆಚ್ಚಾಗುತ್ತದೆ, ಎನ್ನುವುದು ಇವೆಲ್ಲವುಗಳ ಚರ್ಚಿಸುವ ವಿದ್ವಾಂಸರ ಉದ್ದೇಶ.

ಸರಳವಾಗಿ ಪರಿಸರದ ಲಾಭದ ಸಂಗತಿಗಳನ್ನು ಹಿರಿದು ಮಾಡಿ ಹೊಗಳುವ ಸಂಸ್ಕೃತಿಯಿಂದ ಹೊರ ಬಂದು ಇದನ್ನು ನಿಖರವಾಗಿ ಹೇಳಲು ಸಾಧ್ಯವೆಂಬಂತೆ ಅಧ್ಯಯನಗಳು ಹೇಳಿವೆ. ಏಕೆಂದರೆ ಹಲವು ಬಾರಿ ನಮ್ಮ ಪರಿಸರದ ಪ್ರೀತಿಯನ್ನು ಹಾಡಿ ಹೊಗಳಿ ಅಟ್ಟಕ್ಕೇರಿಸಿ ಭಾವನಾತ್ಮಕ ಮಾತುಗಳಲ್ಲಿ ಕಳೆದು ಹೋಗುವುದೇ ಹೆಚ್ಚು. ಮುಖ್ಯವಾಗಿ ಎಲ್ಲಾ ಜನಾಂಗಗಳೂ ಪರಿಸರದ ಲಾಭದ ವ್ಯವಸ್ಥಿತ ಅರಿವಿನ ಭಾಗವಾಗುವಂತಾಗಿ ಅದರ ನಿರ್ವಹಣೆಯನ್ನು ಎಲ್ಲಾ ಸಮುದಾಯವೂ ಮಾಡುವಂತಾದರೆ ನಿಸರ್ಗದ ವ್ಯವಸ್ಥಿತವಾದ ನಿರಂತರತೆಗೆ ಸಹಕಾರಿಯಾಗುತ್ತದೆ.

ಪರಿಸರದ ಲಾಭವನ್ನು ಅರಿವಿನಲ್ಲಿಟ್ಟು ನಮ್ಮ ನೈಸರ್ಗಿಕ ಸಂಪನ್ಮೂಲಗಳಿಂದ ಮಾನವರ ಆಸೆ ಮತ್ತು ಅಗತ್ಯ ಎರಡನ್ನೂ ನಿಭಾಯಿಸಬೇಕಿದೆ. ಏಕೆಂದರೆ ಈ ಸಂಪನ್ಮೂಲಗಳೂ ಸಹಾ ಎಲ್ಲೆಡೆ ಒಂದೇ ಸಮನಾಗಿಲ್ಲ. ಆದ್ದರಿಂದ ಲಾಭದ ಅಳತೆಗಳನ್ನು ಕಂಡುಕೊಂಡು ನಿಭಾಯಿಸುವುದರಿಂದ ಹೆಚ್ಚಿನ ನೆಮ್ಮದಿಯನ್ನು ಪಡೆಯ ಬಹುದಾಗಿದೆ. ಈಗಿರುವ ಸಂದರ್ಭದಲ್ಲಿ ಆಸೆ ಮತ್ತು ಅಗತ್ಯಗಳ ನಡುವಣ ವ್ಯತ್ಯಾಸಗಳೇ ನಮ್ಮ ನಾಗರೀಕತೆಗೆ ತಿಳಿಯಲಾರದಾಗಿದೆ. ಇವೇ ಇಂತಹ ಪರಿಸ್ಥಿತಿಯನ್ನು ತಂದೊಡ್ಡಿರುವುದರಲ್ಲಿ ಆಶ್ಚರ್ಯವಿಲ್ಲ. ಇದರೊಳಗಿನ ಒಟ್ಟಾರೆ ಪರಿಸರವೂ ಸಂಪನ್ಮೂಲಗಳ ವೈವಿಧ್ಯತೆಯನ್ನು ಸೃಜಿಸಿವೆ. ಸಂಪನ್ಮೂಲಗಳೇ ಆಸೆ, ಆ ಮೂಲಕ ಅಭಿವೃದ್ಧಿಯ ಕನಸುಗಳ ಕಾಣಲು ಪ್ರೇರೇಪಿಸಿದೆ.

"ನಮ್ಮ ಮಿತಿಗಳನ್ನು ದಾಟುವುದು ಮಾನವನ ವಿಶೇಷ, ಇದು ಮಾನವನಿಗೊಬ್ಬನಿಗೆ ಇರುವ ಜಾಣತನ, ಇದೇ ಆತನನ್ನು ಅನನ್ಯನನ್ನಾಗಿಸಿದೆ" ಎಂದು ಖ್ಯಾತ ವಿಜ್ಞಾನಿ ಸ್ಟೀಫನ್ ಹಾಕಿಂಗ್ ಮಾನವಕುಲದ ಬಗ್ಗೆ ಹೇಳುತ್ತಿದ್ದರು. ಮಿತಿಯನ್ನು ದಾಟುವ ವಿಚಾರದಲ್ಲಿ ನಮಗೇನು ಸಾಧ್ಯ ಅನ್ನುವುದರ ಅನುಮಾನವನ್ನು ತೊಡೆದು ಹಾಕುವುದೇ ಆಗಿದೆ. "ಅಯ್ಯೋ, ಅದಾದೀತೇ?" ಎನ್ನುವುದಕ್ಕೆ ಅದೂ ಸಾಧ್ಯ ಎಂಬುದರಲ್ಲಿ ಇದರ ವಿವರಗಳಿವೆ. ಇದನ್ನು ನಮ್ಮ ಸುತ್ತಲಿನ ಪರಿಸರದ ಹಿತದಲ್ಲಿ ಆಗಬಾರದನ್ನು ತಡೆಯುವುದರಲ್ಲಿ ಬಳಸುವ ಉದಾಹರಣೆಗಳು ಜಾಗತಿಕವಾಗಿ – ಸ್ಥಳೀಯವಾಗಿ ಸಾಕಷ್ಟು ಸಿಗುತ್ತವೆ. ಆದರೆ ಮಾನವಕುಲದ ಒಟ್ಟಾರೆ ಉದ್ದೇಶಗಳೇ ತತ್‌ಕ್ಷಣದ ಲಾಭದ ಹಿನ್ನೆಲೆಯಲ್ಲಿ ಹಾಗೂ ತೀರಾ ಸ್ವಾರ್ಥದ ಹಿತದಲ್ಲಿ ಸ್ಥಾಪಿತವಾಗಿವೆ. ಇದನ್ನು ಪ್ರತಿಷ್ಠಾಪಿಸಲು ಸಾಕಷ್ಟು ಸೈದ್ಧಾಂತಿಕ ಚರ್ಚೆಗಳು, ತರ್ಕಗಳು ಬೇಕಾದಷ್ಟು ಇವೆ. ಈ ನಮ್ಮ ಸ್ವಂತ ಹಿತಾಸಕ್ತಿಯ ಆಸೆಯ ಮಿತಿಯನ್ನೂ ದಾಟುವ ಸಾಧ್ಯತೆಗಳಲ್ಲದಿದ್ದರೂ, ಒಟ್ಟಾರೆ ಸಂದರ್ಭದ ಹಿತವನ್ನೂ ನೋಡಲಾಗದ ಕ್ಷಣಗಳನ್ನು ಕಾಣುತ್ತೇವೆ.

ಈ ಭೂಮಿಯ ನೆಲೆಯನ್ನು ಜೈವಿಕವಾಗಿ ಸುಂದರವಾಗಿಸಿರುವ ಆಯಾಮಗಳು ಸುಮ್ಮನೆ ಬಂದುವೇನಲ್ಲ. ಅದಕ್ಕಾಗಿ ಇಡೀ ನಿಸರ್ಗವು ಸಾಕಷ್ಟು ವಿಕಾಸದ ಸಂಘರ್ಷ ಹಾಗೂ ಸಹಚರ್ಯದ ಆಟೋಟಗಳನ್ನು ನಡೆಸಿದೆ. ಜೀವಿಕುಲದ ವಿಕಾಸದಾಟದ ತುದಿಯಲ್ಲಿ ಪ್ರತಿಷ್ಠಾಪಿತವಾಗಿರುವ ಮನುಕುಲಕ್ಕೆ ಹಿಂದಿನ ಅನುಭವಗಳ ಅರಿವು ಇಲ್ಲ. ಇದ್ದರೂ ತನ್ನ ಬದುಕಿನ ಕಾಲದ ಮಿತಿಯಲ್ಲೇ ಆಲೋಚಿಸುವ ಪರಿಪಾಠವನ್ನು ಅದು ರೂಢಿಸಿಕೊಂಡಿದೆ.

ಪರಿಸರದ ಬಳಕೆ ಹಾಗೂ ನಿರ್ವಹಣೆಯ ಕುರಿತು ಒಂದು ಮಾತಿದೆ. "ಮೊದಲ ಮರವನ್ನು ಕಡಿವ ಮೂಲಕ ನಾಗರಿಕತೆಯ ಆರಂಭವಾಯಿತು, ಹಾಗೆಯೇ ಕೊನೆ ಮರ ಕಡಿಯುವುದರೊಂದಿಗೆ ನಾಗರಿಕತೆಯ ಕೊನೆಯಾಗುವುದು' ಲಾಭದ ಅಳತೆಗೋಲು ಮರಗಳನ್ನು ಕಡಿದು ಬಳಸುವ ಹಿತದಿಂದ ನೋಡುವಂತೆ ಇರಬಾರದು. ಅದರ ಒಟ್ಟಾರೆ ಹಿತದಿಂದ ಜೀವಜಗತ್ತು ಕಾಣುವ ಕನಸಿನ ಪ್ರೇರಣೆಯಲ್ಲಿ ಬೆಳಗಬೇಕು.●

ಜರ್ಮನಿಯಲ್ಲಿ ಪರಿಸರ ಸಂರಕ್ಷಣೆ

– ಡಾ. ಸುಕನ್ಯಾ ಸೂನಗಹಳ್ಳಿ
ನೈರೊಬಿ, ಆಫ್ರಿಕಾ.

ನಿಸರ್ಗದ ಜೊತೆ ಸಾಮಾನ್ಯ ಜೀವಿಯಂತೆ ಬೆರೆತು ಬಾಳಬೇಕಾದ ಮಾನವ ಅಭಿವೃದ್ಧಿ ಎನ್ನುವ ಮಾನದಂಡದಿಂದ ಸಂಪೂರ್ಣ ಕುರುಡನಾಗಿದ್ದಾನೆ. ಆಧುನಿಕ ಜಗತ್ತಿನಲ್ಲಿ ತಂತ್ರಜ್ಞಾನದ ದೆಸೆಯಿಂದ ಮಾನವನ ಜೀವನ ಹಾಗೂ ಚಟುವಟಿಕೆಗಳು ಅತ್ಯಂತ ಸಂಕೀರ್ಣವಾಗಿವೆ. ವಿಜ್ಞಾನ ತಂತ್ರಜ್ಞಾನ ಏನಿದ್ದರೇನು ಪ್ರಯೋಜನ? ಮಾನವನಿಗೆ ಮೊದಲು ಬೇಕು ಪರಿಸರ ಉಳಿಸುವ ಜ್ಞಾನ. ಮನುಷ್ಯ ತನ್ನ ಜೀವನ ಸೌಕರ್ಯದ ಅತಿಲಾಲಸೆಗಾಗಿ ಪರಿಸರವನ್ನು ಕೆಟ್ಟದಾಗಿ ಬಳಸಿಕೊಳ್ಳುತ್ತಿರುವ ಧಾವಂತದಲ್ಲಿ ಮಾಲಿನ್ಯದ ಪರಿಣಾಮಗಳನ್ನೇ ಮರೆತುಬಿಟ್ಟಿದ್ದಾನೆ. ನಮ್ಮ ಪರಿಸರದ ಒಳಕ್ಕೆ ಹಲವಾರು ಹಾನಿಕಾರಕ ಅಂಶಗಳನ್ನು ಅಥವಾ ಅನಾರೋಗ್ಯಕರ ಅಂಶಗಳನ್ನು ಸೇರಿಸಿ ಮಹತ್ತರ ಬದಲಾವಣೆಯನ್ನು ಉಂಟುಮಾಡುತ್ತಿದ್ದಾನೆ. ಹೀಗೆ ಪರಿಸರದ ಭೌತಿಕ, ರಾಸಾಯನಿಕ ಹಾಗೂ ಜೈವಿಕ ಲಕ್ಷಣಗಳ ಮೇಲೆ ಪರಿಣಾಮ ಬೀರುತ್ತಿರುವ ಯಾವುದೇ ಅನಪೇಕ್ಷಿತ ಬದಲಾವಣೆಗಳಿಗೆ ನಾವು ಪರಿಸರ ಮಾಲಿನ್ಯ ಎಂದು ಹೇಳಬಹುದು.

ಪರಿಸರವನ್ನು ಬೆಳೆಸಿ ಸಂರಕ್ಷಿಸಬೇಕಾದ ಮಾನವ, ಪರಿಸರವನ್ನು ನಾಶಮಾಡುವುದರ ಜೊತೆಗೆ ಮಾಲಿನ್ಯ ಮಾಡುತ್ತಿದ್ದು ಇದರಿಂದಾಗಿ ಕೆಲವು ಜೀವ ಸಂಕುಲಗಳು ನಾಶವಾಗುತ್ತಿವೆ. ಇದರ ಪ್ರತಿಫಲ ಮನುಷ್ಯನಿಗೂ ತಟ್ಟಿದೆ. ಇದಕ್ಕೆ ಒಂದು ಸ್ಪಷ್ಟವಾದ ಉದಾಹರಣೆಯೆಂದರೆ, ೧೯೮೪ ರಲ್ಲಿ ಮಧ್ಯಪ್ರದೇಶದ ಭೂಪಾಲ್ ನಲ್ಲಿ ಸಂಭವಿಸಿದ ವಿಷಾನಿಲ ಸೋರಿಕೆ. ಇದರಿಂದಾಗಿ, ಸಾವಿರಾರು ಜನರು ಮರಣ ಹೊಂದಿರುವ ಘಟನೆ ನಮ್ಮ ಕಣ್ಣ ಮುಂದಿದ್ದರೂ ಎಚ್ಚೆತ್ತುಕೊಳ್ಳದ ಮನುಷ್ಯಕುಲ ಸಕಲ ಜೀವರಾಶಿಗಳ ಮಾರಣಹೋಮಕ್ಕೆ ಕಡಿವಾಣ ಹಾಕದಿದ್ದರೆ, ಮನುಷ್ಯ ಮುಂದೊಂದು ದಿನ ಇತರೆ ಜೀವಿಗಳಂತೆ ಅವನತಿ ಹೊಂದುವುದು ಖಂಡಿತ.

ಚೀನಾದ ರಾಜಧಾನಿ ಬೀಜಿಂಗ್, ನಮ್ಮ ದೇಶದ ರಾಜಧಾನಿ ದೆಹಲಿ ಸೇರಿದಂತೆ ಅನೇಕ ನಗರಗಳು ವಾಯುಮಾಲಿನ್ಯಕ್ಕೆ ಕೊಡಬಹುದಾದ ಉತ್ತಮ ಉದಾಹರಣೆ. ವಾಯುಮಾಲಿನ್ಯ ಎನ್ನುವುದು ಅತ್ಯಂತ ಭಯಾನಕ ರೀತಿಯ ಮಾಲಿನ್ಯ. ವಾಹನಗಳು, ಕಾರ್ಖಾನೆಗಳು, ಉಷ್ಣ ವಿದ್ಯುತ್ ಸ್ಥಾವರಗಳು, ಉಗುಳುವ ತ್ಯಾಜ್ಯ ಅನಿಲಗಳು, ಸ್ಥಳೀಯ ದಹಿಸುವಿಕೆ, ಲೋಹದ ಧೂಳು ಇತ್ಯಾದಿ ಪ್ರಮುಖ ಆಕರಗಳು. ಎರಡನೇ ಮಹಾಯುದ್ಧದ ನಂತರದಲ್ಲಿ ಮಾಲಿನ್ಯವು ಹೆಚ್ಚಿನ ಚರ್ಚೆಯ ವಿಷಯವಾಯಿತು. ಅಣುಯುದ್ಧದ ಹಾಗೂ ಅಣುಪರೀಕ್ಷೆಯ ನಂತರದಲ್ಲಿ ವಿಕಿರಣಗಳ ವಿಸರ್ಜನೆಯಿಂದ ಉಂಟಾದ ತೊಂದರೆಗಳಿಂದ ಅಪಾಯವು ಹೆಚ್ಚು ನಿಚ್ಚಳವಾಯ್ತು. ೧೯೫೨ ರ ಲಂಡನ್ನಿನ ದಟ್ಟ ಧೂಮದಿಂದಾಗಿ (ಗ್ರೇಟ್ ಸ್ಮಾಗ್) ಸುಮಾರು ೮೦೦೦ ಜನರು ಸಾವಿಗೀಡಾದರು. ಇದು ವಾಯುಮಾಲಿನ್ಯದ ಭೀಕರತೆಗೆ ಒಂದು ಉದಾಹರಣೆ. ಈ ಘಟನೆಯಿಂದಾಗಿ ಪ್ರಬಲ ಆಧುನಿಕ ಪರಿಸರ ಕಾನೂನು ೧೯೫೬ ರ "ದಿ ಕ್ಲೀನ್ ಏರ್ ಆಕ್ಟ್" ಕಾರ್ಯ ಪ್ರವೃತ್ತವಾಯಿತು.

ಇತ್ತೀಚಿನ ದಿನಗಳಲ್ಲಿ ನಾವು ಆಮ್ಲ ಮಳೆ, ಭೂತಾಪದ ಏರಿಕೆ, ಓಜೋನ್ ಪದರದ ನಾಶ ಹಾಗೂ ಹವಾಮಾನ ಬದಲಾವಣೆ ಮುಂತಾದ ಜಾಗತಿಕ ಪರಿಸರ ಸಮಸ್ಯೆಗಳ ಬಗ್ಗೆ ಕೇಳುತ್ತಿದ್ದೇವೆ.

ಇಂಥ ಎಲ್ಲಾ ಸಮಸ್ಯೆಗಳು ವಾಯುಮಾಲಿನ್ಯದ ದೂರಗಾಮಿ ಪರಿಣಾಮಗಳು. ನಾವು ಕಲ್ಲಿದ್ದಲು, ಡೀಸೆಲ್, ಪೆಟ್ರೋಲ್ ಗಳನ್ನು ಇಂಧನವಾಗಿ ಕೈಗಾರಿಕೆಗಳು, ರೈಲು, ಕುಲುಮೆಗಳು, ವಾಹನಗಳಲ್ಲಿ ಬಳಸುತ್ತೇವೆ. ಇವುಗಳ ದಹನದಿಂದ ಸಲ್ಫರ್ ಡೈ ಆಕ್ಸೈಡ್, ನೈಟ್ರೋಜನ್ ಆಕ್ಸೈಡ್ಗಳು ಹಾಗೂ ಕೆಲವೊಮ್ಮೆ ಸೀಸದ ಆವಿ ಕೂಡ ಬಿಡುಗಡೆಯಾಗುತ್ತದೆ. ತಂಬಾಕು ಸೇವನೆಯು ಆರೋಗ್ಯಕ್ಕೆ ಹಾನಿಕಾರಕವಾಗುವುದರ ಜೊತೆಗೆ ಸಿಗರೇಟಿನ ಹೊಗೆಯಲ್ಲಿ ಅತಿ ಹೆಚ್ಚು ಪ್ರಮಾಣ ಕಾರ್ಬನ್ ಮಾನಾಕ್ಸೈಡ್ ಇರುವುದರಿಂದ ವಾಯುಮಾಲಿನ್ಯಕ್ಕೂ ಕಾರಣವಾಗಿದೆ. ಇವುಗಳು ಪರಿಸರದಲ್ಲೇ ದೀರ್ಘಕಾಲ ಉಳಿದು ಜೀವಿಗಳ ಅಪಾಯಕ್ಕೆ ಕಾರಣವಾಗುತ್ತವೆ.

ಸಲ್ಫರ್ ಆಕ್ಸೈಡ್‌ನ ಕಣಗಳಿಂದ, ಶ್ವಾಸನಾಳ ಸಂಬಂಧಿ ಕಾಯಿಲೆಗಳು ಬರುತ್ತವೆ. ಕಾರ್ಬನ್ ಮಾನಾಕ್ಸೈಡ್ ನಿಂದ ಉಸಿರುಗಟ್ಟಿವಿಕೆ ಹಾಗೂ ಹೃದಯ ಮತ್ತು ನರಮಂಡಲಗಳಿಗೆ ಹಾನಿ ಮತ್ತು ಸಾವು ಸಂಭವಿಸುತ್ತದೆ. ನೈಟ್ರೋಜನ್ ಆಕ್ಸೈಡ್ ಗಳಿಂದ ಉಸಿರಾಟದ ರೋಗಗಳು ಬರುತ್ತವೆ. ಸುಗಂಧಿತ ಬಹುಚಕ್ರೀಯ ಹೈಡ್ರೋಕಾರ್ಬನ್ ಗಳಿಂದ ಶ್ವಾಸಕೋಶದ ಕ್ಯಾನ್ಸರ್ ಹೀಗೆ ಹಲವಾರು ರೀತಿಯಲ್ಲಿ ಮಾನವನ ಮೇಲೆ ಪರಿಣಾಮ ಬೀರುತ್ತದೆ. ಪ್ರಸ್ತುತ ಸಂದರ್ಭದಲ್ಲಿ, ಹೃದಯಾಘಾತದ ಎದೆನೋವಿನ ಪ್ರಮಾಣಕ್ಕಿಂತಲೂ ಶ್ವಾಸನಾಳದ ದೀರ್ಘಕಾಲಿಕ ಅಡಚಣೆಯ ಕಾಯಿಲೆಯ ಅಪಾಯವು ಇತ್ತೀಚೆಗೆ ಹೆಚ್ಚಾಗುತ್ತಿದೆ. ಶ್ವಾಸ ಸಂಬಂಧಿ ಕಾಯಿಲೆಗಳಾದ ಅಸ್ತಮಾ, ಅಲರ್ಜಿ, ಉರಿಯೂತ ಪ್ರಮಾಣವು ಗಣನೀಯವಾಗಿ ಹೆಚ್ಚುತ್ತಿದೆ ಎಂದು ಅಧ್ಯಯನಗಳು ಹೇಳುತ್ತಿವೆ. ವಾಯುಮಾಲಿನ್ಯದ ಕಾರಣದಿಂದಾಗಿ ದೇಹದ ಇತರ ವ್ಯವಸ್ಥೆಗಳಾದ ಹೃದಯದ ರಕ್ತನಾಳ, ಪ್ರಜನನ ಹಾಗೂ ಮೂತ್ರ ವಿಸರ್ಜನಾಂಗ ವ್ಯವಸ್ಥೆ, ನರಸ್ನಾಯು ವ್ಯವಸ್ಥೆ ಹಾಗೂ ಕೇಂದ್ರೀಯ ನರವ್ಯೂಹದ ಮೇಲೆ ವಾಯುಮಾಲಿನ್ಯದಿಂದಾಗಿ ಬಹಳಷ್ಟು ಕೆಟ್ಟ ಪರಿಣಾಮಗಳು ಉಂಟಾಗುತ್ತಿವೆ.

ಇಂತಹ ದುಷ್ಪರಿಣಾಮಗಳನ್ನು ತಡೆಗಟ್ಟಬೇಕಾದರೆ ಪರಿಸರ ಸ್ನೇಹಿ ಯೋಜನೆಗಳನ್ನು ಬಳಸುವುದು ತೀರಾ ಅತ್ಯಾವಶ್ಯಕ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಜರ್ಮನಿ. ಈ ದೇಶದಲ್ಲಿ ಸುಮಾರು ಐದು ವರ್ಷಗಳ ಕಾಲ ನಾನು ವಾಸವಾಗಿದ್ದೆ. ಜರ್ಮನಿ ಎಂದೊಡನೆ ನಮಗೆ ನೆನಪಾಗುವುದು ಅತ್ಯಂತ ಹೆಚ್ಚು ಕೈಗಾರಿಕೆಗಳಿರುವ ಒಂದು ಯುರೋಪಿಯನ್ ದೇಶ. ಹೀಗಾಗಿ ವಿದ್ಯುತ್ ಬಳಕೆಯಲ್ಲಿ ಆ ದೇಶ ಮುಂಚೂಣಿಯಲ್ಲಿರುವುದು ಸಹಜ. ಇತ್ತೀಚಿಗೆ ಗಾಳಿ ಮತ್ತು ಸೂರ್ಯನ ತಾಪದಿಂದಲೇ ಅಗತ್ಯವಾದಷ್ಟು ವಿದ್ಯುತ್ ಉತ್ಪಾದಿಸುವಲ್ಲಿ ಯಶಸ್ಸು ಕಾಣುತ್ತಿದೆ. ನವೀಕರಣಗೊಳ್ಳಬಲ್ಲ ಮೂಲಗಳಿಂದ ಯಶಸ್ವಿಯಾಗಿ ಜರ್ಮನಿ ವಿದ್ಯುತ್ ಉತ್ಪಾದಿಸಿದೆ. ೨೦೧೦ ರಲ್ಲಿ ಅಲ್ಲಿನ ಸರ್ಕಾರ ಹಮ್ಮಿಕೊಂಡ 'ಎನರ್ಜಿವೆಂಟ್' ಎಂಬ ಮಹತ್ತರ ಯೋಜನೆಯ ಮೊದಲ ಆದ್ಯತೆ ಪೆಟ್ರೋಲಿಯಂ ಆಧಾರಿತ ಇಂಧನದ ಬಳಕೆಯನ್ನು ಕಡಿಮೆ ಮಾಡಬೇಕು. ಆ ಮೂಲಕ ಜಾಗತಿಕ ತಾಪಮಾನ ಏರಿಕೆಗೆ ಕಾರಣವಾದ ಹಸಿರುಮನೆ ಅನಿಲಗಳ ಉತ್ಪತ್ತಿಯನ್ನು ಗಣನೀಯವಾಗಿ ಇಳಿಯಬೇಕು. ಹಸಿರು ಅನಿಲಗಳ ಉತ್ಪಾದನೆ ೨೦೨೦ ರ ವೇಳೆಗೆ ಪ್ರತಿಶತ೪೦ ರಷ್ಟು ಕಡಿಮೆ ಆಗಬೇಕು. ೨೦೫೦ ರ ಹೊತ್ತಿಗೆ ಆ ಇಳಿಕೆ ಪ್ರತಿಶತ ೮೦ ರಷ್ಟು ಕಡಿಮೆ ಆಗಬೇಕು. ಜರ್ಮನಿಯಲ್ಲಿರುವ ಕೆಲವು ಪರಮಾಣು ವಿದ್ಯುತ್ ಸ್ಥಾವರಗಳನ್ನು ಮುಚ್ಚಿ ಕಡಲ ತೀರಗಳಲ್ಲಿ ಇಂಥ ಗಾಳಿ ವಿದ್ಯುತ್ ಯಂತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಲಾಗಿದೆ. ಸೌರಶಕ್ತಿಯನ್ನು ಬಳಸಿ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೂ ಆದ್ಯತೆ ಸಿಗುತ್ತದೆ.

ನಮ್ಮ ದೇಶದಲ್ಲಿ ಮಾಲಿನ್ಯ ಸ್ಥಿತಿ ಗಂಭೀರವಾಗುತ್ತಿರುವಂತೆ ಅತ್ತ ಜರ್ಮನಿಯಲ್ಲಿ ಪರಿಸರ ಸ್ನೇಹಿ ಜಲಜನಕ ಚಾಲಿತ ರೈಲನ್ನು ಹಳಿಗೆ ಇಳಿಸಲು ಅಲ್ಲಿನ ಸರ್ಕಾರ ತೀರ್ಮಾನಿಸಿದೆ. ೨೦೧೮

ರ ಡಿಸೆಂಬರ್ ಹೊತ್ತಿಗೆ ಹಳಿಗೆ ಇಳಿಯಲಿರುವ ರೈಲಿನ ಮಾದರಿಯನ್ನು ೨೦೧೬ ಸೆಪ್ಟೆಂಬರ್‌ರಲ್ಲಿ ನಡೆದ ಇನ್ನೋಟ್ರಾನ್ಸ್ ಟ್ರೇಡ್ ಶೋನಲ್ಲಿ ಪ್ರದರ್ಶನಕ್ಕೆ ಇರಿಸಿತ್ತು. ಈ ರೈಲಿಗೆ ಕೊರಾಡಿಯಾ ಐಲಿಂಟ್ ಎಂದು ಹೆಸರಿಸಿದ್ದು, ಇದನ್ನು ಡೀಸೆಲ್ ಎಂಜಿನ್ ರೈಲಿಗೆ ಪರ್ಯಾಯವಾಗಿ ಬಳಸಬಹುದೆಂಬ ತೀರ್ಮಾನಕ್ಕೆ ಬರಲಾಗಿದೆ. ಪರಿಸರಕ್ಕೆ ಹೊರಸೂಸುವ ಹೊಗೆಯ ಪ್ರಮಾಣ ಕಡಿಮೆಯಾಗುತ್ತದೆ ಎಂಬುದು ಇದಕ್ಕೆ ಕಾರಣ. ಜಲಜನಕದ ಇಂಧನ ಕೋಶದಿಂದಲೇ ರೈಲಿಗೆ ಬೇಕಾದ ವಿದ್ಯುತ್ ಉತ್ಪಾದನೆಯಾಗಿ, ಅದು ಬ್ಯಾಟರಿಗಳಲ್ಲಿ ಸಂಗ್ರಹವಾಗುತ್ತದೆ. ಇದರ ಇಂಧನ ಶಕ್ತಿ ನಿರ್ವಾಹಣೆಯು ಅತ್ಯುತ್ತಮವಾಗಿದ್ದು, ಶೇಕಡಾ ೧೦೦ ರಷ್ಟು ಮಾಲಿನ್ಯ ರಹಿತವಾದ ತಂತ್ರಜ್ಞಾನದಿಂದ ಕೂಡಿದ್ದಾಗಿದೆ. ಹೀಗಾಗಿಯೇ ಕೊರಾಡಿಯಾ ಐಲಿಂಟ್ ವಿಶೇಷ ಮಹತ್ವ ಪಡೆದುಕೊಂಡಿದೆ. ಇಂಧನ ಕೋಶ ಇಲ್ಲಿ ಆಮ್ಲಜನಕವು ಜಲಜನಕದ ಜೊತೆಗೆ ರಾಸಾಯನಿಕ ಕ್ರಿಯೆ ಜರಗಿ ವಿದ್ಯುತ್ ಉತ್ಪಾದನೆಯಾಗುತ್ತದೆ. ಹೊರ ಸೂಸುವಂಥದ್ದು ನೀರು ಮತ್ತು ಉಗಿ ಮಾತ್ರ. ಹೊಗೆ ಇಲ್ಲವೇ ಇಲ್ಲ. ಈ ಕ್ರಿಯೆ ನಡೆಯುತ್ತಿರುವ ಸಂಧರ್ಭದಲ್ಲಿ ಇಂಧನ ಲೋಹಗಳು ಮೋಟಾರ್ಸ್ ಶಕ್ತಿಯನ್ನು ವರ್ಧಿಸುವುದಲ್ಲದೇ, ವಿದ್ಯುತ್ ಶಕ್ತಿ ಬ್ಯಾಟರಿಗಳಲ್ಲಿ ಸಂಗ್ರಹವಾಗುವುದರ ಜೊತೆಗೆ ರೈಲಿನಲ್ಲಿ ಬಳಕೆಯಲ್ಲಿರುವ ಇತರೆ ವಿದ್ಯುತ್ ಉಪಕರಣಗಳಿಗೂ ಪೂರೈಕೆಯಾಗುತ್ತದೆ.

ಜರ್ಮನಿಯಲ್ಲಿ ವಿದ್ಯುತ್ ಚಾಲಿತ ರೈಲುಗಳು ಬಳಕೆಯಲ್ಲಿವೆ. ಜರ್ಮನಿಯಲ್ಲಿ ರೈಲುಗಳು ವಿದ್ಯುತ್ ಸಹಾಯದಿಂದ ಚಲಿಸುತ್ತವೆ. ಒಳ್ಳೆಯ ಸಾರಿಗೆ ವ್ಯವಸ್ಥೆ, ಸುವ್ಯವಸ್ಥಿತವಾದ ರಸ್ತೆ ಮತ್ತು ರೈಲ್ವೆ ಟ್ರ್ಯಾಕ್‌ಗಳ ನಿರ್ಮಾಣವಾಗಿರುವುದರಿಂದ, ಅಲ್ಲಿನ ಜನರು ತಮ್ಮ ಸ್ವಂತ ವಾಹನಗಳ ಬಳಕೆಯನ್ನು ಬಿಟ್ಟು ಸಾರ್ವಜನಿಕ ಸಾರಿಗೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಳಸುತ್ತಾರೆ. ಹಾಗಾಗಿ, ಪೆಟ್ರೋಲ್ ಮತ್ತು ಡೀಸೆಲ್ ನ ಬಳಕೆ ತಗ್ಗಿ, ವಾಯುಮಾಲಿನ್ಯ ತೀರಾ ಕಡಿಮೆ ಪ್ರಮಾಣದಲ್ಲಿದೆ. ನಮ್ಮ ದೇಶಕ್ಕೆ ಹೋಲಿಸಿದರೆ, ಅಲ್ಲಿನ ಜನರಲ್ಲಿ ಹೃದಯ ಸಂಬಂಧಿ, ಶ್ವಾಸಕೋಶ ಕಾಯಿಲೆಗಳು ತೀರಾ ವಿರಳ ಎಂದು ಹೇಳಬಹುದು.

ಈಗಾಗಲೇ ಜಾಗತಿಕವಾಗಿ ಪೆಟ್ರೋಲ್ ಮತ್ತು ಡೀಸೆಲ್ ಕಾರುಗಳ ನಿಷೇಧ ಕುರಿತಂತೆ ಮಹತ್ವದ ಚರ್ಚೆಗಳು ನಡೆದಿದ್ದು, ೨೦೨೫ ಕ್ಕೆ ನೆದರ್ಲ್ಯಾಂಡ್, ೨೦೩೦ ಕ್ಕೆ ಜರ್ಮನಿ ಮತ್ತು ಫ್ರಾನ್ಸ್ ೨೦೪೦ ಕ್ಕೆ ಪೂರ್ಣ ಪ್ರಮಾಣದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಕಾರುಗಳನ್ನು ನಿಷೇಧ ಮಾಡಲಿವೆ. ಇನ್ನು ವಿಶ್ವದ ಪ್ರಮುಖ ರಾಷ್ಟಗಳು ಕೂಡಾ ಮಾಲಿನ್ಯ ತಡೆ ಕುರಿತಂತೆ ಹೊಸ ಹೊಸ ಯೋಜನೆಗಳು ರೂಪಗೊಳ್ಳುತ್ತಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಕಾರುಗಳ ಬೇಡಿಕೆ ತಗ್ಗಿಸಿ ಎಲೆಕ್ಟ್ರಿಕ್ ಕಾರುಗಳ ಬಳಕೆಗೆ ಹೆಚ್ಚಿನ ಒಲವು ತೋರುವಂತೆ ಉತ್ತೇಜನ ನೀಡಲಾಗುತ್ತಿದೆ. ಕಾರ್ಬನ್ ಡೈ ಆಕ್ಸೈಡ್ ದ್ಯುತಿಸಂಶ್ಲೇಷಣೆ ಅಗತ್ಯವಾದರೂ ಕೆಲವೊಮ್ಮೆ ಅದು ಮಾಲಿನ್ಯವನ್ನು ನಿರ್ಧರಿಸುತ್ತದೆ. ಏಕೆಂದರೆ, ವಾತಾವರಣದಲ್ಲಿ ಏರಿಕೆಯಾದ ಅನಿಲ ಪ್ರಮಾಣವು ಭೂಪರಿಸರದ ಮೇಲೆ ಪ್ರಭಾವ ಬೀರುತ್ತಲೇ ಇರುತ್ತದೆ. ದೀರ್ಘಾವಧಿಯಲ್ಲಿ ಹೆಚ್ಚಾಗುತ್ತಿರುವ ನೈಸರ್ಗಿಕ ಕಾರ್ಬನ್ ಡೈ ಆಕ್ಸೈಡ್ ಮಟ್ಟವೂ ಲಘು ಕಾರಣವಾದರೂ ಸಮುದ್ರ ನೀರಿನ ಆಮ್ಲತೆಯ ಹೆಚ್ಚಳ ತೀವ್ರವಾಗಿದೆ. ಇದು ಕಡಲಿಗೆ ಸಂಬಂಧಿಸಿದ ಪರಿಸರ ವ್ಯವಸ್ಥೆಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆಯಿದೆ ಎಂದು ಇತ್ತೀಚಿನ ಅಧ್ಯಯನಗಳು ಪತ್ತೆ ಹಚ್ಚಿವೆ.

ನಮ್ಮ ದೇಶದಲ್ಲಿ ಈಗಿನ ನಮ್ಮ ಮುನಿಸಿಪಾಲಿಟಿ ಕಸದಲ್ಲಿ ಸುಮಾರು ಶೇ. ೩೫ ರಷ್ಟು ಕಾಗದವೇ ಇರುತ್ತದೆ. ಅಂದರೆ, ಕಾಗದವು ಸರಿಯಾಗಿ ಮರುಬಳಕೆಯಾಗುತ್ತಿಲ್ಲ. ಜರ್ಮನಿಯಲ್ಲಿ ಸುಮಾರು ಶೇ ೮೦ ರಷ್ಟು ಕಾಗದ ಮರುಬಳಕೆಯಾಗುತ್ತಿದೆ. ಆದರೆ ನಮ್ಮಲ್ಲಿ ಕೇವಲ ಶೇ ೨೬ ರಷ್ಟು ಮರುಬಳಕೆಯಾಗುತ್ತಿದೆ. ಆದ್ದರಿಂದ ನಾವೆಲ್ಲರೂ ಯೋಚಿಸಿ ಕಾಗದ ಬಳಸಬೇಕಿರುವುದು

ಅನಿವಾರ್ಯ. ಹಾಗೆಯೇ, ಜರ್ಮನಿಯಲ್ಲಿ ಎಲ್ಲೂ ಕಸ ಎಸೆಯಬಾರದಂಥ ವ್ಯವಸ್ಥೆಯನ್ನು ರೂಪಿಸಿದ್ದಾರೆ. ಅಲ್ಲಿ ತ್ಯಾಜ್ಯಗಳನ್ನು ಜೈವಿಕ ತ್ಯಾಜ್ಯ ಮತ್ತು ಅಜೈವಿಕ ತ್ಯಾಜ್ಯಗಳೆಂದು ವಿಂಗಡಿಸಿದ ಅನಂತರ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಿ ಮತ್ತು ಗೊಬ್ಬರವನ್ನಾಗಿ ಪರಿವರ್ತಿಸಿ ಮರುಬಳಕೆ ಮಾಡುತ್ತಾರೆ. ಇಂತಹ ಪರಿಸರ ಸ್ನೇಹಿ ಯೋಜನೆಗಳನ್ನು ನಮ್ಮ ದೇಶದಲ್ಲಿಯೂ ಅಳವಡಿಸಿಕೊಂಡಿದ್ದಲ್ಲಿ ಪರಿಸರದಲ್ಲಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳಬಹುದು.


ರೈಲ್ವೆ ಟ್ರ್ಯಾಕುಗಳನ್ನು ವಿದ್ಯುತ್ ಚಾಲಿತಗೊಳಿಸುವುದು. ಕಲ್ಲಿದ್ದಲ ಇಂಧನಕ್ಕೆ ಬದಲಾಗಿ ಗ್ಯಾಸ್ ಇಂಧನವನ್ನು ಬಳಸುವುದು. ಬದಲಿ ಇಂಧನ ಮೂಲಗಳಾದ ಸೌರಶಕ್ತಿ, ಜಲವಿದ್ಯುತ್ ಶಕ್ತಿ ಮತ್ತು ಪವನಶಕ್ತಿಯನ್ನು ಉಪಯೋಗಿಸುವುದು. ತ್ಯಾಜ್ಯಗಳನ್ನು ಸುಡದಿರುವುದು, ಅದರಲ್ಲೂ ವಿಶೇಷವಾಗಿ ಪ್ಲಾಸ್ಟಿಕ್ ಅನ್ನು ಸುಡುವಾಗ ಹೆಚ್ಚು ಹಾನಿಕಾರಕ ಅನಿಲಗಳು ಪರಿಸರಕ್ಕೆ ಬಿಡುಗಡೆ ಆಗುತ್ತವೆ. ಸೀಸರಹಿತ ಪೆಟ್ರೋಲ್ ಮತ್ತು ಶಕ್ತಿಯ ಬದಲೀ ಮೂಲಗಳನ್ನು ಉಪಯೋಗಿಸುವುದು, ಮತ್ತು ಎಂಜಿನ್‌ಗಳನ್ನು ಸಕಾಲದಲ್ಲಿ ಸರ್ವಿಸಿಂಗ್ ಮಾಡಿಸಿ ಸುಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವುದು. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಳಸುವುದು. ಕಾರ್ಖಾನೆಗಳು, ಸ್ಥಾವರಗಳು ಮತ್ತು ರಿಫೈನರಿಗಳ ತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುವುದು ಅಥವಾ ಮರುಬಳಕೆ ಮಾಡುವುದು. ಸಾವಯವ ಘನ ತ್ಯಾಜ್ಯವನ್ನು ಗೊಬ್ಬರವಾಗಿ ಬಳಸಿ ತ್ಯಾಜ್ಯಗಳು ನದಿ ಮತ್ತು ಇತರ ಜಲ ಮೂಲಗಳನ್ನು ಮಲಿನಗೊಳಿಸದ ರೀತಿಯಲ್ಲಿ ಅದನ್ನು ಸರಿಯಾಗಿ ವಿಲೇವಾರಿ ಮಾಡಿ. ತ್ಯಾಜ್ಯಗಳನ್ನು ಜೈವಿಕ ತ್ಯಾಜ್ಯ ಮತ್ತು ಅಜೈವಿಕ ತ್ಯಾಜ್ಯಗಳೆಂದು ವಿಂಗಡಿಸಿದ ಅನಂತರ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಿ ಪರಿಸರ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಇಂದಿನ ತುರ್ತು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ.●

ಗಾಂಧಿ ಮತ್ತು ಪರಿಸರ

– ರೂಪದರ್ಶಿ ಜಿ. ವೆಂಕಟೇಶ್

"The earth provides enough for everyman's needs but not for everyman's greed" ಎನ್ನುವ ಗಾಂಧೀಜಿಯವರ ಈ ಹೇಳಿಕೆಯನ್ನು ಕಳೆದ ಶತಮಾನದಿಂದ ಕೇಳುತ್ತಾ, ಅಲ್ಲಲ್ಲಿ ನೋಡುತ್ತಾ ಬಂದಿದ್ದೇವೆ. ಈ ರೀತಿಯ ಗಾಂಧೀಜಿಯವರ ನಾನಾ ಹೇಳಿಕೆಗಳನ್ನು ನೋಡುತ್ತಾ, ಕೇಳುತ್ತಿರುತ್ತೇವೆಯೇ ವಿನಃ, ಅವುಗಳ ಪ್ರಸ್ತುತತೆಯತ್ತ ತಲೆಕೆಡಿಸಿಕೊಳ್ಳುವುದಿಲ್ಲ. ಹಾಗೂ ಗಾಂಧೀಜಿಯವರನ್ನು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ನಾಯಕನಾಗಿ, ರಾಷ್ಟ್ರಪಿತನಾಗಿ, ಅವರ ಸಾಮಾಜಿಕ, ರಾಜಕೀಯ ತತ್ವ ಸಂದೇಶಗಳನ್ನು ಓದುತ್ತಾ, ಸಾರುತ್ತೇವೆಯೇ ಹೊರತು ಅವರೊಬ್ಬ ಸೂಕ್ಷ್ಮ ಪರಿಸರ ತಜ್ಞರೆಂದು, ಅವರ ನಡೆ, ನುಡಿ, ಆಚಾರ, ವಿಚಾರಗಳೆಲ್ಲವೂ ಸುಸ್ಥಿರ ಪರಿಸರಕ್ಕೆ ಪೂರಕವೆಂಬುದನ್ನು ಅರಿಯುವುದರಲ್ಲಿ ಸೋತಿದ್ದೇವೆ ಎನ್ನಿಸುತ್ತದೆ.

ಸುಸ್ಥಿರ ಪರಿಸರಕ್ಕೆ ಗಾಂಧೀಜಿಯವರ ಕೊಡುಗೆ ಮತ್ತು ಅವರ ಪ್ರಸ್ತುತತೆಯನ್ನು ಅರಸುತ್ತಾ ಹೋದರೆ, ಅದಕ್ಕೆ ಕನ್ನಡಿ ಹಿಡಿಯುವ ಹಾಗೆ ಗೋಚರಿಸುತ್ತಿರುವುದು ದಿವಂಗತ ಟಿ.ಎನ್. ಖೋಶು ಮತ್ತು ಜಾನ್ ಎಸ್. ಮೂಲಕ್ಕಟ್ಟು ರವರು ಬರೆದು, The Energy and Research Institute(TERI)ರವರು ಪ್ರಕಟಿಸಿರುವ ಪುಸ್ತಕ "Mahathma Gandhi and the Environment(Analysing Gandhian Environmental Thought)" ಎನ್ನುವ ಪುಸ್ತಕ. ಮೂಲತಃ ಖೋಶು ರವರು ಭಾರತ ಸರ್ಕಾರದ ಪರಿಸರ ಇಲಾಖೆಯಲ್ಲಿ ೧೯೮೫ ರ ತನಕ ಕಾರ್ಯದರ್ಶಿಯಾಗಿ ದುಡಿದವರು. ನಿವೃತ್ತಿಯನಂತರ TERI ಯ ಜೊತೆ ಸೇರಿ ಸುಸ್ಥಿರ ಪರಿಸರಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವುಗಳನ್ನು ತಮ್ಮ ಜೀವಿತಾವಧಿಯ ಕೊನೆಯವರೆಗೆ(೨೦೦೨) ನಡೆಸಿಕೊಂಡು ಬಂದವರು. ಅವರ ಕಾರ್ಯಕ್ರಮಗಳ ಒಂದು ಕೊಡುಗೆಯೇ ಸುಸ್ಥಿರ ಪರಿಸರಕ್ಕೆ ಮಹಾತ್ಮ ಗಾಂಧೀಜಿರವರ ಪ್ರಸ್ತುತತೆಯನ್ನು ಎತ್ತಿ ಹಿಡಿಯುವ ಈ ಪುಸ್ತಕ. ಜಾನ್ ಸ್ಟೀಫನ್ ಮೂಲಕಟ್ಟು ಮೂಲತ: ಕೇರಳದವರಾಗಿದ್ದು, ಪ್ರಸ್ತುತ ಕೇರಳ ಸೆಂಟ್ರಲ್ ಯೂನಿವರ್ಸಿಟಿಯ



ಮುಖ್ಯಸ್ಥರಾಗಿದ್ದಾರೆ. ೨೫ ವರ್ಷಗಳಿಗೂ ಮೀರಿದ ಶೈಕ್ಷಣಿಕ ಅನುಭವ ಮತ್ತು ದಕ್ಷಿಣ ಆಫ್ರಿಕಾದ ದರ್ಬನ್ ನಲ್ಲಿರುವ ಕ್ವಾಜುಲು ನಟಲ್ ವಿಶ್ವವಿದ್ಯಾಲಯದ (Kwajulu Natal University), ರಾಜಕೀಯ ವಿಭಾಗದ ಗಾಂಧಿ-ಲುಥುಲಿ ಶಾಂತಿ ಪೀಠ ದ ಪ್ರಾಧ್ಯಾಪಕರಾಗಿ, ಗಾಂಧಿ ಪ್ರತಿಷ್ಠಾನದ ತ್ರೈಮಾಸಿಕ ಪತ್ರಿಕೆ 'ಗಾಂಧಿ ಮಾರ್ಗ್' ಪತ್ರಿಕೆಯ ಸಂಪಾದಕರಾಗಿ ದುಡಿದ ಅನುಭವ, ಮಹಾತ್ಮ ಗಾಂಧೀಜಿರವರ ತತ್ವ, ಸಂದೇಶ ಮತ್ತು ಆದರ್ಶಗಳ ಮೇಲಿನ ಸಂಶೋಧನೆಯ ಅನುಭವಗಳು ಇವರ ಬೆನ್ನಿಗಿದ್ದು, ಖಿಇಖಿಖ ಯ ಜೊತೆಗೂಡಿ ಖೋಶೂ ರವರಿಗೆ ಪೂರಕವಾಗಿ ಗಾಂಧೀಜಿರವರ ಸುಸ್ಥಿರ ಪರಿಸರ ಪ್ರಜ್ಞೆ ಮತ್ತು ಚಿಂತನೆಗಳನ್ನು ಪ್ರಚುರ ಪಡಿಸುವುದರಲ್ಲಿ ಕೈ ಜೋಡಿಸಿದ್ದಾರೆ.

ಗಾಂಧಿರವರ ತತ್ವ, ಸಂದೇಶ ಹಾಗೂ ಅವರ ಆಚಾರ ವಿಚಾರ, ಜೀವನ ಶೈಲಿಗಳನ್ನು ಅವಲೋಕಿಸಿಯೇ ಅವರೊಬ್ಬ ಸೂಕ್ಷ್ಮ ಪರಿಸರ ತಜ್ಞ ರೆಂಬುದನ್ನು ತಿಳಿಸುವಲ್ಲಿ ಈ ಪುಸ್ತಕ ನೆರವಾಗಿದೆ. ಅವರಿದ್ದ ಕಾಲದಲ್ಲಿ ಪರಿಸರಕ್ಕೆ ಅಷ್ಟು ಧಕ್ಕೆ ಯಾಗಿರದಿದ್ದರೂ ಅವರು ನೀಡಿದ ತತ್ವ ಸಂದೇಶಗಳು ಅವರಿಗಿದ್ದ ಪರಿಸರದ ಮೇಲಿನ ಭವಿಷ್ಯತ್ತಿನ ಕಾಳಜಿ ಮತ್ತು ಕಾಣ್ಕೆಯನ್ನು ತೋರಿಸುತ್ತದೆ.

ಈ ಪುಸ್ತಕದಲ್ಲಿ, ಲೇಖಕರು ಮಹಾತ್ಮ ಗಾಂಧೀಜಿರವರ ಕಾಣ್ಕೆಯನ್ನು, ಪ್ರಕೃತಿ ಮತ್ತು ಮನುಷ್ಯ ಸಂಬಂಧಗಳನ್ನು ಸಮೀಕರಿಸುತ್ತಾ, ಒಟ್ಟಾರೆ ಪರಿಸರ ವ್ಯವಸ್ಥೆಯಲ್ಲಿ ಮಾನವ ಪರಿಸರ ಪ್ರಜ್ಞೆ ಸುಸ್ಥಿರ ಪರಿಸರಕ್ಕಾಗಿ ಪೂರಕವಾಗಿರಬೇಕೆಂದು ಆಶಿಸುತ್ತಾ ಗಾಂಧೀಜಿ, ಮನುಷ್ಯನನ್ನು ಸೇರಿಸಿ ಎಲ್ಲಾ ಜೀವಿಗಳು, ಪರಸ್ಪರ ಸಮನ್ವಯಗೊಂಡು ಸಹಬಾಳ್ವೆ ನಡೆಸಬೇಕೆಂಬ 'ವಸುದೈವ ಕುಟುಂಬಕಂ' ತತ್ವವನ್ನು ಸಾರುತ್ತಾರೆ. ಮುಂದುವರಿಯುತ್ತಾ ಗಾಂಧೀಜಿರವರು ಜೀವಿಗಳು ಪರಿಸರವನ್ನು ಬದಲಾಯಿಸುತ್ತಾರೆ, ಬದಲಾದ ಪರಿಸರ ಜೀವಿಗಳನ್ನು ಬದಲಾಯಿಸುತ್ತದೆ. ಪರಿಸರ ವ್ಯವಸ್ಥೆಯಲ್ಲಿ ಮನುಷ್ಯರಿಗೊಂದು ಜೀವಗೋಳ, ಪ್ರಾಣಿ ಪಕ್ಷಿಗಳಿಗೊಂದು ಜೀವಗೋಳ, ಸಸ್ಯ ವರ್ಗಕ್ಕೆ, ಕ್ರಿಮಿ ಕೀಟಗಳಿಗೆ, ಸೂಕ್ಷ್ಮಾಣು ಜೀವಿಗಳಿಗೆ ಬೇರೆ ಬೇರೆ ಜೀವಗೋಳಗಳಿಲ್ಲವೆಂದು ಪ್ರತಿಪಾದಿಸುತ್ತಾ, ಎಲ್ಲಾ ಜೀವಿಗಳು ಒಬ್ಬರಿಗೊಬ್ಬರು ಪೂರಕವಾಗಿ ಆರೋಗ್ಯವಂತ ಪರಿಸರ ನಿರ್ಮಾಣದೊಂದಿಗೆ ಬದುಕಬೇಕೆಂದು ಸಾರುತ್ತಾರೆ ಎಂಬುದನ್ನು ವಿವರಿಸುತ್ತಾರೆ.

ಮುಂದುವರಿಯುತ್ತಾ, ಗಾಂಧಿ ಹೇಳಿಕೊಳ್ಳದೆ ಇದ್ದರೂ, ಅವರು ಪರಿಸರ ಪ್ರಜ್ಞೆಯ ಯೋಗಿಯಾಗಿದ್ದರು ಎನ್ನುತ್ತಾರೆ. ಸರಳ ಭಾಷೆಯಲ್ಲಿ ಹೇಳುವುದಾದರೆ ಅವರ ಭೌತಿಕ ಚಟುವಟಿಕೆಗಳು ಹಠಯೋಗವನ್ನು ಮತ್ತು ಅವರ ನೈತಿಕ ಪ್ರಜ್ಞೆ ರಾಜಯೋಗವನ್ನು ಪ್ರತಿಪಾದಿಸುತ್ತದೆ ಎನ್ನುತ್ತಾರೆ. ಗಾಂಧೀಜಿ ಪಾಲಿಸಿದ ರಾಜಯೋಗದ ಯಮ ನಿಯಮಗಳು ಪರಿಸರ ಪೂರಕ ಮತ್ತು ಸಂಪನ್ಮೂಲ ಉಪಯೋಗಗಳನ್ನೊಳಗೊಂಡಿದ್ದವು. ಯಮದ ಅಂಗಗಳಾದ ಸತ್ಯ, ಅಹಿಂಸೆ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳ ಮೂಲಕ ಪರಿಸರದ ಸುಸ್ಥಿರತೆಯನ್ನು ಕಾಪಾಡಲು ಹೇಳುತ್ತಿದ್ದರು. ಸತ್ಯ ಎಲ್ಲಕ್ಕಿಂತ ಮೇಲ್ವರ್ಗದಲ್ಲಿ ನಮ್ಮ ನೈತಿಕ ಪ್ರಜ್ಞೆಯನ್ನು ಎತ್ತಿ ಹಿಡಿಯುತ್ತದೆ ಎನ್ನುವರು ಗಾಂಧೀಜಿ. ಮುಖ್ಯವಾಗಿ ಅಹಿಂಸೆ ತತ್ವವನ್ನು ಮನುಷ್ಯ ಸಂಕುಲದ ಮೇಲೆ ಮಾತ್ರವಲ್ಲದೇ, ಎಲ್ಲಾ ಜೀವಿಗಳ ಮತ್ತು ನಿರ್ಜೀವಿಗಳ ಮೇಲೂ ಪ್ರಯೋಗಿಸಬೇಕೆಂಬುದು ಅವರ ಆಕಾಂಕ್ಷೆಯಾಗಿತ್ತು. ಅನೈತಿಕವಾಗಿ ಸಿಗುವ ವಸ್ತುಗಳನ್ನು ಉಪಯೋಗಿಸಬಾರದ ಅಸ್ತೇಯ ತತ್ವವು ಮುಂದಾಗುವ ವಿಧ್ವಂಸಕ ಕೃತ್ಯಗಳಿಗೆ ಕಡಿವಾಣ ಹಾಕುವ ಮುನ್ನೋಟವಾಗಿತ್ತು. ಮಾನವ ಸಂಕುಲದಲ್ಲಿರುವ ಲೈಂಗಿಕ ಕ್ರಿಯೆಯ ಪ್ರಚೋದನೆ ಇತರ ಪ್ರಾಣಿ, ಪಕ್ಷಿ ಜೀವಿಕೋಶಗಳಿಗಿಂತ ಅಧಿಕವಾಗಿರುವುದರಿಂದ ಅದಕ್ಕೊಂದು ಕಡಿವಾಣವಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕಾದ ನಡೆಯನ್ನು ಗಾಂಧೀಜಿ ತೋರಿಸಿದ್ದಾರೆ. ಇಲ್ಲದಿದ್ದರೆ, ಜನಸಂಖ್ಯಾಸ್ಫೋಟದಿಂದ ಸಂಪನ್ಮೂಲಗಳ

ಬಳಕೆ ಅಧಿಕವಾಗಿ ಪರಿಸರ ಸಮತೋಲನ ತಪ್ಪುವ ಸಾಧ್ಯತೆಯನ್ನು ಪರೋಕ್ಷವಾಗಿ ತಿಳಿಸಿದ್ದರು. ಅಗತ್ಯಕ್ಕಿಂತ ಮಿಗಿಲಾದ ವಸ್ತುಗಳ ಸಂಗ್ರಹದಿಂದ ಅಂದರೆ ಐಷಾರಾಮಿ ಜೀವನ ಶೈಲಿಯಿಂದ ಪರಿಸರದ ಮೇಲೆ ಆಗಬಹುದಾದ ಅನಾಚಾರಗಳನ್ನು ವಿರೋಧಿಸುವುದಕ್ಕಾಗಿಯೇ ಅಪರಿಗ್ರಹ ತತ್ವದ ಸರಳ ಜೀವನ ಶೈಲಿಯನ್ನು ಗಾಂಧೀಜಿ ಅಳವಡಿಸಿಕೊಂಡಿದ್ದರೆಂದು ಲೇಖಕರು ತಿಳಿಸುತ್ತಾರೆ. ಇನ್ನು ರಾಜಯೋಗದ ನಿಯಮಗಳಲ್ಲಿ ಮೊದಲಿಗೆ 'ಶೌಚ' ಅಂದರೆ ಶುಚಿಗೊಳಿಸುವಿಕೆ. ಇದು ಅಂತರಂಗ ಮತ್ತು ಬಹಿರಂಗ ಶುದ್ಧೀಕರಣ. ಮನಸ್ಸು, ದೇಹ ಮತ್ತು ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಡುವುದು. ಮೂಲತಃ ಮಾನವ ಇತರ ಪ್ರಾಣಿಗಳಿಗಿಂತ ಹೆಚ್ಚಿನ ಅಶೌಚವುಳ್ಳ ಜೀವಿ. ಬೇರೆ ಜೀವಿಗಳಿಗಿಂತ ಹೆಚ್ಚಾಗಿಯೇ ಪರಿಸರದಲ್ಲಿ ಜೀರ್ಣವಾಗದ ಕಸವನ್ನು ಉತ್ಪಾದಿಸಿ ಪರಿಸರ ಮಾಲಿನ್ಯಕ್ಕೆ ಶೇಕಡ ನೂರರಷ್ಟು ಕೊಡುಗೆಯನ್ನು ಮಾನವ ನೀಡುತ್ತಿದ್ದಾನೆ. ಹಾಗಾಗಿ ಈ ಶೌಚ ಕ್ರಿಯೆ ಪ್ರಸ್ತುತ ಅತ್ಯಂತ ಅನಿವಾರ್ಯ. ಗಾಂಧೀಜಿ ಪ್ರತಿಪಾದಿಸಿದ ಈ ಸ್ವಚ್ಛತೆಯ ಕಾರ್ಯವು ನಮ್ಮ ಅಂಗಳಗಳ ಸ್ವಚ್ಛತೆಯ ಜೊತೆಗೆ ಅರಿಷಡ್ವರ್ಗಗಳಾದ ಕಾಮ,ಕ್ರೋಧ, ಲೋಭ ಮುಂತಾದವುಗಳ ಸಂಪೂರ್ಣ ನಿಯಂತ್ರಣವನ್ನು ಒಳಗೊಂಡಿದ್ದಾಗಿದೆ. ಇದರ ಜೊತೆಗೆ ಸಂತೋಷ, ತಪಸ್ಸು, ಸ್ವಾಧ್ಯಾಯ, ಪ್ರಾರ್ಥನೆ ಮತ್ತು ಧ್ಯಾನಗಳು ಮನುಷ್ಯನನ್ನು ಸ್ವನಿಯಂತ್ರಣಕ್ಕೆ ಒಳಪಡಿಸಿ ಪ್ರಕೃತಿ ಹಾಗೂ ಜೀವಗೋಳಗಳಲ್ಲಿ ಮನುಜನು ಸಹ ಒಂದು ಪ್ರದಾನ ಅಂಗವೆಂಬ ಭಾವವನ್ನು ಸ್ಫುರಿಸುತ್ತದೆ. ಹೀಗೆ ಗಾಂಧೀಜಿಯ ಆಚಾರಗಳು ಸುಸ್ಥಿರ ಪರಿಸರ ಕಾಪಿಡುವುದನ್ನು ಒಳಗೊಂಡಿವೆಯೆಂದು ಲೇಖಕರು ಉಲ್ಲೇಖಿಸಿದ್ದಾರೆ.

ಗಾಂಧೀಜಿರವರು ಪ್ರತಿ ಜೀವಿಯಲ್ಲೂ ದೈವತ್ವವನ್ನು ಕಾಣುತ್ತಿದ್ದರು ಹಾಗೂ ಜೀವ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುತ್ತಿದ್ದರು. ಅಹಿಂಸೆ ಮತ್ತು ಸಸ್ಯಾಹಾರದಲ್ಲಿದ್ದ ಅವರ ನಂಬಿಕೆ ಸಕಲ ಜೀವ ಜಗತ್ತಿನ, ಸಮಾಜದ, ಸಂಸ್ಕೃತಿಯ, ಧರ್ಮದ ಮತ್ತು ಸಂಪ್ರದಾಯಗಳ ಸಂರಕ್ಷಣೆಯ ಹರಿಕಾರನೆಂಬುದನ್ನು ಸಾರುತ್ತದೆ. ಅವರ ಹೇಳಿಕೆಯಂತೆ ಜೀವ ವೈವಿಧ್ಯತೆಯ ಸಂರಕ್ಷಣೆ ತುಂಬಾ ಸರಳ ಹೇಗೆಂದರೆ ಜೀವ ಕೊಡುವ ಯಾವುದೇ ಶಕ್ತಿಯಿಲ್ಲದ ಮಾನವನಿಗೆ ಜೀವ ತೆಗೆಯುವ ಹಕ್ಕು ಸಹ ಇರುವುದಿಲ್ಲ. ಅವರ ಇನ್ನೊಂದು ನಂಬಿಕೆಯೇನೆಂದರೆ, ಸುಸ್ಥಿರ ಪರಿಸರ ಚಳುವಳಿಯಲ್ಲಿ ಪ್ರಕೃತಿಯ ಮೇಲೆ ನಡೆಯುವ ಹಿಂಸೆಯನ್ನು ತಡೆಯುವುದಷ್ಟೇ ಸಾಲದು, ಅಹಿಂಸೆಯೆಂಬುದು ಮಾನವ ಕುಲದ ಸಂಸ್ಕೃತಿಯ ಕೇಂದ್ರವಾಗಿರಬೇಕೆಂಬುದಾಗಿತ್ತು. ಗಾಂಧಿಯವರಿಗೆ ಪ್ರಮುಖವಾಗಿ ಮಹಿಳೆಯರ ಬಗ್ಗೆಯೂ ಹೆಚ್ಚಿನ ಕಾಳಜಿಯಿತ್ತು. ಏಕೆಂದರೆ ಮಹಿಳೆಯರು ಗಂಡಸರಿಗಿಂತ ಹೆಚ್ಚಿನ ಮಟ್ಟದಲ್ಲಿ ಸಾಂಪ್ರದಾಯಿಕ ಪರಿಸರ ಸಂರಕ್ಷಕರೆಂಬ ನಂಬಿಕೆ. ಇತಿಹಾಸವನ್ನು ತಿರುವಿದರೆ, ಮಹಿಳೆಯರು ಮೂಲವಾಗಿ ಸಂಗ್ರಹಕಾರರು, ಗಂಡಸರಂತೆ ಕೊಲ್ಲುವವರಲ್ಲ, ಬೇಟೆಗಾರರಲ್ಲ. ಮೂಲದಲ್ಲಿ ಮಹಿಳೆಯರು ಸೃಜನಶೀಲರು. ಅವರ ಪಾಲನಾ, ಪೋಷಣ ಹಾಗೂ ಹಂಚುವ ಗುಣದಿಂದ ಗಾಂಧೀಜಿಯವರು ಅವರಿಗೆ ಗಂಡಸರಿಗೆ ಸಮಾನವಾದ ಅಸ್ಮಿತೆಯನ್ನು ನೀಡಿದ್ದರು. ಸೇವೆ ಮತ್ತು ತ್ಯಾಗ ಮನೋಭಾವದ ಮಹಿಳೆಯರ ಗುಣಗಳನ್ನು ಅವರು ಆರಾಧಿಸುತ್ತಿದ್ದರು ಹಾಗೂ ಮಹಿಳೆಯರನ್ನು ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ದೇಶ ಪುನರ್ ನಿರ್ಮಾಣಕಾರ್ಯದಲ್ಲಿ ತೊಡಗಿಸಿಕೊಳ್ಳಲು ಉತ್ತೇಜಿಸಿದರು ಎಂಬುದನ್ನು ಈ ಪುಸ್ತಕದಲ್ಲಿ ತಿಳಿಸುತ್ತಾರೆ.

ಮಹಾತ್ಮರ ಇನ್ನೊಂದು ಕಾಳಜಿ ಇದ್ದದ್ದು ನೈರ್ಮಲ್ಯ ಮತ್ತು ಭಂಗಿಗಳ ಮುಕ್ತಿಯಲ್ಲಿ. ಯಾರೂ ಮಾಡಲಿಚ್ಛಿಸದ ಸೇವೆಯಲ್ಲಿ ನಿರತರಾಗಿದ್ದ ಕಾರಣಕ್ಕಾಗಿಯೇ ಅವರನ್ನು ದೇವರ ಮಕ್ಕಳೆಂದು 'ಹರಿಜನ' ಎಂದು ಕರೆಯುತ್ತಿದ್ದರು. ಅವರ ಈ ಕರ್ಮವನ್ನು ಹೋಗಲಾಡಿಸಲು

ಹಿಂದೂ ಸಂಪ್ರದಾಯಗಳ ವಿರುದ್ಧ ನಾನಾ ರೀತಿಯ ಹೋರಾಟಗಳನ್ನು ಹಮ್ಮಿಕೊಂಡಿದ್ದರು. ಮುಖ್ಯವಾಗಿ ಮಾನವನ ಅಮೇಧ್ಯವನ್ನು ಗೊಬ್ಬರವನ್ನಾಗಿ ಮತ್ತು ಶಕ್ತಿ ಜನಕದ ಮೂಲವಾಗಿ ಉಪಯೋಗಿಸಲು ಉತ್ತೇಜಿಸುತ್ತಿದ್ದರು. ಇಲ್ಲದಿದ್ದರೆ ಇವು ಪರಿಸರ ನಾಶಕ್ಕೆ ಮತ್ತು ರೋಗ ರುಜಿನಗಳನ್ನು ಹರಡುವುದಕ್ಕೆ ಮೂಲನೆಲೆಯಾಗುತ್ತದೆಯೆಂದು ಎಚ್ಚರಿಸುತ್ತಿದ್ದರೆಂದು ಲೇಖಕರು ಗಮನ ಹರಿಸುತ್ತಾರೆ.

ಸಮಾನಾಂತರವಾಗಿ ಗಾಂಧೀಜಿರವರಿಗೆ ಪ್ರತಿ ಮಾನವನ ಕರ್ತವ್ಯವೂ ಮುಖ್ಯವಾಗಿತ್ತು. ಅವರಿಗೆ ಸಮಾಜ ಮತ್ತು ಸರ್ಕಾರಗಳು ಪ್ರತಿ ಪ್ರಜೆಯ ಮುಂದುವರೆದ ಭಾಗವಾಗಿಯಷ್ಟೇ ಕಾಣುತ್ತಿತ್ತು. ಆದ್ದರಿಂದ ಪ್ರತಿ ಪ್ರಜೆಯ ಪರಿಸರ ಪ್ರಜ್ಞೆ ಅವರಿಗೆ ಮುಖ್ಯವಾಗಿತ್ತು. ಸಮಾಜದ ವಿವಿಧ ಸ್ತರದ ಜನಗಳಲ್ಲಿ ಸಮಾನ ಸಂಪನ್ಮೂಲ ಬಳಕೆಯಲ್ಲಿ ಅವರಿಗೆ ಒಲವಿತ್ತು. ಸಂಪನ್ಮೂಲ ಬಳಕೆಯ ಪ್ರಮಾಣದ ಏರು ಪೇರುಗಳು, ಮಾನವನು ಎಷ್ಟೇ ಹೊಂದಿದ್ದರೂ ಅವನನ್ನು ಆಸೆಯ ಗುಲಾಮನಾಗಿಯೇ ಇರಿಸುತ್ತದೆ ಎಂಬ ಅಚಲವಾದ ನಂಬಿಕೆಯನ್ನು ಗಾಂಧೀಜಿರವರು ಹೊಂದಿದ್ದರು ಎಂಬುದನ್ನು ಲೇಖಕರು ಉಲ್ಲೇಖಿಸಿದ್ದಾರೆ.

ಪಾಶ್ಚಿಮಾತ್ಯ ಕೈಗಾರಿಕೋದ್ಯಮವನ್ನು ಕಣ್ಮುಚ್ಚಿಕೊಂಡು ಅನುಸರಿಸುವುದನ್ನು ಮಹಾತ್ಮರು ವಿರೋಧಿಸುತ್ತಿದ್ದರು. ಏಕೆಂದರೆ ಅವು ಪರಿಸರಾತ್ಮಕ, ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಒಳಗೊಂಡಿದ್ದವು. ಪಶ್ಚಿಮದಲ್ಲಿ ಕೈಗಾರಿಕೋದ್ಯಮ ಅನಂತವಾದ ಸಂಪನ್ಮೂಲಗಳಿವೆಯೆಂಬ ನಂಬಿಕೆಯಲ್ಲಿ ಬೆಳೆದಿತ್ತು. ಆದರೆ ಪ್ರಕೃತಿಯಲ್ಲಿನ ಸಂಪನ್ಮೂಲಗಳಿಗೆ ಮಿತಿಯಿದೆ. ಜೀವಗೋಳವು ಅಸ್ಥಿರ ಅಭಿವೃದ್ಧಿಯಿಂದ ಉಂಟಾಗುವ ಪರಿಸರ ಮಾಲಿನ್ಯವನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿಲ್ಲದಿರುವುದು ಸತ್ಯ. ಹಾಗೆಯೇ ನಮ್ಮ ಜನಸಂಖ್ಯೆ ಮತ್ತು ಅವುಗಳ ಆಸೆ ಆಕಾಂಕ್ಷೆಗಳು ಘಾತೀಯವಾಗಿ ಬೆಳೆದಷ್ಟು ಭೂಮಿಯ ಮೇಲಿನ ಸಂಪನ್ಮೂಲಗಳು ಬೆಳೆಯಲಾರವೆಂಬುದು ಕಟುಸತ್ಯ. ಅದಕ್ಕಾಗಿಯೇ ಮಿತವಾದ ಸಂಪನ್ಮೂಲಗಳಿಂದ ಅಮಿತವಾದ, ಅನಂತವಾದ ಅಭಿವೃದ್ಧಿಗಳು ಸಾಧ್ಯವಿಲ್ಲವೆಂದು ಅರಿತ ಗಾಂಧೀಜಿರವರು ಗುಡಿ ಕೈಗಾರಿಕೆಗಳನ್ನು ಪ್ರತಿಪಾದಿಸಿದ್ದರು. ಭಾರತೀಯ ಸಂದರ್ಭದಲ್ಲಿ ಗುಡಿ ಕೈಗಾರಿಕೆಯಲ್ಲಿ ಉತ್ತಮ ಭವಿಷ್ಯವನ್ನು ಕಂಡಿದ್ದರು. ಇದರಿಂದ ಗ್ರಾಮಸ್ಥರು ಉತ್ತಮ ಮಾರುಕಟ್ಟೆ ಹೊಂದಿ ಗ್ರಾಮೀಣಾಭಿವೃದ್ಧಿಯ ಕನಸು ಕಂಡಿದ್ದರು. ಅವರಿಗೆ ಭಾರತೀಯರು ಮಿತಿಯಿಲ್ಲದ ಆಸೆಗಳ ಗುಲಾಮರಾಗುವುದು ಇಷ್ಟವಿರಲಿಲ್ಲವೆಂಬುದನ್ನು ಲೇಖಕರು ಕಟ್ಟಿಕೊಡುತ್ತಾರೆ.

ಈ ರೀತಿಯಲ್ಲಿ ಗಾಂಧೀಜಿರವರ ಪರಿಸರ ಪ್ರಜ್ಞೆ ಮತ್ತು ಅದರ ಪ್ರಸ್ತುತತೆಗಳನ್ನು ಕಟ್ಟಿಕೊಡುವ ಲೇಖಕರು ೧೯೭೩ರಲ್ಲಿ ಇಡೀ ಏಷಿಯಾದಲ್ಲಿಯೇ ಬೃಹತ್ ಮಟ್ಟದಲ್ಲಿ, ಅರಣ್ಯಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಚಿಪ್ಕೊ ಚಳುವಳಿ ಆರಂಭಗೊಂಡಿತು. ಇದರಲ್ಲಿ ಶ್ರೇಷ್ಠ ಮಟ್ಟದ ಪರಿಸರ ಇತಿಹಾಸ ತಜ್ಞರಾದ ವಂದನ ಶಿವ, ಅನಿಲ್ ಅಗರ್ವಾಲ್, ಮಾಧವ ಗಾಡ್ಗಿಲ್ ಮತ್ತು ರಾಮಚಂದ್ರಗುಹರವರು ಪಾಲ್ಗೊಂಡಿದ್ದರು. ಇವರೆಲ್ಲರೂ ಈ ಚಳುವಳಿಗೆ ಗಾಂಧೀಜಿರವರ ತತ್ವ ಸಂದೇಶಗಳೇ ಮೂಲ ಸ್ಫೂರ್ತಿ ಎಂದಿದ್ದಾರೆ ಎನ್ನುವುದನ್ನು ಈ ಪುಸ್ತಕದಲ್ಲಿ ಪ್ರಸ್ತುತಪಡಿಸಿದ್ದಾರೆ.

ಇತ್ತೀಚಿನ ಜೀವ ತಂತ್ರಜ್ಞಾನ(Biotechnology)ದ ಪ್ರಭಾವದಿಂದ ಕೃಷಿ ಕ್ಷೇತ್ರದಲ್ಲಿ ಪರಿಚಯವಾದ ಕುಲಾಂತರಿ ಬೀಜಗಳ ಬಗ್ಗೆ ವಿವರಿಸುತ್ತಾ, ಭಾರತೀಯ ಕೃಷಿ ಪದ್ಧತಿಯಲ್ಲಿ ತಲತಲಾಂತರದಿಂದ ಬೀಜ ಸಂಗ್ರಹಿಸಿ ಜೀವ ಉಳಿಸುವ, ಬೆಳೆಸುವ ತತ್ವಕ್ಕೆ ವಿರುದ್ಧವಾಗಿ ಈ ಕುಲಾಂತರಿ ಬೀಜಗಳು ಜೀವನಾಶದತ್ತ ಹೊರಟಿವೆ. ಇದರ ವಿರುದ್ಧ ನಡೆದ ಹೋರಾಟಗಳು

ಗಾಂಧೀಜಿರವರ ಸುಸ್ಥಿರ ಬದುಕು ಮತ್ತು ಅಭಿವೃದ್ಧಿ ತತ್ವಗಳಿಂದ ಉತ್ತೇಜಿತವಾದವು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪರಿಸರದ ಸಂರಕ್ಷಣೆಯ ಮೇಲೆ ಬೃಹತ್ ಗ್ರಂಥಗಳನ್ನು ಬರೆಯದೆ, ಯಾವುದೇ ಅಣೆಕಟ್ಟು ನಿರ್ಮಾಣದ ವಿರುದ್ಧದ ಹೋರಾಟದಲ್ಲಿ ಭಾಗವಹಿಸದೆ, ಯಾವ ನದಿಯ ಶುದ್ಧೀಕರಣದ ಗೋಜಲಿಗೆ ಹೋಗದಿದ್ದರೂ, ಮಾನವನು ಪ್ರಕೃತಿಯ ಅಂಗವಾಗಬೇಕು, ಸಂಪನ್ಮೂಲಗಳನ್ನು ಹಿತಮಿತವಾಗಿ ಬಳಸಬೇಕು, ಮನುಷ್ಯರೊಂದಿಗಷ್ಟೇ ಅಲ್ಲದೆ, ಇತರ ಜೀವ ಜಗತ್ತು ಮತ್ತು ನಿರ್ಜೀವ ವಸ್ತುಗಳೊಂದಿಗೂ ಅಹಿಂಸೆಯನ್ನು ಅನುಸರಿಸಬೇಕು, ಮಹಿಳೆಯರನ್ನು ಗೌರವಿಸಿ, ಅವರ ಘನತೆಗೆ ತಕ್ಕ ಸಾಮಾಜಿಕ ಸ್ಥಾನವನ್ನು ನೀಡಬೇಕು, ಮೇಲ್ ಸ್ತರದಿಂದ ಕೆಳಸ್ತರಕ್ಕೆ ಬದಲಾಗಿ ಕೆಳಸ್ತರದಿಂದ ಮೇಲ್ ಸ್ತರಕ್ಕೆ ಸಂಪನ್ಮೂಲ ಹಂಚಬೇಕು ಎಂದು ಪ್ರತಿಪಾದಿಸಿದ ಗಾಂಧೀಜಿಯವರ ಸಂಪೂರ್ಣ ಜೀವನ ಮತ್ತು ಅವರ ಆಚಾರ ವಿಚಾರಗಳು ಮನುಜ ಕುಲಕ್ಕೊಂದು ಪರಿಸರಾತ್ಮಕ ಪರಂಪರೆಯನ್ನು ಹುಟ್ಟು ಹಾಕಿದೆಯೆಂಬುದನ್ನು ಲೇಖಕರು ಅನುಮೋದಿಸುತ್ತ ಈ ಪುಸ್ತಕ ಕೇವಲ ಟಿಪ್ಪಣಿಯಷ್ಟೆ ಎಂದು ಹೇಳುತ್ತಾ ಗಾಂಧೀಯವರ ಪರಿಸರ ಪ್ರಜ್ಞೆಗೆ ಮತ್ತು ಅದರ ಪ್ರಸ್ತುತತೆಗೆ ಅಲ್ಪವಿರಾಮವನ್ನು ಹಾಕಿರುತ್ತಾರೆ.

ಮಹಾತ್ಮ ಗಾಂಧೀಜಿರವರ ೧೫೦ ನೇ ಜನ್ಮದಿನೋತ್ಸವದ ಅಂಗವಾಗಿ ಪರಿಸರ ಪ್ರಜ್ಞೆ ಮತ್ತು ಅಭಿವೃದ್ಧಿಯ ನಿಟ್ಟಿನಲ್ಲಿ ಗಾಂಧೀಜಿರವರ ನಿಲುವುಗಳನ್ನು ಪ್ರಸ್ತುತ ಪಡಿಸುವ ಸಲುವಾಗಿ ರೂಪುಗೊಂಡ ಈ ಪುಸ್ತಕ ಪರಿಸರ ಪ್ರೇಮಿಗಳ ಮಾರ್ಗದರ್ಶಕ ಗ್ರಂಥವೆಂದರೆ ತಪ್ಪಾಗಲಾರದು. ●

ತೂತ್ತುಕುಡಿಯ ದುರ್ಘಟನೆ

ಮೇ ೨೪ ರಂದು ತೂತ್ತುಕುಡಿಯಲ್ಲಿ ಪೋಲೀಸರ ಗುಂಡಿಗೆ ಬಲಿಯಾದ ಆ ೧೧ ವರ್ಷದ ಬಾಲಕಿ ನನ್ನನ್ನು ಕಾಡುತ್ತಿದ್ದಾಳೆ. ಆ ಹುಡುಗಿ ಶಾಲೆಗೆ ಹೋಗುತ್ತಿದ್ದರೆ ೫ / ೬ ನೇ ತರಗತಿಯಲ್ಲಿ ಇರಬಹುದು. ನಮ್ಮ ಮನೆಯಲ್ಲಿರುವ ನಮ್ಮ ಮಗಳು ಅಥವಾ ಮೊಮ್ಮಗಳ ವಯಸ್ಸಿನ ಬಾಲಕಿ. ಆ ಮುಗ್ಧ ಮಗು ಆ ಗಲಾಟೆಗೆ ಏಕೆ ಹೋಗಿತ್ತೋ? ಆ ಗುಂಡು ಅದಕ್ಕೆ ತಗುಲಿದಾಗ ಅದು ಅನುಭವಿಸಿದ ನೋವಿನ ತೀವ್ರತೆ ಎಂತಹದಿರಬೇಕು ? ಮಗಳು ಸತ್ತ ಸುದ್ದಿ ಕೇಳಿದ ಅಪ್ಪ, ಅಮ್ಮ, ತಾತಾ. ಅಜ್ಜಿ ಚಿಕ್ಕಪ್ಪ, ಚಿಕ್ಕಮ್ಮ ರ ಗತಿ ಏನಾಗಿರಬೇಕು ?

ತೊಂಭತ್ತೊಂಭತ್ತು ವರ್ಷದ ಹಿಂದೆ ಜಲಿಯನ್ವಾಲಾ ಬಾಗ್ ನಲ್ಲಿ ನಡೆದ ಹತ್ಯಾಕಾಂಡಕ್ಕೂ ಕಳೆದ ವಾರ ತಮಿಳುನಾಡಿನ ತೂತ್ತುಕುಡಿಯಲ್ಲಿ ನಡೆದ ಹತ್ಯಾಕಾಂಡಕ್ಕೂ ಅಂತಹ ವ್ಯತ್ಯಾಸವೇನೂ ಇಲ್ಲ. ಪೋಲೀಸ್ ಗುಂಡಿಗೆ ಬಲಿಯಾದವರ ಸಂಖ್ಯೆಯಲ್ಲಷ್ಟೇ ವ್ಯತ್ಯಾಸ. ಹೋರಾಟಗಾರರನ್ನು ಕೊಂದವರ ಮನೋಭಾವ ತೊಂಭತ್ತೊಂಭತ್ತು ವರ್ಷದ ಹಿಂದೆ ಏನಿತ್ತೋ ಅದೇ ಇದೆ. ತೂತ್ತುಕುಡಿಯ ಆ ಜನರು ಕೇಳುತ್ತಿರುವುದಾದರೂ ಏನು ? ಉಸಿರಾಡಲು ಶುದ್ಧ ಗಾಳಿ. ಕುಡಿಯಲು ಸ್ವಚ್ಛ ನೀರು ಅಷ್ಟೆ. ಜೀವ ಉಳಿಸಿಕೊಂಡು ಬದುಕಲು ಬೇಕಾದ ಕನಿಷ್ಠ ಅಗತ್ಯಗಳಿವು. ಅವೂ ಜನ ಸಾಮಾನ್ಯರಿಗೆ ಲಭ್ಯವಾಗದಿದ್ದರೆ ಈ ದೇಶ ಇನ್ನೇಕೆ ? ಮೇರಾ ಭಾರತ್ ಮಹಾನ್ !

೧೯೯೬ ರಿಂದ ಆ ಜನ ಇದಕ್ಕಾಗಿ ಎಷ್ಟೊಂದು ಹೋರಾಟ ಮಾಡಿದ್ದಾರೆ! ಅದು ಯಾವುದನ್ನೂ ಸರ್ಕಾರ ಗಮನಿಸಿಲ್ಲ ಎಂಬುದ ಅತ್ಯಂತ ಕಠೋರ ಸಂಗತಿ. ಪೋಲೀಸರ ಗುಂಡಿಗೆ ಬಲಿಯಾದ ಜನರ ಆತ್ಮಕ್ಕೆ ಶಾಂತಿ ದೊರೆಯಲಿ. ಅಲ್ಲಿಯ ಜನರ ಹೋರಾಟ ಗೆದ್ದು ಅವರಿಗೆ ಶುದ್ಧ ನೀರು. ಗಾಳಿ ದೊರೆಯುವಂತಾಗಲಿ.

ಪರಿಸರದ "ಅರಿವಿನ" ಶಿಕ್ಷಣ

–ಡಾ: ಎಂ.ಸಿ. ಮನೋಹರ

ಮೈಸೂರಿನ ಅರಿವು ಶಿಕ್ಷಣ ಸಂಸ್ಥೆ ತನ್ನ ಶಾಲೆಯ ಚಟುವಟಿಕೆಗಳಲ್ಲಿ ಪರಿಸರ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದೆ. ಅಲ್ಲಿಯ ವಿದ್ಯಾರ್ಥಿಗಳ ಪರಸರ ತಿಳಿವಳಿಕೆ ವಿಶಿಷ್ಟವಾದುದು. ಪ್ರತಿ ಶಾಲೆಯೂ ತನ್ನ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಪರಿಸರ ಸಂಬಂಧಿ ವಿಷಯಕ್ಕೆ ಅರಿವು ಶಾಲೆಯಷ್ಟೇ ಮಹತ್ವ ನೀಡುವುದು ಇಂದಿನ ಅಗತ್ಯವಾಗಿದೆ. ಅರಿವು ಶಾಲೆಯ ವ್ಯವಸ್ಥಾಪಕ ಧರ್ಮದರ್ಶಿ ಡಾ. ಮನೋಹರ ಅರಿವು ಶಾಲೆಯ ಪರಿಸರ ಸಂಬಂಧಿ ಚಟುವಟಿಕೆಯನ್ನು ಇಲ್ಲಿ ವಿವರಿಸಿದ್ದಾರೆ.

ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ವತಿಯಿಂದ ನಾವು, ಕಳೆದ ಹತ್ತು ವರ್ಷಗಳಿಂದ ಕನ್ನಡ ಮಾಧ್ಯಮದ, ಚಟುವಟಿಕೆಯಾಧಾರಿತ ಶಾಲೆಯನ್ನು ನಡೆಸುತ್ತಿದ್ದೇವೆ. ಸಂತಸದ ಸಂಗತಿಯೆಂದರೆ, ಅರಿವು ಶಾಲೆಯಿರುವ ಮೈಸೂರಿನ ಶ್ರೀರಾಂಪುರ, ಲಿಂಗಾಂಬುಧಿಪಾಳ್ಯದಲ್ಲೇ ಸುಮಾರು ೨೨೦ ಎಕರೆ ವ್ಯಾಪ್ತಿಯ, ಲಿಂಗಾಂಬುಧಿ ಕೆರೆ–ಮೀಸಲು ಅರಣ್ಯವಿದೆ. ಇದರಿಂದ ನಮ್ಮ "ಪರಿಸರ ಸಂಪನ್ಮೂಲ ಕೇಂದ್ರ"ದ ವತಿಯಿಂದ ಪರಿಸರ ಸಂಬಂಧಿ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಅನುಕೂಲವಾಗಿದೆ.

ಈ ಚಟುವಟಿಕೆಗಳ ಮುಖ್ಯ ಉದ್ದೇಶ ಪರಿಸರದಲ್ಲಿರುವ ಗಿಡ, ಮರ, ಪಕ್ಷಿ, ಕೀಟ, ಪ್ರಾಣಿ ಮುಂತಾದ ಜೀವಿಗಳ ಪ್ರಾಮುಖ್ಯತೆ ಬಗ್ಗೆ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು. ಇದಕ್ಕಾಗಿ ವಿಷಯ ಪರಿಣಿತರ ಜೊತೆ ಸಂವಾದ, ಉಪನ್ಯಾಸ ಮತ್ತು ಕಾರ್ಯಾಗಾರಗಳನ್ನು ನಡೆಸುತ್ತಿದ್ದೇವೆ. ಇಂತಹ ನಮ್ಮ ಪ್ರಯತ್ನಗಳನ್ನು ತಮ್ಮ ಜೊತೆ ಹಂಚಿಕೊಳ್ಳುವುದು ಈ ಲೇಖನದ ಉದ್ದೇಶ.

ಪಕ್ಷಿವೀಕ್ಷಣೆ:

ಪಕ್ಷಿಗಳು ನಮಗೆ ಪ್ರತಿನಿತ್ಯ ನೋಡಲು ಸಿಗುವ ಸುಂದರ ಜೀವಿಗಳು. ಅವುಗಳ ಮಧುರವಾದ ಕೂಗು, ಹಾರಾಟ, ಚಟುವಟಿಕೆ, ಚಿಕ್ಕ ವಯಸ್ಸಿನವರಿಂದ ಹಿಡಿದು ವಯಸ್ಸಾದ ಹಿರಿಯರವರೆಗೂ ಕುತೂಹಲ ಮತ್ತು ಸಂತೋಷವನ್ನುಂಟು ಮಾಡುತ್ತವೆ. ಇಂದು ಪಕ್ಷಿವೀಕ್ಷಣೆ ಒಂದು ಆರೋಗ್ಯಕರ ಹವ್ಯಾಸವಾಗಿದೆ. ಇದಕ್ಕೆ ಉತ್ತೇಜನ ನೀಡಲು ಪ್ರತೀವರ್ಷ ಪಕ್ಷಿವೀಕ್ಷಣಾ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದೇವೆ. ಈ ಕಾರ್ಯಕ್ರಮಗಳಲ್ಲಿ ಪಕ್ಷಿಗಳನ್ನು ಗುರುತಿಸುವ ರೀತಿ, ಅವುಗಳ ಕೂಗು, ಚಟುವಟಿಕೆ, ಸಂತೋನೋತ್ಪತ್ತಿಗಳ ಬಗೆಗಿನ ಜ್ಞಾನ ಮತ್ತು ದಾಖಲೀಕರಣದ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದೆ.

ಹಕ್ಕಿಗಳ ವಲಸೆ ಒಂದು ವಿಸ್ಮಯಕಾರಿ ಪ್ರಕ್ರಿಯೆಯಾಗಿದೆ. ವಲಸೆ ಹಕ್ಕಿಗಳ ಬಗ್ಗೆ ಆಸಕ್ತಿಯನ್ನು ಮೂಡಿಸುವ ನಿಟ್ಟಿನಲ್ಲಿ, ತಜ್ಞ ಪಕ್ಷಿ ವೀಕ್ಷಕರಿಂದ ಉಪನ್ಯಾಸ, ಅವುಗಳಿರುವ ಕೆರೆಗಳಿಗೆ ಭೇಟಿ, ವರ್ಣಪಾರದರ್ಶಿಕೆಗಳ ಪ್ರದರ್ಶನಗಳನ್ನು ಆಯೋಜಿಸಲಾಗುತ್ತಿದೆ.

ಇದಲ್ಲದೆ ಪಕ್ಷಿ ವೀಕ್ಷಣೆಯ ಹವ್ಯಾಸದ ಮಹತ್ವವನ್ನು ಕನ್ನಡದಲ್ಲಿ ತಿಳಿಸುವ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಿ, ಅಂತರ್ಜಾಲದಲ್ಲಿ ಬಿಡುಗಡೆ ಮಾಡಲಾಗಿದೆ. ಇದನ್ನು ಈಗಾಗಲೇ ಸುಮಾರು ೯,೦೦೦ ಜನ ವೀಕ್ಷಿಸಿದ್ದಾರೆ.

(https://www.youtube.com/watch?v=9BHLwwSjC8Y)

ಜೇಡಗಳು ನಮ್ಮ ಪರಿಸರದಲ್ಲಿ ಕಂಡುಬರುವ ಸಣ್ಣ ಜೀವಿಗಳಲ್ಲಿ ಪ್ರಮುಖವಾದವು. ಅನೇಕ ಬಾರಿ ಇವುಗಳ ಇರುವಿಕೆ, ಆ ಪ್ರದೇಶದ ಆರೋಗ್ಯವಂತ ಪರಿಸರವನ್ನು ಸೂಚಿಸುತ್ತವೆ. ಇಂತಹ ಜೀವಿಗಳ ಬಗ್ಗೆ ಬೆಳಕು ಚೆಲ್ಲುವ ೨ ದಿನಗಳ ಕಾರ್ಯಾಗಾರವನ್ನು ಕಳೆದ ವರ್ಷ "ಅರಿವು"ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದ ನಂತರ ಕನ್ನಡ ಮತ್ತು ಇಂಗ್ಲೀಷಿನಲ್ಲಿ, ಕರ್ನಾಟಕದ ಸಾಮಾನ್ಯ ಜೇಡಗಳ ಬಗ್ಗೆ ಮಾಹಿತಿ ನೀಡುವ "ಹಿತ್ತಲ ಜೇಡ" ಎಂಬ ಕೈಪಿಡಿಯನ್ನು ಹೊರತರಲಾಯಿತು. ಇದರಿಂದ ವಿದ್ಯಾರ್ಥಿಗಳು ಮತ್ತು ಪರಿಸರಾಸಕ್ತರಲ್ಲಿ ಜೇಡಗಳ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಲು ಸಹಕಾರಿಯಾಗಿದೆ.

ಚಿಟ್ಟೆಗಳು ತಮ್ಮ ಸಹಜ ವರ್ಣಮಯ ಸೌಂದರ್ಯದಿಂದ ಪರಿಸರದಲ್ಲಿ ಗಮನ ಸೆಳೆಯುತ್ತವೆ. ಅಂತಹ ಚಿಟ್ಟೆಗಳನ್ನು ಆಕರ್ಷಿಸುವ ಗಿಡಗಳನ್ನು ಅರಿವು ಶಾಲೆಯ ಆವರಣದಲ್ಲಿ ನೆಟ್ಟು, "ಚಿಟ್ಟೆ ವನ"ವೊಂದನ್ನು ನಿರ್ಮಿಸಲಾಗಿದೆ. ನಿರ್ದಿಷ್ಟ ಚಿಟ್ಟೆಗಳು ಕೂರುವ ಗಿಡಗಳಿಗೆ ಸಾಮಾನ್ಯ ಕನ್ನಡ-ಇಂಗ್ಲೀಷ್ ಹೆಸರುಗಳ ಜೊತೆ ವೈಜ್ಞಾನಿಕ ಹೆಸರುಗಳನ್ನು ಒಳಗೊಂಡ ಫಲಕಗಳನ್ನು ಅಳವಡಿಸಲಾಗಿದೆ. ಇದರಿಂದ ನೋಡುಗರಿಗೆ ಚಿಟ್ಟೆ ಮತ್ತು ಗಿಡಗಳ ಬಗೆಗಿನ ಮಾಹಿತಿಯೂ ಲಭ್ಯವಾಗುತ್ತಿದೆ. ಇದಲ್ಲದೆ "ಚಿಟ್ಟೆಗಳು" ಎಂಬ ಪುಸ್ತಕವನ್ನು (ಲೇಖಕ: ಕಿಶನ್‌ದಾಸ್. ಗೌರವ ಸಂಪಾದಕ ದಿ. ಕೆ.ಬಿ. ಸದಾನಂದ) ಅರಿವು ಟ್ರಸ್ಟ್ ಹೊರತಂದಿದೆ. ಈ ಪುಸ್ತಕದಲ್ಲಿ ಚಿಟ್ಟೆಗಳ ಹುಟ್ಟು, ಬೆಳವಣಿಗೆ, ವಂಶಾಭಿವೃದ್ಧಿ, ಕನ್ನಡದ ಹೆಸರುಗಳು, ಆಹಾರ ಮತ್ತು ವಂಶಾಭಿವೃದ್ಧಿಗೆ ಉಪಯೋಗವಾಗುವ ಗಿಡಗಳ ಬಗ್ಗೆ ಕೂಡ ವರ್ಣ ಚಿತ್ರ ಸಮೇತ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಮಾಹಿತಿ ನೀಡಲಾಗಿದೆ.

ಅರಿವು ಸಂಪನ್ಮೂಲ ಕೇಂದ್ರದ ವತಿಯಿಂದ ಪ್ರತಿ ತಿಂಗಳ ಮೊದಲ ಭಾನುವಾರ ಪರಿಸರ ತಜ್ಞರಿಂದ ವರ್ಣಪಾರದರ್ಶಿಕೆಗಳ ಸಹಿತ ಉಪನ್ಯಾಸಗಳನ್ನು ಆಯೋಜಿಸಿ, ಅವ-ರಿಗಿರುವ ವಿವಿಧ ಮರ, ಪ್ರಾಣಿ, ಪಕ್ಷಿ, ಕೀಟ, ಜೇಡ,ಇರುವೆ, ಬಾವಲಿ,ಹಾವುಗಳ ಬಗೆಗಿನ ಜ್ಞಾನ ಮತ್ತು ಅನುಭವ ಆಸಕ್ತರಿಗೆ ತಲುಪಿಸುವ ಪ್ರಯತ್ನ ಮಾಡಲಾಗಿದೆ.

ಅರಿವು ಶಾಲಾವರಣದಲ್ಲಿ (೨೫ ಸಾವಿರ ಚದರಡಿ ವಿಸ್ತೀರ್ಣ) ಸುಮಾರು ೬೫ ಜಾತಿಯ ಸುಮಾರು ೮೦ ಗಿಡ,ಮರ, ಬಳ್ಳಿಗಳನ್ನು ನೆಟ್ಟು, ಪೋಷಿಸಿ, ಅವುಗಳ ಬಗ್ಗೆ ಮಾಹಿತಿ ನೀಡುವ ಫಲಕಗಳನ್ನು ಅಳವಡಿಸಲಾಗಿದೆ. ಇದರ ಜೊತೆಗೆ ವಿವಿಧ ಜೀವ ವೈವಿಧ್ಯ ಉದ್ಯಾನವನಗಳನ್ನು ನಿರ್ಮಿಸುವ ಯೋಜನೆ ರೂಪಿಸಿ, ಕಳೆದ ವರ್ಷ ಶಾಲಾ ಪೋಷಕರಲ್ಲೊಬ್ಬರಾದ ನೀಲಾದ್ರಿ ಫಾರಂನ ಧರ್ಮರಾಜ್ ದಂಪತಿಗಳ ಸಹಕಾರದಲ್ಲಿ ಮುಳ್ಳಿನ ಗಿಡಗಳ (ಕ್ಯಾಕ್ಟಸ್) ಸಂಗ್ರಹವನ್ನು ಆರಂಭಿಸಲಾಗಿದೆ. ಮುಂದಿನ ದಿನಗಳಲ್ಲಿ ಸೀತಾಳೆ, ನೀರಿನಲ್ಲಿ ಬೆಳೆಯುವ ಸಸ್ಯಗಳು, ಜರೀ ಸಸ್ಯಗಳು, ಔಷಧೀಯ ಸಸ್ಯಗಳ ಸಂಗ್ರಹದ, ಉದ್ಯಾನವನಗಳನ್ನು ನಿರ್ಮಿಸುವ ಯೋಜನೆಯಿದೆ. ಕೇರಳದ ಮಲಪ್ಪುರಂ ಜಿಲ್ಲೆಯ, ನಿಲಂಬೂರಿನ ತೇಗದ ಉದ್ಯಾನವನ ಮತ್ತು ಜೀವವೈವಿಧ್ಯ ಉದ್ಯಾನವನದ ಬಗ್ಗೆ ಕನ್ನಡದಲ್ಲಿ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಿ ಅಂತರ್ಜಾಲದಲ್ಲಿ ಬಿಡುಗಡೆ ಮಾಡಲಾಗಿದೆ. (https://www.youtube.com/watch?v=iTBxpLN6mRc)

ಕಳೆದ ಎರಡು ವರ್ಷಗಳಿಂದ ಅರಿವು ಶಾಲೆಯ ಸುಮಾರು ೧೦ ಮಕ್ಕಳು, ಮೈಸೂರು ಮೃಗಾಲಯ ಪ್ರತಿ ವರ್ಷ ನಡೆಸುವ "ಮೃಗಾಲಯ ಯೂತ್ ಕ್ಲಬ್"ನ ೬ ತಿಂಗಳ ವಾರಾಂತ್ಯ ಶಿಬಿರದಲ್ಲಿ ಭಾಗವಹಿಸಿದ್ದಾರೆ. ಇದರಿಂದ ಅವರು ಪರಿಸರದ ಬಗೆಗಿನ ಜ್ಞಾನ ಮತ್ತು ವೀಕ್ಷಣೆಯ ಕೌಶಲವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗಿದೆ.

ಇದಲ್ಲದೆ, ಶಾಲೆಯ ವೇಳಾಪಟ್ಟಿಯಲ್ಲೇ ವಾರಕ್ಕೊಂದು ಗಂಟೆಯಂತೆ ಪರಿಸರ ತರಗತಿಗಳನ್ನು ಪಿ. ಗುರುಪ್ರಸಾದ್, ಸಹನಾ, ಡಾ: ಅಭಿಜಿತ್ ರವರ ಸಹಾಯದಿಂದ ನಡೆಸಲಾಗುತ್ತಿದೆ.

ಜೊತೆಗೆ ಮೈಸೂರಿಗೆ ಭೇಟಿ ನೀಡುವ ದೇಶ, ವಿದೇಶದ ಅನೇಕ ಪರಿಸರ ತಜ್ಞರು ಅರಿವು ಶಾಲೆಯಲ್ಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಆಸಕ್ತ ಸಾರ್ವಜನಿಕರ ಜೊತೆ ಸಂವಾದಗಳನ್ನು ನಡೆಸಿಕೊಟ್ಟಿದ್ದಾರೆ. (ಉದಾ; ಉತ್ತರಾಖಾಂಡದ ಚಿಟ್ಟೆ ತಜ್ಞ–ಪೀಟರ್ ಸ್ಮಿಟಾಕ್, ಅಮೆರಿಕದ ಕಾಗೆ ತಜ್ಞ– ಪ್ರೊ. ಪಾಲ್ ಗ್ರೀನಾಹ್, ಪಶ್ಚಿಮ ಬಂಗಾಲದ ವಿಜ್ಞಾನಿ ಡಾ: ರಾಯ್)

ನಿರಂತರ ಮತ್ತು ನಿಯಮಿತವಾಗಿ ನಡೆಯುತ್ತಿರುವ ಈ ಎಲ್ಲಾ ಪ್ರಯತ್ನಗಳಿಂದ ಅರಿವು ಬಳಗದ ಸದಸ್ಯರು, ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಒಲವು ಮೂಡುವ ವಾತಾವರಣ ನಿರ್ಮಾಣವಾಗಿದೆ. ಇದರಿಂದ ಸಹಜವಾಗಿ ಪರಿಸರ ಪ್ರೀತಿ, ಜ್ಞಾನ ಹೆಚ್ಚಾಗಿ, ಸಂರಕ್ಷಣೆಯ ಅಗತ್ಯ ಮತ್ತು ಅನಿವಾರ್ಯತೆಯ "ಅರಿವು' ಮೂಡುತ್ತಿದೆ.●



ಅರಿವು ಶಾಲೆಯ ಮಕ್ಕಳು

ಅಧ್ಯಾಯ ೨
ಪಾಶ್ಚಾತ್ಯ ಆರ್ಥಿಕ ಸಂರಚನೆಗಳು

ಪಾಶ್ಚಿಮಾತ್ಯ ಅರ್ಥಿಕ ಸಂರಚನೆಯು ನಮ್ಮ ದೇಶದ ಆರ್ಥಿಕ ಸಂರಚನೆಗಿಂತ ತಡವಾಗಿ ವಿಕಾಸಗೊಂಡಿತು, ನಮ್ಮ ದೇಶದ ಭವಿಷ್ಯದ ಆರ್ಥಿಕ ಸಂರಚನೆಯು ಸರಿಯಾಗಿ ವಿಕಾಸಗೊಳ್ಳಲು ಬೇಕಾದ ಸದೃಢ ಭೂಮಿಕೆಯನ್ನು ನಾವು ನಿರ್ಮಿಸಿಬೇಕಿದೆ. ಹಾಗಾಗಿ ಈ ಪುಸ್ತಕದ ಉದ್ದೇಶವು ಅದಕ್ಕೆ ಬೇಕಾದ ವಿಚಾರಗಳಿಂದ ನಮ್ಮನ್ನು ಸನ್ನದ್ಧರನ್ನಾಗಿಸುವುದೇ ಆಗಿದೆ. ಆದಕ್ಕಾಗಿ ಪಾಶ್ಚಿಮಾತ್ಯ ಆರ್ಥಿಕ ಸಂರಚನೆಗಳ ಗುಣ ಅವಗುಣಗಳನ್ನು ಈ ಅಧ್ಯಾಯದಲ್ಲಿ ಪರಿಶೀಲಿಸೋಣ.

ವಿವಿಧ ಬಗೆಯ ಆಳ್ವಿಕೆ

ಪಾಶ್ಚಾತ್ಯ ಸಮಾಜವು, ಬೇಸಾಯ ಸಂಸ್ಕೃತಿಯ ಹಂತ ತಲುಪುವ ಮೊದಲೇ, ಕೈಗಾರಿಕೀಕರಣದ ಹಂತವನ್ನು ಪ್ರವೇಶಿಸಿಬಿಟ್ಟಿತ್ತು. ಹಾಗಾಗಿ, ಪಾಶ್ಚಾತ್ಯ ಆರ್ಥಿಕ ಸಂರಚನೆಗಳಲ್ಲಿ, ಬೇಟೆ ಮತ್ತು ಅಲೆಮಾರಿ ಸಂಸ್ಕೃತಿಯ ಗುಣಗಳು ಹೆಣೆದುಕೊಂಡು ಬಿಟ್ಟಿವೆ. ಈ ವ್ಯವಸ್ಥೆಯ ಕೇಂದ್ರಗಳಲ್ಲಿರುವ ವ್ಯಕ್ತಿಗಳ ಆಧಾರದ ಮೇಲೆ ಐದು ರೀತಿಯ ಆಳ್ವಿಕೆಯ ವ್ಯವಸ್ಥೆಗಳನ್ನು ಗುರುತಿಸಬಹುದು.

೧. ತೋಳ್ಬಲದ ಆಳ್ವಿಕೆ

೨. ಹಣ ಬಲದ ಆಳ್ವಿಕೆ

೩. ಯಂತ್ರ ಬಲದ ಆಳ್ವಿಕೆ

೪. ಶ್ರಮಿಕರ ಆಳ್ವಿಕೆ

೫. ಮಧ್ಯಮ ವರ್ಗದ ಆಳ್ವಿಕೆ

ತೋಳ್ಬಲದ ಆಳ್ವಿಕೆ :

ಊಳಿಗಮಾನ್ಯ ವ್ಯವಸ್ಥೆಯಲ್ಲಿ ನಾಯಕ ಅಥವಾ ಪಾಳಯಗಾರನಾದಂತಹವನು, ತನ್ನ ತಂಡದೊಡನೆ ಕೋಟೆಯಿಂದ, ಗ್ರಾಮಗಳಲ್ಲಿ ಇಳಿಯುತ್ತಾನೆ. ಅಲ್ಲಿನ ಉತ್ಪಾದಕ ಜನರು ತಾವು ಉತ್ಪಾದಿಸಿದ ಸಾಮಗ್ರಿಗಳಲ್ಲಿ ಒಂದು ಪಾಲನ್ನು ಇವನಿಗೆ ಒಪ್ಪಿಸಬೇಕು. ಇದನ್ನು ಅವನು ಖರೀದಿಸುವುದಿಲ್ಲ. ಅದಕ್ಕೆ ಬೆಲೆ ಅಥವಾ ಪ್ರತಿಫಲ ನೀಡುವುದಿಲ್ಲ. ಅವನು ಪರರ ಆಕ್ರಮಣದಿಂದ ರಕ್ಷಿಸುತ್ತಾನೆ ಎಂಬ ಕಾಲ್ಪನಿಕ ರಕ್ಷಣೆಗಾಗಿ ಈ ನಜರನ್ನು ಆ ಉತ್ಪಾದಕ ಜನರು ಅವನಿಗೆ ಒಪ್ಪಿಸುತ್ತಾರೆ. ಈ ನಾಯಕನಿಗೆ ಯಾವ ಜವಾಬ್ದಾರಿಯಾಗಲೀ ಜನರ ಯೋಗಕ್ಷೇಮದ ಹೊಣೆಯಾಗಲೀ ಇರುವುದಿಲ್ಲ. ಹೀಗೆ ಗ್ರಾಮದ ಜನ ಆತನಿಗೆ ಸಲ್ಲಿಸುವುದು ಅವನಿಗೆ ಪಾಳೆಯಗಾರ ವ್ಯವಸ್ಥೆಯನ್ನು ಮುಂದುವರೆಸಲು ಆಸ್ತಿಯಾಗುತ್ತವೆ. ಮಾಸ್ಕೋ ತಲುಪುವ ಹಾದಿಯಲ್ಲಿ ಅಸುನೀಗಿದ ಸೈನಿಕರಿಗಾಗಿ ನೆಪೋಲಿಯನ್ ಎಷ್ಟು ಕಾಳಜಿ ವಹಿಸಿದ ?

ಹಣದ ಬಲದ ಆಳ್ವಿಕೆ :

ಹದಿನೆಂಟನೆಯ ಶತಮಾನದ ಕೊನೆಗೆ ಹಣದ ಆಳ್ವಿಕೆ ಪ್ರಪಂಚದ ಮೇಲೆ ದಾಂಗುಡಿ ಇಟ್ಟಿತು. ಇದರ ಜೊತೆಗೆ ಶತಮಾನಗಳಿಂದ ಸಂಗ್ರಹಿತವಾದ ಬಂಡವಾಳ ಮತ್ತು ವಾಣಿಜ್ಯೀಕರಣಗೊಂಡ ಹೊಸ ಆವಿಷ್ಕಾರಗಳು ಸೇರಿಕೊಂಡವು.

ಆಗ ಬ್ರಿಟನ್ ಬಡ ದೇಶವಾಗಿತ್ತು, ಹೊರಗಿನಿಂದ ಆಮದಾಗಿಸಿಕೊಂಡ ಜ್ಞಾನವನ್ನು ಬಳಕೆ ಮಾಡಿಕೊಳ್ಳುವಷ್ಟು ಬಂಡವಾಳ ಅದರ ಬಳಿ ಇರಲಿಲ್ಲ. ಆದರೆ ಅದು ಅದಕ್ಕೊಂದು ಹಾದಿಯನ್ನು ಹುಡುಕಿಕೊಂಡಿತು. ಗಂಗೆಯಿಂದ ಥೇಮ್ಸ್‌ಗೆ ಅಪಾರ ಪ್ರಮಾಣದ ಚಿನ್ನ ಹರಿದುಬರುವಂತೆ ಮಾಡಕೊಂಡಿತು. ಈ ಹಿಂದೆ ಚರ್ಚಿಸಿದ ತೋಳ್ಬಲದ ಜನ, ತನ್ನ ಹಿತ ಈ ಹಣ ಬಲದ ಜತೆ ಸೇರಿಕೊಳ್ಳುವುದರಲ್ಲಿದೆ ಎಂದು ಭಾವಿಸಿತು. 'ತೋಳ್ಬಲ' ಮತ್ತು 'ಹಣ' – ಈ ಎರಡೂ 'ಸಾಮ್ರಾಜ್ಯವಾದ'ಕ್ಕೆ ದಾರಿ ಮಾಡಿಕೊಟ್ಟಿತು. ಪಾಳೆಯಗಾರ ವಸೂಲು ಮಾಡುತ್ತಿದ್ದ ಕೊಡುಗೆ ಅಥವಾ ಕಾಣಿಕೆ ಈ ವ್ಯವಸ್ಥೆಯಲ್ಲಿ "ಬಡ್ಡಿ" ಯ ರೂಪದಲ್ಲಿ ಸಲ್ಲಿಕೆಯಾಗತೊಡಗಿತು. ಈ ವ್ಯವಸ್ಥೆ ಕೇಂದ್ರಿಕೃತ ವ್ಯವಸೆಯಾಯಿತು. ಈ ವ್ಯವಸ್ಥೆಯ ನಿಯಂತ್ರಣವು ಒಂದೆಡೆ ಕೇಂದ್ರಿಕೃತವಾಗತೊಡಗಿತು. ಇದನ್ನು ಮುನ್ನಡೆಸುವ ವ್ಯಕ್ತಿ ಅಥವಾ ಗುಂಪಿನ ಮೇಲೆ ಇಲ್ಲಿಯ ಪ್ರತಿಯೊಂದು ಸಣ್ಣ ಘಟಕದ ಯಶಸ್ಸು ಅವಲಂಬಿತವಾಗತೊಡಗಿತು. ಸಾಂಘಿಕ ಕೆಲಸ ಅಥವಾ ಸಂಘಶಕ್ತಿಯ ರೂಪದಲ್ಲಿ ಕಾಣಿಸಿಕೊಳ್ಳುವ ಶಿಸ್ತು, ಗುಂಪಿನ ಕೆಲಸದಂತೆಯೇ ಇರುವ ಕ್ರೀಡೆಗಳಾದ ಕ್ರಿಕೆಟ್, ಫುಟ್‌ಬಾಲ್, ಹಾಕಿ, ದೋಣಿ ಸ್ಪರ್ಧೆ ಗಳಿಗೆ ಹಾದಿ ಮಾಡಿತು. ಈ ಕಾರಣದಿಂದಾಗಿ ಇವು ಆ ಕಾಲದಲ್ಲಿ ರಾಷ್ಟ್ರೀಯ ಕ್ರೀಡೆಗಳಾದವು. ಇದರಲ್ಲಿ ಯಶಸ್ಸು ಕಂಡವರು "ಹೀರೋ"ಗಳಾದರು. ಇವರೇ ಸಾಮ್ರಾಜ್ಯವನ್ನು ನಿರ್ವಹಣೆ ಮಾಡಬಲ್ಲವರು ಎಂದು ಪರಿಗಣಿಸಲಾಯಿತು.

'ಬಡ್ಡಿಯೇ' – ಮುಖ್ಯವಾದ ಈ ವ್ಯವಸ್ಥೆಯಲ್ಲಿಯೂ, ಉತ್ಪಾದಕನ ಯೋಗಕ್ಷೇಮ ಪರಿಗಣಿತವಾಗಲೇ ಇಲ್ಲ. ಉದಾಹರಣೆಗೆ ಬಡ್ಡಿ ಸಲೀಸಾಗಿ ಬರುತ್ತಿರುವವರೆಗೂ, ಬೆಲ್ಜಿಯಂನ ರಾಜ ಕಿಂಗ್‌ಲಿಯೋ ಪೋಲ್ಡ್‌ಗೆ ಕಾಂಗೋ ಮೂಲ ನಿವಾಸಿಗಳ ಛಿದ್ರಗೊಂಡ ದೇಹಗಳ ಬಗ್ಗೆ ಕಾಳಜಿಯೇ ಇರಲಿಲ್ಲ.

ಯಂತ್ರ ನಾಗರೀಕತೆ :

ಅಮೆರಿಕಾ ಇದಕ್ಕೆ ಉತ್ತಮ ಉದಾಹರಣೆ. ನಿಸರ್ಗ ಶಕ್ತಿಯ ಎದುರಿಗೆ ಮನುಷ್ಯ ಹತಪ್ರಭನಾಗುತ್ತಾನೆ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಅವನು ದೂರ,ದೂರದವರೆಗೂ ಕೈ ಚಾಚಬೇಕಾಗುತ್ತದೆ. ದಟ್ಟ ಅರಣ್ಯಗಳನ್ನು ಹೊಳೆಗಳನ್ನು ದಾಟಬೇಕಾಗುತ್ತದೆ. ಹಾಗಾಗಿ ಅವನು ಕೃತಕ ಕೈಗಳನ್ನು ಅನ್ವೇಷಿಸಿಕೊಳ್ಳಬೇಕಾಗುತ್ತದೆ. ಯಂತ್ರಗಳ ಹುಟ್ಟು ಹೀಗಾಗುತ್ತದೆ. ಇವು ಕೂಲಿ ಉಳಿಸುವ ಸಾಧನವೂ ಆಗುತ್ತವೆ.

ಈ ಆರ್ಥಿಕ ಸಂರಚನೆಯಲ್ಲಿ ಕೆಲವೇ ಕೆಲವರಲ್ಲಿ ಉತ್ಪಾದನೆಯ ನಿಯಂತ್ರಣ ಇರುತ್ತದೆ. ನಿಜವಾಗಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡವರು ಅಥವಾ ಉತ್ಪಾದಕರು ನಿರ್ಲಕ್ಷ್ಯಕ್ಕೆ ಒಳಗಾಗುತ್ತಾರೆ. ಉದಾಹರಣೆಗೆ ಚಿಕಾಗೋ ನಗರದ ಕಾರ್ಖಾನೆಯ ರೂಪದ ಕಸಾಯಿಖಾನೆಗಳಲ್ಲಿ ಕೆಲಸ ಮಾಡುವ ಕೆಲಸಗಾರರ ಶೋಷಣೆ ಎಷ್ಟಿದೆ ಎಂದರೆ ಕೆಲಸಗಾರರ ದೇಹವೇ ಮಾಂಸದ ಚೂರುಗಳಾಗಿ ಹೋದರೂ, ಆ ಮಾಂಸದ ಕಾರ್ಖಾನೆ ನಡೆಯುತ್ತಲೇ ಇರಬೇಕು.

ಶ್ರಮಜೀವಿಗಳ ಆಳ್ವಿಕೆ :

ಇಲ್ಲಿ 'ಶಿಸ್ತು' ಎಂಬುದು ವೇಗದ ಮತ್ತು ಉತ್ಪಾದಿತವಾದ ವಸ್ತುಗಳ ಪ್ರಮಾಣೀಕೃತ

ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ನಾನು ಹಿಂದೆ ತಿಳಿಸಿದ Pack Type (ಪ್ಯಾಕ್‌ಟೈಪ್) ನ ಎಲ್ಲ ಗುಣ –ಅವಗುಣಗಳನ್ನು ಇಲ್ಲಿ ಕಾಣಬಹುದು. ಇದರಲ್ಲಿ ಬರುವ ಲಾಭ ಯಂತ್ರದ ಒಡೆಯನ ಕಿಸೆ ಸೇರುತ್ತದೆ.

ಒಂದೇ ಒಂದು ಅವಕಾಶ ಲಭ್ಯವಾದರೂ, ಉತ್ಪಾದನೆಯಲ್ಲಿ ನಿಜವಾಗಿ ತೊಡಗಿಸಿಕೊಂಡ ಕೂಲಿಕಾರ ವರ್ಗ ಯಂತ್ರಗಳ ಮಾಲೀಕರು ಮತ್ತು ಬಂಡವಾಳಗಾರರ ವಿರುದ್ಧ ಬಂಡೇಳುತ್ತದೆ. ಆನಂತರದ ಹಂತದಲ್ಲಿ ಕೂಲಿಕಾರರು, ಈ ವ್ಯವಸ್ಥೆಯಲ್ಲಿ ಮೇಲಿನ ಸ್ಥಾನವನ್ನು ಪಡೆಯುತ್ತಾರೆ. ಕಮ್ಯುನಿಸಂ, ಹೀಗೆ ಸಂಘಟನೆಗೊಳ್ಳುತ್ತಾ ಹೋಗುತ್ತದೆ. ಕಮ್ಯುನಿಸಂ ಕೂಡ ನಾನು ಹಿಂದೆ ತಿಳಿಸಿದ Pack Type (ಪ್ಯಾಕ್‌ಟೈಪ್) ಸಂಸ್ಕೃತಿಯೇ! ಇಲ್ಲಿಯೂ ಅಧಿಕಾರ ಮತ್ತು ನಿಯಂತ್ರಣದ ಕೇಂದ್ರಿಕರಣವಿರುತ್ತದೆ. ನಿಜವಾಗಿ ಉತ್ಪಾದನೆ ಮತ್ತು ವಿತರಣೆಯಲ್ಲಿ ತೊಡಗಿಸಿಕೊಂಡವರ ಶೋಷಣೆಯನ್ನು ಇಲ್ಲೂ ಕಾಣಬಹುದು.

ಆದರೆ ಈ ವ್ಯವಸ್ಥೆಯಲ್ಲಿ ಗಳಿಸಿದ ಲಾಭ ಸಮುದಾಯದ ಒಟ್ಟು ಒಳಿತಿಗೆ ಬಳಕೆಯಾಗುತ್ತದೆ. ಈ ವ್ಯವಸ್ಥೆಯ ಪ್ರಧಾನ ಉದ್ದೇಶವೂ ಇದೇ! ಲಾಭದ ದೃಷ್ಟಿ ಕಡಿಮೆ. ಇದು ಕೂಲಿಕಾರರು ನಡೆಸುವ ವ್ಯವಸ್ಥೆ, ಆದರೆ ಅಧಿಕಾರದ ಕೇಂದ್ರದಲ್ಲಿ ಇರುವವರಿಗೆ ವಿಶೇಷ ಸವಲತ್ತು ಒದಗುತ್ತದೆ.

ಮಧ್ಯಮ ವರ್ಗದವರ ಆಳ್ವಿಕೆ :

ಇತ್ತೀಚಿನ ದಿನಗಳಲ್ಲಿ ಮಧ್ಯಮವರ್ಗದವರು ಅಧಿಕಾರ ಹಿಡಿಯಲು ಹೋರಾಡುವುದನ್ನು ಕಾಣಬಹುದು. ಇದು ಫ್ಯಾಸಿಸಂ ಮತ್ತು ನಾಜಿಸಂ ರೂಪದಲ್ಲಿ ಕಾಣಸಿಗುತ್ತದೆ. ಈ ಎರಡೂ ಸಿದ್ಧಾಂತಗಳೂ ಆಂತರ್ಯದಲ್ಲಿ ಬಂಡವಾಳಶಾಹಿ ಸಿದ್ಧಾಂತಗಳೇ ಆಗಿವೆ.

ಸಮಾನ ಲಕ್ಷಣಗಳು : ಮೇಲೆ ಪ್ರಸ್ತಾಪಿಸಿದ ಎಲ್ಲಾ ಆರ್ಥಿಕ ಸಂರಚನೆಗಳೂ ಪಟ್ಟಣ ಕೇಂದ್ರಿತವಾದದು. ಕಾಲ ಕಳೆದಂತೆಲ್ಲಾ, ಉತ್ಪಾದಕ ಸಮುದಾಯಗಳಲ್ಲಿ, ಸಹಜ ಗುಣ ಅಳಿದು ಭ್ರಷ್ಟ ಗುಣ ಆವರಿಸುತ್ತದೆ. ಅವನತಿಯ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಅವರಲ್ಲಿ ಸ್ಫೂರ್ತಿ, ಆದರ್ಶ, ಅಭೀಪ್ಸೆ, ಉತ್ಸಾಹ ಎಲ್ಲವೂ ನಾಶವಾಗುತ್ತವೆ. ಅವರಲ್ಲಿ ಕೇವಲ ಮೇಲಿನವರ ಆದೇಶ ಪಾಲಿಸುವಷ್ಟರ ಮಟ್ಟಿಗೆ ಅವನತಿ ಕಾಣಿಸಿಕೊಳ್ಳುತ್ತದೆ.

ಮಾನಸಿಕ ಅಸ್ವಸ್ಥತೆ : ಅಮೇರಿಕಾದಂತಹ ಸುವ್ಯವಸ್ಥಿತವಾದ ಬಂಡವಾಳವಾದೀ ದೇಶಗಳಲ್ಲಿ ಒಂದೆರಡು ತಲೆಮಾರಿನ ಅವಧಿಯ ಒಳಗೇ ಜನರಲ್ಲಿ ನರಸಂಬಂಧಿ ಅಸ್ವಸ್ಥತೆ ಕಾಣಿಸಿಕೊಂಡಿದೆ. ಇವು ಗಂಭೀರ ಸ್ವರೂಪದ್ದಾಗಿವೆ. ನ್ಯೂಯಾರ್ಕ್ ಪ್ರಾಂತ್ಯದಲ್ಲಿ, ೨೨ ಮಂದಿಯಲ್ಲಿ ಒಬ್ಬ, ಮಾನಸಿಕ ಪುನರ್ವಸತಿ ಕೇಂದ್ರದಲ್ಲಿ ಇರುತ್ತಾನೆ. ಈ ಆಸ್ಪತ್ರೆಗಳಲ್ಲಿ ೮೧ ಸಾವಿರ ಮಂದಿ ದುರ್ಬಲ ಮನಸ್ಸಿನವರೂ, ೪೦ ಸಾವಿರ ಮಂದಿ ಮಾನಸಿಕ ಸ್ಥಿಮಿತ ಕಳೆದುಕೊಂಡವರೂ ಇದ್ದಾರೆ. ಶಾಲೆಯಲ್ಲಿ ಪಾಠ ಪ್ರವಚನಗಳನ್ನು ಅನುಸರಿಸಲಾರದ ಸುಮಾರು ೪ ಲಕ್ಷ ಮಕ್ಕಳು ಇದ್ದಾರೆ. ದುರ್ಬಲ ಮನಸ್ಸಿನವರ ಸಂಖ್ಯೆ ಕ್ಷಯರೋಗಿಗಳಿಗಿಂತ ಹೆಚ್ಚು, ಕ್ಷಯ, ಕ್ಯಾನ್ಸರ್, ಹೃದ್ರೋಗ, ಮೂತ್ರಪಿಂಡದ ಸಮಸ್ಯೆಗಳು, ಟೈಫಸ್, ಕಾಲರಾ ಪ್ಲೇಗ್ ಇತ್ಯಾದಿ ರೋಗಗಳ ಒಟ್ಟು ರೋಗಿಗಳಿಗಿಂತ, ಇವರು ಹೆಚ್ಚು ಅಪಾಯಕಾರಿ. ಜನರನ್ನು ಈ ರೀತಿಯ ಸ್ಥಿತಿಗೆ ದೂಡುವ ಆರ್ಥಿಕ ವ್ಯವಸ್ಥೆ ಸೂಕ್ತವಲ್ಲ. ಈ ವ್ಯವಸ್ಥೆ ತನ್ನ ನಾಶದ ಬೀಜವನ್ನು ತನ್ನ ಒಡಲಲ್ಲಿಯೇ ಇಟ್ಟುಕೊಂಡಿರುತ್ತದೆ.

ಈ ಕಾರಣದಿಂದಾಗಿ ಈ ದೇಶಗಳಲ್ಲಿ 'ವಿರಾಮ' ದ ಚರ್ಚೆ ಮುನ್ನೆಲೆಗೆ ಬರುತ್ತದೆ.

ಈ ವ್ಯವಸ್ಥೆಯೇ ಅತ್ಯಂತ ಅಸಹಜವಾದ ಕಾರಣ ಇಲ್ಲಿ 'ವಿರಾಮ' ದ ಅಗತ್ಯ ಕಂಡು ಬರುತ್ತದೆ. ಸಹಜವಾದ ಕೆಲಸಗಳಲ್ಲಿ, ದೈಹಿಕ ಶ್ರಮದ ನಿವಾರಣೆಗೆ ನಿದ್ರೆಯಿಂದ ದೊರೆಯುವ ವಿರಾಮವೇ ಪುನಶ್ಚೇತನಕ್ಕೆ ಸಾಕು.

ಈ ಎಲ್ಲಾ ಆರ್ಥಿಕ ಸಂರಚನೆಗಳನ್ನು ಸಾರಾಸಗಟಾಗಿ ಪೂರ್ಣವಾಗಿ ವಿರೋಧಿಸಲು ಸಾಧ್ಯವಿಲ್ಲ. ನಾವು ಈ ಎರಡರ ನಡುವಣ ಹಾದಿಯನ್ನು ನಿರ್ಮಿಸಿಕೊಳ್ಳಬೇಕು ಮತ್ತು ಈ ಎರಡನ್ನೂ ಮಾರ್ಪಡಿಸಿಕೊಳ್ಳುವ ಅಗತ್ಯವಿದೆ.

ನಾವು 'ಲಾಭ' ಎನ್ನುವ ಚಾಲಕ ಶಕ್ತಿಯನ್ನು ನಿರ್ಲಕ್ಷಿಸಲಾಗುವುದಿಲ್ಲ, ಆದರೆ ಅದು ಒಂದೇ ಕಡೆ ಸಂಗ್ರಹಿತವಾಗುವುದನ್ನು ತಡೆಗಟ್ಟಬೇಕಾಗಿದೆ.

ಮನುಷ್ಯ ಕುಲದ ಪ್ರಗತಿ, ವ್ಯಕ್ತಿಗಳ ಬೆಳವಣಿಗೆಗಳ ಮೇಲೆ ನಿಂತಿದೆ. ಈ ಬೆಳವಣಿಗೆಗೆ ಸ್ವ-ಹಿತ, ವೈಯುಕ್ತಿಕ ಲಾಭ ಮತ್ತು ಅಲ್ಪ ಪ್ರಮಾಣದ ಸ್ವಾರ್ಥಕ್ಕೆ ಅವಕಾಶ ಕಲ್ಪಿಸಬೇಕು. ನಮ್ಮ ದೈನಂದಿನ ಬದುಕಿನಲ್ಲಿ ಈ ಪ್ರವೃತ್ತಿಗಳು ಹೇಗೆ ವ್ಯಕ್ತಿಯ ಬೆಳವಣಿಗೆಗೆ ಸಹಾಯ ಮಾಡುತ್ತದೆ ಎಂಬುದನ್ನು ಕಾಣಬಹುದು. ತಿಂಗಳ ಸಂಬಳಕ್ಕೆ ಮಾತ್ರ ದುಡಿಯುವ ಮನುಷ್ಯನಿಂದ ಸಮಾಜಕ್ಕೆ ವಿಶೇಷ ಕೊಡುಗೆಯನ್ನು ನಿರೀಕ್ಷಿಸಲಾಗುವುದಿಲ್ಲ. ತಮ್ಮ ಒಳಗಿನ ತುಡಿತಕ್ಕೆ ರೂಪ ಕೊಡಬೇಕೆನ್ನುವ ಸಾಹಸಿಗಳು ಮತ್ತು ಪ್ರಯತ್ನಶೀಲರಿಂದ ಹೊಸ ಸಂಶೋಧನೆಗಳು, ಅನ್ವೇಷಣೆಗಳು ಸಾಧ್ಯವಾಗಿದೆ.

ವಿಕೇಂದ್ರಿತವಾದ ಅರ್ಥ ಸಂರಚನೆಯಲ್ಲಿ ಕೂಲಿಕಾರನಿಗೆ ತನ್ನ ನಿಜವಾದ ಭಾಗ ಅಥವಾ ಪ್ರತಿಫಲ ದೊರೆಯುತ್ತದೆ. ಸಾಮುದಾಯಿಕ ಅರ್ಥ ಸಂರಚನೆಗಳಲ್ಲಿ ದೋಷಗಳಿವೆ ಎಂದೆನಿಸಿದರೆ, ವಿಕೇಂದ್ರಿಕೃತ ವ್ಯವಸ್ಥೆಯೇ ಪರ್ಯಾಯವಾಗುತ್ತದೆ.

ಸಣ್ಣ ಸಮುದಾಯದ ಒಳಗೆ ಸಾಮುದಾಯಿಕ ಉತ್ಪಾದನೆ ಯಶಸ್ವಿಯಾಗುವ (ಕೆಲಸ ಮಾಡುವ) ಸಾಧ್ಯತೆ ಇದೆ. ರಾಷ್ಟ್ರ ಅಥವಾ ದೇಶದ ಮಟ್ಟದಲ್ಲಿ ಹಾಗೂ ದೀರ್ಘಾವಧಿಯಲ್ಲಿ ಇದರ ಸಾಧ್ಯತೆಯ ಬಗ್ಗೆ ಅನುಮಾನಗಳಿವೆ. ಕೆಲವು ಆದರ್ಶವಾದಿಗಳು ಸೇರಿ ಆಶ್ರಯದಂತ ವ್ಯವಸ್ಥೆಯನ್ನು ಕಾರ್ಯಸಾಧು ಗೊಳಿಸಬಹುದು. ಆದರೆ ಈ ತತ್ವ, ಬೃಹತ್ ಪ್ರಮಾಣದಲ್ಲಿ, ಭಿನ್ನ ನಾಗರೀಕತೆಗಳ ಸಂದರ್ಭದಲ್ಲಿ ವೈವಿಧ್ಯಮಯವಾದ ಚಟುವಟಿಕೆಗಳಲ್ಲಿ ಕಾರ್ಯಸಾಧುವೇ ಎಂಬ ಅನುಮಾನಗಳು ಇವೆ.

ರಶಿಯಾದ ಕಮ್ಯುನಿಸ್ಟ್ ಪ್ರಯೋಗದಲ್ಲಿ ಕೂಡಾ ಬಾಗಿಲು ಮುಚ್ಚಿ, ಹೊರಗಿನವರ ಪ್ರವೇಶಕ್ಕೆ ಅವಕಾಶ ಇಲ್ಲದಂತೆ ಮಾಡಲಾಗುತ್ತಿದೆ. ಅಲ್ಲಿ ವಿಶ್ವದೊಡಗಿನ ವ್ಯಾಪಾರ ಪ್ರಭುತ್ವದ ಏಕಸ್ವಾಮ್ಯವಾಗಿದೆ. ಹೀಗಾಗಿ ರಶಿಯಾದ ಪ್ರಯೋಗಗಳು ಪ್ರಯೋಗಶಾಲೆಯಲ್ಲಿನ ಪ್ರಯೋಗಗಳು. ಸಾಮಾನ್ಯ ಸನ್ನಿವೇಶದಲ್ಲಿ ಮನುಷ್ಯ ಪ್ರಪಂಚ ಈ ರೀತಿ ವರ್ತಿಸುತ್ತದೆ ಎಂದು ಹೇಳಲಾಗುವುದಿಲ್ಲ.

ಬಂಡವಾಳವಾದೀ ಉತ್ಪಾದನಾ ವ್ಯವಸ್ಥೆಯಲ್ಲಿ ಲಾಭ ಒಂದು ಪ್ರಮುಖ ಚಾಲಕ ಶಕ್ತಿ, ಮನುಷ್ಯನ ಪ್ರಾಥಮಿಕ ಅಗತ್ಯದ ಸಾಮಾಗ್ರಿಗಳಿಂತ, ಐಷಾರಾಮಿ, ಅಥವಾ ಮೋಜು ಎನ್ನುವ ಪದಾರ್ಥಗಳು ಹೆಚ್ಚು ಲಾಭ ತರುತ್ತವೆ. ಹಾಗಾಗಿ ಫೇಸ್‌ಪೌಡರ್ ಮತ್ತು ಲಿಪ್‌ಸ್ಟಿಕ್‌ನಂತಹ ಮೋಜಿನ ಪದಾರ್ಥಗಳಿಗೆ ಆದ್ಯತೆ ನೀಡಲಾಗುತ್ತದೆ. ಫೇಸ್‌ಪೌಡರ್ ಮತ್ತು ಲಿಪ್‌ಸ್ಟಿಕ್ ತಯಾರಿಕೆ ಮತ್ತು ವಿತರಣೆ, ಚಾಪೆ ಮತ್ತು ಮಡಿಕೆಗಳ ತಯಾರಿಕೆ ಮತ್ತು ವಿತರಣೆಗಿಂತ ಸುಲಭವೂ ಹೌದು, ಲಾಭದಾಯಕವೂ ಹೌದು.

ಬಡವನ ಬಳಿಯ ಒಂದು ರೂಪಾಯಿ, ಆತನ ಮತ್ತು ಆತನ ಕುಟುಂಬದ ಎರಡು ದಿವಸದ ಆಹಾರಕ್ಕೆ ಆಗಬಹುದು, ಅದೇ ಕೋಟ್ಯಾಧಿಪತಿಯ ಬಳಿಯು ಒಂದು ರೂಪಾಯಿ

ಸಿಗರೇಟಿಗೋ, ಮದ್ಯಕ್ಕೆ ಖರ್ಚಾಗಬಹುದು. ಈ ಕಾರಣದಿಂದ, ಪ್ರಪಂಚದಲ್ಲಿ ಹಸಿವು ಮತ್ತು ಅತಿ ಉತ್ಪಾದನೆ ಏಕಕಾಲದಲ್ಲಿ ನೋಡಬಹುದು.

ನಾನು ಮೇಲೆ ತಿಳಿಸಿದಂತೆ, ಬಂಡವಾಳವಾದೀ ಮತ್ತು ಕಮ್ಯುನಿಸ್ಟ್ ವ್ಯವಸ್ಥೆಯಾಗಲೀ, ಕೇಂದ್ರೀಕೃತಗೊಂಡ ಉತ್ಪಾದನೆ ವ್ಯವಸ್ಥೆಯಲ್ಲಿ ದೀರ್ಘಾವಧಿಯಲ್ಲಿ ರಾಷ್ಟ್ರೀಯ ಅವನತಿ ಅಥವಾ ಭ್ರಷ್ಟತೆಗೆ ಎಡೆಮಾಡಿಕೊಡುತ್ತದೆ. ಇಲ್ಲಿ ಉತ್ಪಾದಕನ ಸಾಮರ್ಥ್ಯವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಲು ಸಾಧುವಾಗುವುದಿಲ್ಲ. ಅವಕಾಶ ಸೀಮಿತವಾಗಿರುತ್ತದೆ. ಈ ಅವಕಾಶಗಳ ಸೀಮಿತತೆಯೇ ಉದ್ಯಮ ಮತ್ತು ವ್ಯವಹಾರಗಳಲ್ಲಿ ನಮ್ಮ ಜನರ ಅವ್ಯವಹಾರಿಕ ನಡವಳಿಕೆಗೆ ಕಾರಣ. ನಮಗೆ ನಾವು ಜವಾಬ್ದಾರರಾದರೆ, ನಮ್ಮ ಮತ್ತು ನಮ್ಮಿಂದ ಉತ್ತಮ ಬೆಳವಣಿಗೆ ಸಾಧ್ಯ. ಆಗ ಮಾತ್ರ, ಉತ್ತಮ ದರ್ಜೆಯ ಪ್ರಜೆಗಳಿಂದ ದೇಶ ಕಟ್ಟಲು ಸಾಧ್ಯ. ವಿಕೇಂದ್ರಿಕೃತ ವ್ಯವಸ್ಥೆ ನಮ್ಮ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಅಗತ್ಯವಾಗಿದೆ. ಮನುಷ್ಯ ಯಂತ್ರವಾಗಬಾರದು. ಅವನ ಕೈಗಳಲ್ಲಿ ಯಂತ್ರ ಇರಬೇಕು. ಯಂತ್ರಕ್ಕೋಸ್ಕರ ಮನುಷ್ಯನ ಅಸ್ತಿತ್ವ ಇಲ್ಲ.

ಕಮ್ಯುನಿಸ್ಟ್ ವ್ಯವಸ್ಥೆಯಲ್ಲಿ ವ್ಯಕ್ತಿ ನಗಣ್ಯ. ಸಮಾಜ ವ್ಯಕ್ತಿಗೆ ಲೌಕಿಕ ಸಂಪತ್ತು ನೀಡಬಹುದು. ಆದರೆ ಅವನ ವ್ಯಕ್ತಿತ್ವವೇ ನಾಶವಾದರೆ, ಉಪಯೋಗವಾದರೂ ಏನು ? ಈ ಉತ್ಪಾದನಾ ವ್ಯವಸ್ಥೆಯಲ್ಲಿನ ಮಿಲಿಟರಿ ಶಿಸ್ತು, ಅವನ ಬೆಳವಣಿಗೆಗೆ ಮಾರಕ. ಸೋವಿಯತ್ ಕಮ್ಯುನಿಸಂ ವರ್ಗ ದ್ವೇಷವನ್ನೇ ಆಧರಿಸಿದ ವ್ಯವಸ್ಥೆ

ಹಿಂಸೆ :

ಸಾಮ್ರಾಜ್ಯ ಶಾಹಿ ವ್ಯವಸ್ಥೆಯಲ್ಲಿ ಅಪರಿಚಿತರ ಮತ್ತು ವಿದೇಶಿಯರ ವಿರುದ್ಧ ಹಿಂಸೆ ಬಳಕೆಯಾಗುತ್ತದೆ. ಕಮ್ಯುನಿಸಂನಲ್ಲಿ ಅದರ ಆತಂಕ ಮಟ್ಟದಲ್ಲಿಯೇ ಹಿಂಸೆ ಇರುತ್ತದೆ. ಬುರ್ಜ್ವಾ ವರ್ಗದವರನ್ನು ಮಣಿಸಲು ಈ ಹಿಂಸೆ ಬಳಕೆಯಾಗುತ್ತದೆ. ಮಾನವೀಯತೆಯಲ್ಲಿ ವಿಶ್ವಾಸ ಉಳ್ಳ ಯಾರೂ, ಯಾವುದೇ ಗುಂಪಿನ ಮೇಲೂ ಹಿಂಸೆಯನ್ನು ಬಳಸುವುದಿಲ್ಲ. ವರ್ಗದ್ವೇಷದ ಆಧಾರದ ಮೇಲೆ ಹೊಸ ಸಮಾಜದ ನಿರ್ಮಾಣ ಅಸಾಧ್ಯ. ನಾವು ಗಾಳಿಯನ್ನು ಬಿತ್ತಿದರೆ, ಅದರ ಫಲ ಸುಂಟರಗಾಳಿ ಅಥವಾ ಬಿರುಗಾಳಿ !

ನಾವು ಯಾವುದೇ ಸರಕಾರ ಮತ್ತು ವ್ಯವಸ್ಥೆ ಅನುಸರಿಸಿದರೂ, ಹಿಂಸೆ ಅನಿವಾರ್ಯ ಎಂದು ಪ್ರತಿಪಾದಿಸಲಾಗುತ್ತದೆ. ನಿಜ, ಅಲ್ಪ ಪ್ರಮಾಣದಲ್ಲಿ ಹಿಂಸೆ ಬಳಕೆಯಾಗುತ್ತದೆ. ಇಲ್ಲಿ ಹಿಂಸೆಗೆ ಕಾರಣವಾದ ಸನ್ನಿವೇಶ ಮತ್ತು ಪ್ರಮಾಣ ಮುಖ್ಯವಾಗುತ್ತದೆ. ತಂದೆ, ಮಗನಿಗೆ ಶಿಕ್ಷೆ ನೀಡುತ್ತಾನೆ. ಈ ಶಿಕ್ಷೆಯಲ್ಲಿ ಹಿಂಸೆ ಇರುತ್ತದೆ. ಸರಕಾರ ನಡೆಸುವಾಗಲೂ (ಆರ್ಥಿಕ ಸಂರಚನೆಗಳ ಸಂದರ್ಭದಲ್ಲಿ) ಈ ರೀತಿಯ ಹಿಂಸೆ ಇರುತ್ತದೆ. ಇದು ನಮ್ಮ ಮೇಲೆ ನಾವೇ ವಿಧಿಸಿಕೊಂಡ ಶಿಸ್ತು, ಸ್ವಯಂ ಶಿಸ್ತು. ●

(ಜೆ.ಇ.ಕುಮಾರಪ್ಪನವರ ಗ್ರಾಮೀಣ ಆಂದೋಲನ ಏಕೆ ಪುಸ್ತಕದ ಅನುವಾದ. ಅನುವಾದಕರು ಶ್ರೀ ಕೆ. ವೆಂಕಟರಾಜು)

ಹರಿಲಾಲ್ ಗಾಂಧಿ ಕಥನ-೩

ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹಿಯಾಗಿ ಹರಿಲಾಲ್

೧೯೦೬ ರ ಮೇ ತಿಂಗಳಿನಲ್ಲಿ ವಿವಾಹವಾದ ನಂತರ ಮೂರು ತಿಂಗಳು ಮಾತ್ರ ಹರಿಲಾಲ್ ಗಾಂಧಿ ಭಾರತದಲ್ಲಿದ್ದರು. ನಂತರ ತಂದೆಯ ಕರೆಗೆ ಓಗೊಟ್ಟು, ತಮ್ಮ ಪತ್ನಿ ಗುಲಾಬ್ ಬೆಹನ್ ಅವರನ್ನು ಅವರ ತವರು ಮನೆಯಲ್ಲಿರಿಸಿ ದಕ್ಷಿಣ ಆಫ್ರಿಕಾದತ್ತ ಪ್ರಯಾಣ ಬೆಳಸಿದರು. ತಮ್ಮ ಪುತ್ರನ ಪ್ರಯಾಣದ ವೆಚ್ಚಕ್ಕಾಗಿ ಗಾಂಧೀಜಿಯವರು ಯಾವುದೇ ಹಣ ಕಳಿಸಿರಲಿಲ್ಲ ಹಾಗಾಗಿ ಹರಿಲಾಲ್ ಅವರು ಸಂಬಂಧಿಯಾದ ಕುಶಾಲ್ ಚಂದ್ ಎಂಬುವವರ ಬಳಿ ಹತ್ತು ಪೌಂಡ್ ಹಣವನ್ನು ಸಾಲವನ್ನಾಗಿ ಪಡೆದು ತೃತಿಯ ದರ್ಜೆಯ ವರ್ಗದಲ್ಲಿ ಹಡಗಿನ ಮೂಲಕ ಪ್ರಯಾಣ ಬೆಳೆಸಿದರು. ತಮ್ಮ ಪುತ್ರ ಹರಿಲಾಲ್ ದಕ್ಷಿಣಾ ಆಫ್ರಿಕಾದತ್ತ ಬರುತ್ತಿರುವ ವಿಷಯ ತಿಳಿದು ಗಾಂಧೀಜಿಯವರು ಸಂತೋಷಪಟ್ಟರು. ೧೯೦೬ ರ ಸೆಪ್ಟಂಬರ್ ಕೊನೆಯ ವಾರದಲ್ಲಿ ಹೊರಟ ಹರಿಲಾಲ್ ಅಕ್ಟೋಬರ್ ತಿಂಗಳಿನಲ್ಲಿ ದಕ್ಷಿಣ ಆಫ್ರಿಕಾವನ್ನು ತಲುಪಿದರು.

ವಾಸ್ತವವಾಗಿ ಗಾಂಧೀಜಿಯವರಿಗೆ ತಮ್ಮ ಪುತ್ರ ಹರಿಲಾಲ್ ಆತುರದಲ್ಲಿ ವಿವಾಹವಾದದ್ದು ವೈಯುಕ್ತಿಕವಾಗಿ ಇಷ್ಟವಿರಲಿಲ್ಲ. ಇದರ ಜೊತೆಗೆ ಅವರ ಹಿರಿಯ ಸಹೋದರ ಲಕ್ಷ್ಮಿದಾಸ್ ರವರು ಹರಿಲಾಲ್‌ಗಾಂಧಿ ಮತ್ತು ಗುಲಾಬ್ ಬೆಹನ್ ವಿವಾಹಕ್ಕಾಗಿ ದುಂದು ವೆಚ್ಚ ಮಾಡಿದ ವಿಷಯ ತಿಳಿದು ಅವರು ಬೇಸರಗೊಂಡಿದ್ದರು. ನಂತರದ ದಿನಗಳಲ್ಲಿ ಅವರ ಸಹೋದರ ಗಾಂಧೀಜಿಯವರಿಗೆ ಪತ್ರ ಬರೆದು ಹಣವನ್ನು ಕೇಳಿದಾಗ ವಿವಾಹದ ವೆಚ್ಚವನ್ನು ಭರಿಸಲು ಅವರು ನಿರಾಕರಿಸಿದರಲ್ಲದೆ, ಹಣ ಕಳಿಸಲಾಗದ ತಮ್ಮ ಆರ್ಥಿಕ ದುಸ್ಥಿತಿಯನ್ನು ಸಹೋದರನಿಗೆ ಪತ್ರದ ಮೂಲಕ ವಿವರಿಸಿದರು. ೧೯೦೭ ರ ಏಪ್ರಿಲ್ ತಿಂಗಳಿನಲ್ಲಿ ಬರೆದಿರುವ ಪತ್ರದಲ್ಲಿ ತಮ್ಮ ಪುತ್ರ ಹರಿಲಾಲ್ ಗಾಂಧಿಯ ವಿವಾಹದ ಬಗ್ಗೆ ಪ್ರಸ್ತಾಪಿಸುತ್ತಾ, "ವಿವಾಹ ಕುರಿತಂತೆ ನಾನು ಯಾವ ವಿರೋಧವನ್ನು ವ್ಯಕ್ತ ಪಡಿಸಲಾರೆ ಜೊತೆಗೆ ವಿವಾಹಕ್ಕೆ ನನ್ನ ಸಂಪೂರ್ಣ ಸಮ್ಮತಿಯಿದೆ ಎಂದು ಸಹ ಹೇಳಲಾರೆ" ಎಂದು ಮಾರ್ಮಿಕವಾಗಿ ತಮ್ಮ ಮನದಾಳದ ಭಾವನೆಗಳನ್ನು ಹೊರಹಾಕಿದ್ದರು. ಆರಂಭದಲ್ಲಿ ಈ ಕುರಿತು ಅವರಿಗೆ ನಿರಾಶೆಯಾದರೂ ಸಹ ನಂತರದ ದಿನಗಳಲ್ಲಿ ಎಲ್ಲವನ್ನೂ ಮರೆತು ತಮ್ಮ ಪುತ್ರ ಹಾಗೂ ಸೊಸೆಯನ್ನು ಪ್ರೀತಿಸುತ್ತಾ ಕಾಳಜಿ ಮಾಡತೊಡಗಿದರು.

ಹರಿಲಾಲ್ ಜೋಹಾನ್ಸ್ ಬರ್ಗ್ ನಗರದಲ್ಲಿದ್ದ ತಮ್ಮ ಕುಟುಂಬವನ್ನು ಸೇರಿಕೊಂಡ ನಂತರ ಶಿಕ್ಷಣ ಮುಂದುವರಿಸಲು ಪ್ರಯತ್ನಿಸಿದರು. ಆದರೆ, ಅದು ಸಾಧ್ಯವಾಗದೆ, ಮನೆಯಲ್ಲಿ ತಮ್ಮ ತಂದೆಯಿಂದ ಇತರೆ ಸಹೋದರರ ಜೊತೆ ಕುಳಿತು ಶಿಕ್ಷಣ ಪಡೆಯತೊಡಗಿದರು. ಆನಂತರ ಹರಿಲಾಲ್ ಗಾಂಧಿಯನ್ನು ಫೋನಿಕ್ಸ್ ಆಶ್ರಮಕ್ಕೆ ಕಳಿಸಿಕೊಡಲಾಯಿತು. ಅವರು ಅಲ್ಲಿನ ಪ್ರಿಂಟಿಂಗ್ ಪ್ರೆಸ್ ನಲ್ಲಿ ದುಡಿಯತೊಡಗಿದರು. ಫೊನಿಕ್ಸ್ ಆಶ್ರಮದಿಂದ " ಇಂಡಿಯನ್ ಒಪಿನಿಯನ್" ಎಂಬ ಪತ್ರಿಕೆಯನ್ನು ಗಾಂಧೀಜಿಯವರು ಪ್ರಕಟಿಸುತ್ತಿದ್ದುದರಿಂದ ಆಶ್ರಮವು ಪತ್ರಿಕೆಯ ಕಚೇರಿ ಕೂಡ ಆಗಿತ್ತು. ಕಚೇರಿಗಾಗಿ ಪ್ರತಿ ದಿನ ಹರಿಲಾಲ್ ಜೋಹಾನ್ಸ್ ಬರ್ಗ್ ನಗರದಿಂದ ಬಂದು ಹೋಗಬೇಕಿತ್ತು. ದಿನ ನಿತ್ಯದ ಪ್ರಯಾಣ, ದಣಿವು, ಪತ್ನಿಯನ್ನು ತೊರೆದು ಬಂದ ವಿರಹ ವೇದನೆ

ಹೀಗೆ ಹರಿಲಾಲ್ ಮಾನಸಿಕವಾಗಿ ಮತ್ತು ದೈಹಿಕವಾಗಿ ಕುಗ್ಗಿ ಹೋದರು. ಇದನ್ನು ಸೂಕ್ಷ್ಮವಾಗಿ ಗಮನಿಸಿದ ಗಾಂಧೀಜಿಯವರು ಹರಿಲಾಲ್ ಅವರ ಮಾವನಿಗೆ ಪತ್ರ ಬರೆದು ತಮ್ಮ ಸೊಸೆ ಗುಲಾಬ್ ಬೆಹನ್ ಳನ್ನು ದಕ್ಷಿಣ ಆಫ್ರಿಕಾಕ್ಕೆ ಬರುವ ಭಾರತಿಯರ ಜೊತೆ ಕಳುಹಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು. ತಮ್ಮ ಸೊಸೆ ಮಗನ ಜೊತೆ ಮನೆಯಲ್ಲಿರುವುದು ಒಳಿತೆಂದು ಕಸ್ತೂರಬಾ ಕೂಡ ತಮ್ಮ ಪತಿಗೆ ಸಲಹೆ ನೀಡಿದ್ದರು. ಆದರೆ, ದಕ್ಷಿಣ ಆಫ್ರಿಕಾಕ್ಕೆ ಹೋಗುವ ಯಾವೊಬ್ಬ ಪ್ರಯಾಣಿಕ ಸಿಗದಿದ್ದಾಗ ಅಂತಿಮವಾಗಿ ೧೯೦೭ ರ ಮೇ ತಿಂಗಳಿನಲ್ಲಿ ಹರಿಲಾಲ್ ಅವರನ್ನು ಭಾರತಕ್ಕೆ ಕಳುಹಿಸಿ, ಗಾಂಧೀಜಿಯವರು ತಮ್ಮ ಸೊಸೆಯನ್ನು ದಕ್ಷಿಣ ಆಫ್ರಿಕಾಕ್ಕೆ ಕರೆಸಿಕೊಂಡರು.

೧೯೦೭ ರ ಸೆಪ್ಟಂಬರ್ ತಿಂಗಳಿನಲ್ಲಿ ಗುಲಾಬ್ ಬೆಹನ್ ರವರ ತಂದೆ ಗಾಂಧೀಜಿಯವರ ಆಹ್ವಾನದ ಮೇರೆಗೆ ದಕ್ಷಿಣ ಆಫ್ರಿಕಾಕಕ್ಕೆ ಆಗಮಿಸಿ,ಫೊನಿಕ್ಸ್ ಆಶ್ರಮದಲ್ಲಿದ್ದ ತಮ್ಮ ಪುತ್ರಿ ಹಾಗೂ ಅಳಿಯನನ್ನು ಸೇರಿಕೊಂಡರು. ಅವರು ಬರುವ ವೇಳೆಗೆ ದಕ್ಷಿಣ ಆಫ್ರಿಕಾದ ರಾಜಕೀಯದಲ್ಲಿ ಕಲಹ ಆರಂಭಗೊಂಡಿತ್ತು. ಟ್ರಾನ್ಸ್ ವಾಲ್ ನಗರದಲ್ಲಿ ಪರಿಸ್ಥಿತಿ ಉದ್ವಿಗ್ನತೆಯಿಂದ ಕೂಡಿತ್ತು. ಅಲ್ಲಿನ ಸರ್ಕಾರ ಭಾರತೀಯರ ವಿರುದ್ಧ ತೆರಿಗೆ ವಿಧಿಸುವುದು, ಅವರ ನೊಂದಣಿಯನ್ನು ಕಡ್ಡಾಯಗೊಳಿಸುವುದು ಸೇರಿದಂತೆ ಹಲವು ಮಸೂದೆಗಳನ್ನು ಜಾರಿಗೆ ತಂದಿತ್ತು. ಗಾಂಧೀಜಿಯವರ ನೇತೃತ್ವದಲ್ಲಿ ಈ ಕಾನೂನಿಗೆ ಪ್ರಬಲವಾಗಿ ವಿರೋಧಿಸಲಾಯಿತು. ಜೊತೆಗೆ ಮಹಾತ್ಮ ಗಾಂಧಿಯವರು ಇಂಗ್ಲೆಂಡಿಗೆ ನಿಯೋಗವನ್ನು ಕೊಂಡೊಯ್ದು ಭಾರತೀಯರ ವಿರುದ್ಧ ಅನುಸರಿಸುತ್ತಿರುವ ತಾರತಮ್ಯ ನೀತಿಯನ್ನು ಬ್ರಿಟನ್ ಸರ್ಕಾರಕ್ಕೆ ಮನದಟ್ಟು ಮಾಡಿಕೊಟ್ಟರು. ಮಸೂದೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದ ದಕ್ಷಿಣ ಆಫ್ರಿಕಾ ಸರ್ಕಾರ, ಪುನಃ ಅದನ್ನು ಜಾರಿಗೆ ತಂದಾಗ ಗಾಂಧೀಜಿಯವರ ನೇತೃತ್ವದಲ್ಲಿ ಸತ್ಯಾಗ್ರಹ ಆರಂಭವಾಯಿತು. ಭಾರತೀಯರು ತಮ್ಮ ಹೆಸರನ್ನು ನೊಂದಣಿ ಮಾಡಿಕೊಳ್ಳಬಾರದು ಎಂದು ಕರೆ ನೀಡಿದ ಗಾಂಧಿಯವರನ್ನು ಅಲ್ಲಿನ ಸರ್ಕಾರ ೧೯೦೭ ರ ಡಿಸಂಬರ್ ತಿಂಗಳಿನಲ್ಲಿ ಬಂಧಿಸಿ ಎರಡು ತಿಂಗಳ ಕಾಲ ಸೆರೆಮನೆ ವಾಸ ವಿಧಿಸಿತು. ಇದೇ ಸಂದರ್ಭದಲ್ಲಿ ಫೊನಿಕ್ಸ್ ಆಶ್ರಮದಲ್ಲಿ ಹರಿಲಾಲ್ ಮತ್ತು ಗುಲಾಬ್ ಬೆಹನ್ ದಂಪತಿಗಳು ವಾಸವಾಗಿದ್ದರು. ಗರ್ಭವತಿಯಾಗಿದ್ದ ಗುಲಾಬ್ ಬೆಹನ್ ಅವರಿಗೆ ಆಶ್ರಮದಲ್ಲಿ ಸೀಮಂತ ಕಾರ್ಯಕ್ರಮವನ್ನು ನೆರವೇರಿಸಲಾಯಿತು.

೧೯೦೮ ರ ಜನವರಿ ೩೦ ರಂದು ದಕ್ಷಿಣ ಆಫ್ರಿಕಾ ಸರ್ಕಾರವು ಗಾಂಧೀಜಿಯವರನ್ನು ಬಿಡುಗಡೆ ಮಾಡಿತು. ಸರ್ಕಾರದ ಜೊತೆ ನಡೆದ ಒಪ್ಪಂದದ ಪ್ರಕಾರ ಗಾಂಧೀಜಿಯವರು ಪ್ರಥಮವಾಗಿ ಅಲ್ಲಿನ ಸರ್ಕಾರದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿದರು. ಅವರು ಹೆಸರು ನೊಂದಣಿ ಮಾಡಿಸಲು ಕಚೇರಿಗೆ ಹೋಗಿದ್ದ ಸಂದರ್ಭದಲ್ಲಿ ಮೀರ್ ಆಲಂ ಎಂಬ ಭಾರತೀಯ ಮೂಲದ ವ್ಯಕ್ತಿಯೊಬ್ಬ ಗಾಂಧೀಜಿಯ ಮೇಲೆ ಹಲ್ಲೆ ನಡೆಸಿದನು. ಹಲ್ಲೆಗೆ ನಿಕಟ ಕಾರಣ ತಿಳಿಯಲಿಲ್ಲವಾದರೂ ಆ ಸಂದರ್ಭದಲ್ಲಿ ಹರಿಲಾಲ್ ತಂದೆಯ ಜೊತೆ ಇರಲಿಲ್ಲವಾದ್ದರಿಂದ ಗಾಂಧೀಜಿ ತೀವ್ರತರ ಹಲ್ಲೆಗೆ ತುತ್ತಾದರು. ೧೯೦೮ ಏಪ್ರಿಲ್ ೧೦ ರಂದು ಹರಿಲಾಲ್ ಮತ್ತು ಗುಲಾಬ್ ಬೆಹನ್ ದಂಪತಿಗಳಿಗೆ ಹೆಣ್ಣು ಮಗುವಿನ ಜನನವಾಯಿತು. ರಾಮನವಮಿ ದಿವಸ ಮೊಮ್ಮಗಳು ಜನಿಸಿದ್ದರಿಂದ ಗಾಂಧೀಜಿಯವರು ಹೆಣ್ಣು ಮಗುವಿಗೆ ರಾಮಿ ಎಂದು ನಾಮಕರಣ ಮಾಡಿದರು.

ಇತ್ತ ಟ್ರಾನ್ಸ್‌ವಾಲ್ ಪ್ರಾಂತ್ಯದ ಸರ್ಕಾರವು ಭಾರತೀಯ ನಾಗರಿಕರು ಸತ್ಯಾಗ್ರಹದ ಮೂಲಕ ಇರಿಸಲಾಗಿದ್ದ ಯಾವೊಂದು ಬೇಡಿಕೆಯನ್ನು ಈಡೇರಿಸಲಿಲ್ಲ. ಸ್ಥಳಿಯ ಭಾರತೀಯರು ಇದನ್ನು ಪ್ರತಿಭಟಿಸಿ, ಅಲ್ಲಿನ ಸರ್ಕಾರದಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳದೆ ವ್ಯವಹಾರದಲ್ಲಿ

ನಿರತರಾದರು. ಅಲ್ಲಿದ್ದ ಬಹುತೇಕ ಭಾರತೀಯರು ವ್ಯಾಪಾರಸ್ಥರಾಗಿದ್ದರಿಂದ ಅವರುಗಳು ತಮ್ಮ ವ್ಯಾಪಾರ, ವಹಿವಾಟುಗಳಿಗೆ ಪರವಾನಗಿ ಪಡೆದುಕೊಳ್ಳಲು ನಿರಾಕರಿಸುವುದರ ಮೂಲಕ ವ್ಯವಹಾರ ನಡೆಸುತ್ತಾ ಅಲ್ಲಿನ ಸರ್ಕಾರದ ವಿರುದ್ಧ ತಮ್ಮ ಪ್ರತಿಭಟನೆ ಸೂಚಿಸಿದರು. ಟ್ರಾನ್ಸ್ ವಾಲ್ ನಗರದಲ್ಲಿ ವ್ಯಾಪಾರ ಮತ್ತು ವಹಿವಾಟು ನಡೆಸಲು ಪರವಾನಗಿ ಕಡ್ಡಾಯವಾಗಿತ್ತು. ಪರವಾನಗಿ ಪಡೆಯದೆ ವ್ಯಾಪಾರ ಮಾಡುತ್ತಿದ್ದ ಭಾರತೀಯರ ಮೇಲೆ ಸರ್ಕಾರ ಮೊಕದ್ದಮೆ ದಾಖಲಿಸಿದಾಗ; ಗಾಂಧೀಜಿಯವರು ಭಾರತೀಯರ ಪರವಾಗಿ ವಕಾಲತ್ತು ವಹಿಸತೊಡಗಿದರು. ಇದು ಭಾರತೀಯರಿಗೆ ನೈತಿಕ ಸ್ಥೈರ್ಯವನ್ನು ತಂದುಕೊಟ್ಟಿತು. ಪರಿಸ್ಥಿತಿ ಕೈ ಮೀರುತ್ತಿರುವುದನ್ನು ಗಮನಿಸಿದ ಟ್ರಾನ್ಸ್‌ವಾಲ್ ಸರ್ಕಾರವು ವಲಸಿಗರ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತಂದು ವಿದ್ಯಾವಂತ ಭಾರತೀಯರು ಟ್ರಾನ್ಸ್ ವಾಲ್ ನಗರ ಪ್ರವೇಶಿಸದಂತೆ ತಡೆಯಿತು. ಅತಿಕ್ರಮ ಪ್ರವೇಶ ಮಾಡಿದವರನ್ನು ಬಂಧಿಸಿ ಸೆರೆಮನೆಗೆ ಕಳಿಸಲು ಆರಂಭಿಸಿತು.

ಹರಿಲಾಲ್ ಗಾಂಧಿ ಫೊನಿಕ್ಸ್ ಆಶ್ರಮದಲ್ಲಿದ್ದುಕೊಂಡು, ಈ ಎಲ್ಲಾ ಬೆಳವಣಿಗೆಯ ಜೊತೆಗೆ ತನ್ನ ತಂದೆ ಗಾಂಧೀಜಿ ನಡೆಸುತ್ತಿರುವ ಹೋರಾಟವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಇಂತಹ ಹೋರಾಟದಲ್ಲಿ ಭಾಗವಹಿಸುವುದು ಹಾಗೂ ಬಿಳಿಯರ ವರ್ಣಬೇಧ ನೀತಿಯಿಂದ ಬಳಲುತ್ತಿರುವ ಭಾರತೀಯರು ಸೇರಿದಂತೆ ಎಲ್ಲಾ ಕಪ್ಪು ಮತ್ತು ಕಂದು ಬಣ್ಣದ ಜನಾಂಗದ ಜೊತೆ ನಿಲ್ಲುವುದು ನಮ್ಮೆಲ್ಲರ ಕರ್ತವ್ಯ ಎಂದು ಭಾವಿಸಿದರು. ಅದರಂತೆ ಹೋರಾಟದಲ್ಲಿ ಭಾಗವಹಿಸಲು ಹರಿಲಾಲ್ ಫೊನಿಕ್ಸ್ ಆಶ್ರಮದಿಂದ ಹೊರಟು ನಿಂತಾಗ ಹರಿಲಾಲ್ ಗೆ ಆಶ್ರಮವಾಸಿಗಳು ಸನ್ಮಾನಿಸಿ ಕಳುಹಿಸಿದರು. ಈ ಪ್ರಸಂಗವನ್ನು ಅವರ ಕಿರಿಯ ಸಹೋದರ ದೇವದಾಸ್ ಗಾಂಧಿ ಹೆಮ್ಮೆಯಿಂದ ಸ್ಮರಿಸಿಕೊಂಡಿದ್ದಾರೆ.

೧೯೦೮ ರ ಜುಲೈ ೪ ರಂದು ಹರಿಲಾಲ್ ಗಾಂಧಿಯು ಟ್ರಾನ್ಸ್‌ವಾಲ್ ನಗರವನ್ನು ಪ್ರವೇಶಿಸಿ, ಸರ್ಕಾರದ ಆದೇಶವನ್ನು ಧಿಕ್ಕರಿಸಿ, ಅಲ್ಲಿನ ಪರವಾನಗಿ ಪಡೆಯದೆ ಪುಟ್ಟದಾದ ವ್ಯಾಪಾರವನ್ನು ಆರಂಭಿಸಿದರು. ಜುಲೈ ೨೭ ರಂದು ಪೋಲಿಸರು ಅವರನ್ನು ಬಂಧಿಸಿದರು. ಮರುದಿನ ಹಲವಾರು ಸತ್ಯಾಗ್ರಹಿಗಳ ಜೊತೆ ಹರಿಲಾಲರನ್ನೂ ಸಹ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ತಮ್ಮ ಪುತ್ರನ ಹೋರಾಟದ ಬಗ್ಗೆ ಹೆಮ್ಮೆಪಟ್ಟ ಗಾಂಧಿಜಿಯವರು " ಯಾವುದೇ ಕಾರಣಕ್ಕೂ ನ್ಯಾಯಾಲಯ ವಿಧಿಸುವ ಜುಲ್ಮಾನೆಯನ್ನು ಒಪ್ಪಿಕೊಳ್ಳಬೇಡ, ಅದರ ಬದಲು ಸೆರೆಮನೆ ವಾಸವನ್ನು ಒಪ್ಪಿಕೊ" ಎಂದು ತಮ್ಮ ಪುತ್ರನಿಗೆ ಕಿವಿ ಮಾತು ಹೇಳಿದರು. ಗಾಂಧೀಜಿಯವರು ಸತ್ಯಾಗ್ರಹಿಗಳ ಪರವಾಗಿ ಮಂಡಿಸಿದ ವಾದವನ್ನು ನಿರಾಕರಿಸಿದ ನ್ಯಾಯಾಲಯ ಎಲ್ಲರಿಗೂ ದಂಡವನ್ನು ವಿಧಿಸಿತು. ಹರಿಲಾಲ್ ಗೆ ಒಂದು ಪೌಂಡ್ ದಂಡವನ್ನು ವಿಧಿಸಲಾಗಿತ್ತು. ಪಾವತಿಸಲು ನಿರಾಕರಿಸಿದ ಕಾರಣ ಅವರಿಗೆ ಒಂದು ವಾರ ಜೈಲು ಶಿಕ್ಷೆಯನ್ನು ಕಾಯಂಗೊಳಿಸಲಾಯಿತು.

ಹರಿಲಾಲ್ ಗೆ ದಕ್ಷಿಣ ಆಫ್ರಿಕಾದಲ್ಲಿ ಪ್ರಥಮವಾಗಿ ಜೈಲಿಗೆ ಹೋದಾಗ ಅವರಿಗೆ ಇಪ್ಪತ್ತು ವರ್ಷ ವಯಸ್ಸಾಗಿತ್ತು. ತಮ್ಮ ಪುತ್ರನನ್ನು ಹೋರಾಟಕ್ಕೆ ಪ್ರೇರೇಪಿಸಿ ಜೈಲಿಗೆ ಕಳುಹಿಸುತ್ತಿರುವ ಹಿನ್ನಲೆ ಕುರಿತಂತೆ ಹಲವಾರು ಮಂದಿ ಗಾಂಧೀಜಿಯನ್ನು ಪ್ರಶ್ನಿಸಿದ್ದರು. ಅವರೆಲ್ಲರಿಗೂ ಗಾಂಧೀಜಿಯವರು ನೀಡಿದ ಉತ್ತರ ಹೀಗಿತ್ತು "ದಕ್ಷಿಣ ಆಫ್ರಿಕಾದಲ್ಲಿರುವ ವರ್ಣಬೇಧ ನೀತಿಯ ಕಾನೂನನ್ನು ಉಲ್ಲಂಘಿಸಬೇಕೆಂದು ನಾನು ಪ್ರತಿಯೊಬ್ಬ ಭಾರತೀಯನಿಗೂ ಕರೆ ನೀಡುತ್ತಿದ್ದೇನೆ, ಏಕೆಂದರೆ, ಓರ್ವ ನ್ಯಾಯವಾದಿಯಾಗಿ ನಾನು ಉಲ್ಲಂಘಿಸಲು ಸಾಧ್ಯವಾಗುತ್ತಿಲ್ಲ. ಇದೀಗ ನನ್ನ ಪುತ್ರ ಹರಿಲಾಲ್ ನನ್ನ ಪ್ರತಿನಿಧಿಯಾಗಿ ಇಲ್ಲಿನ ಕಾನೂನನ್ನು ಪ್ರತಿಭಟಿಸಿ ಸೆರೆಮನೆವಾಸ ಅನುಭವಿಸುತ್ತಿರುವುದು ವೈಯಕ್ತಿಕವಾಗಿ ನನಗೆ ಸಂತೋಷ ತಂದಿದೆ. ಈ ರೀತಿಯ ಹೋರಾಟದ

ಅನುಭವ ಹರಿಲಾಲ್ ಗೆ ಮುಂದಿನ ದಿನಗಳಲ್ಲಿ ಅಮೂಲ್ಯ ಶಿಕ್ಷಣವಾಗಲಿದೆ" ಎಂದಿದ್ದ ಅವರು, ಸೆರೆಮನೆಯಲ್ಲಿದ್ದ ತಮ್ಮ ಪುತ್ರನಿಗೆ ಪತ್ರವೊಂದನ್ನು ಬರೆದು ತುಂಬು ಹೃದಯದಿಂದ ಅಭಿನಂದಿಸಿದ್ದರು.

ಹರಿಲಾಲ್ ೧೯೦೮ ರ ಏಪ್ರಿಲ್ ೩ ರಂದು ಬಿಡುಗಡೆಯಾದರು. ಮತ್ತೆ ಆಗಸ್ಟ್ ೧೦ ರಂದು ಸರ್ಕಾರದಿಂದ ಬಂಧಿಸಲ್ಪಟ್ಟರು. ಎರಡನೆಯ ಬಾರಿ ಅವರ ಮೇಲೆ ಟ್ರಾನ್ಸ್ ವಾಲ್ ನಗರದಲ್ಲಿ ಜೀವಿಸಲು ಅನುಮತಿ ಪತ್ರ ಪಡೆದಿಲ್ಲ ಎಂಬ ಮೊಕದ್ದಮೆಯನ್ನು ಹೂಡಲಾಗಿತ್ತು. ಗಾಂಧೀಜಿ ತಮ್ಮ ಪುತ್ರ ಹರಿಲಾಲ್ ಪರವಾಗಿ ನ್ಯಾಯಲಯದಲ್ಲಿ ಹಾಜರಿದ್ದರು. ಹರಿಲಾಲ್ ಯಾವುದೇ ಕಾರಣಕ್ಕೂ ಟ್ರಾನ್ಸ್ ವಾಲ್ ನಗರವನ್ನು ತೊರೆದು ಹೋಗಲು ಬಯಸುವುದಿಲ್ಲ ಎಂದು ಅವರು ನ್ಯಾಯಾಲಯಕ್ಕೆ ಸ್ಪಷ್ಟಪಡಿಸಿದರುಾದರೆ, ನ್ಯಾಯಾಲಯ ಅಪರಾಧಿಯು ೨೪ ಗಂಟೆಯ ಅವಧಿಯೊಳಗೆ ನಗರ ತೊರೆಯಬೇಕೆಂದು ಆದೇಶ ನೀಡಿತು. ಆದರೆ, ಈ ಸಂದರ್ಭದಲ್ಲಿ ಇನ್ನಿಬ್ಬರು ಭಾರತೀಯರ ಅವಧಿ ಸಧ್ಯದಲ್ಲಿ ಮುಗಿಯಲಿದ್ದು ಎಲ್ಲವನ್ನೂ ಒಟ್ಟಿಗೆ ವಿಚಾರಣೆಗೆ ತೆಗೆದುಕೊಳ್ಳಬೇಕಾಗಿರುವ್ಯದರಿಂದ ಕಾಲಾವಕಾಶ ನೀಡಬೇಕೆಂದು ಗಾಂಧೀಯವರು ನ್ಯಾಯಾಲಯವನ್ನು ಪ್ರಾರ್ಥಿಸಿಕೊಂಡಾಗ, ಹರಿಲಾಲ್ ಒಂದು ವಾರ ಕಾಲ ಟ್ರಾನ್ಸ್ ವಾಲ್ ನಗರದಲ್ಲಿರಲು ಅನುಮತಿ ನೀಡಲಾಯಿತು.

ನ್ಯಾಯಾಲಯದ ಆದೇಶದಂತೆ ಆಗಸ್ಟ್ ೧೮ ರ ನಂತರವೂ ಹರಿಲಾಲ್ ಅವರು ನಗರವನ್ನು ತೊರೆಯದೆ ಟ್ರಾನ್ಸ್ ವಾಲ್ ನಗರದಲ್ಲಿ ಉಳಿದುಕೊಂಡ ಕಾರಣ ಅವರನ್ನು ಅಲ್ಲಿನ ಸರ್ಕಾರ ಪುನಃ ಬಂಧಿಸಿತು. ಈ ಬಾರಿ ನ್ಯಾಯಾಲಯವು ಅವರಿಗೆ ಒಂದು ತಿಂಗಳ ಕಾಲ ಕಠಿಣ ಶಿಕ್ಷೆಯನ್ನು ವಿಧಿಸಿತು. ಒಂದು ತಿಂಗಳ ಸೆರೆಮನೆವಾಸ ಮುಗಿಸಿದ ಪುತ್ರನನ್ನು ಕರೆತರಲು ಗಾಂಧೀಜಿಯವರು ಸೆಪ್ಟಂಬರ್ ೧೭ ರಂದು ಹೋದಾಗ ಅವರಿಗೆ ಆಶ್ಚರ್ಯ ಕಾದಿತ್ತು. ಆ ದಿನ ಬೆಳಿಗ್ಗೆ ೭ ಗಂಟೆಗೆ ಹರಿಲಾಲ್ ಗಾಂಧಿಯನ್ನು ಜೈಲಿನಿಂದ ಬಿಡುಗಡೆ ಮಾಡಿದ ಪೋಲಿಸರು, ತಮ್ಮ ಸುಪರ್ಧಿಯಲ್ಲಿ ರೈಲಿನಲ್ಲಿ ಅವರನ್ನು ಕರೆದೊಯ್ದು ನಟಾಲ್ ನಗರಕ್ಕೆ ಕರೆದೊಯ್ದು ಬಿಟ್ಟು ಬಂದಿದ್ದರು. ಪೊಯನಿಕ್ಸ್ ಆಶ್ರಮ ತಲುಪಿದ್ದ ಹರಿಲಾಲ್ ಗೆ ಟೆಲಿಗ್ರಾಂ ಕಳಿಸಿದ ಗಾಂಧೀಯವರು ವಾಪಸ್ ಟ್ರಾನ್ಸ್ ವಾಲ್ ನಗರಕ್ಕೆ ಬರುವಂತೆ ತಿಳಿಸಿದರು. ಮರುದಿನ ರೈಲಿನಲ್ಲಿ ಆಗಮಿಸುತ್ತಿದ್ದ ಹರಿಲಾಲ್ ನನ್ನು ವೊಲ್ಕ್ ಸ್ಟ್ರಟ್ ನಗರದ ರೈಲ್ವೆ ನಿಲ್ದಾಣದಲ್ಲಿ ಪೊಲೀಸರು ಬಂಧಿಸಿದರು. ಸೆಪ್ಟಂಬರ್ ೨೨ ರಂದು ವಿಚಾರಣೆ ನಡೆಸಿದ ನ್ಯಾಯಾಧೀಶರು ೫೦ ಪೌಂಡ್ ಮೊತ್ತದ ಜಾಮೀನು ನೀಡಿ ತೆರಳಬಹುದೆಂದು ಆದೇಶಿಸಿದರು. ಆದರೆ, ತನ್ನ ಅಸಹಾಯಕತೆಯನ್ನು ವ್ಯಕ್ತ ಪಡಿಸಿದ ಹರಿಲಾಲ್ ಜೈಲು ಶಿಕ್ಷೆ ಅನುಭವಿಸಲು ಸಿದ್ಧ ಎಂದು ನುಡಿದಾಗ, ಮನಕರಗಿದ ನ್ಯಾಯಾಧೀಶರು ಬಿಡುಗಡೆ ಮಾಡಿ ಕಳಿಸಿದರು.

ಈ ನಡುವೆ ಗಾಂಧೀಜಿ ಕರೆ ನೀಡಿದ ಹೋರಾಟಕ್ಕೆ ಬಿಳಿಯರನ್ನು ಹೊರತು ಪಡಿಸಿ ಎಲ್ಲಾ ವರ್ಗಗಳಿಂದ ಬೆಂಬಲ ದೊರೆಯತೊಡಗಿತು. ೧೯೦೮ ರ ಅಕ್ಟೋಬರ್ ೮ ರಂದು ಗಾಂಧಿಯನ್ನು ಬಂಧಿಸಿ ಬಿಡುಗಡೆ ಮಾಡಿದ್ದ ಪೋಲಿಸರು ಹೋರಾಟವು ತೀವ್ರವಾದ ಸ್ವರೂಪವನ್ನು ಪಡೆಯುತ್ತಿರುವುದನ್ನು ಗಮನಿಸಿ ಪುನಃ ೧೪ ರಂದು ಪುನಃ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಅವರ ಮುಂದೆ ೨೫ ಪೌಂಡ್ ಜುಲ್ಮಾನೆ ಅಥವಾ ಎರಡು ತಿಂಗಳು ಜೈಲು ಶಿಕ್ಷಯ ಆಯ್ಕೆಯನ್ನು ನೀಡಲಾಯಿತು. ಗಾಂಧಿಯವರು ಅಂತಿಮವಾಗಿ ಶಿಕ್ಷೆಯನ್ನು ಆಯ್ಕೆ ಮಾಡಿಕೊಂಡರು. ಅವರನ್ನು ಒಂದು ವಾರ ಕಾಲ ವೊಲ್ಕ್ ಸ್ಟ್ರಟ್ ನ್ನಗರದ ಬಂಧಿಖಾನೆಯಲ್ಲಿಟ್ಟಿದ್ದು, ಇನ್ನೊಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗಾಗಿ

ಜೋಹಾನ್ಸ್‌ಬರ್ಗ್ ಸೆರೆಮನೆಗೆ ವರ್ಗಾಯಿಸಲಾಯಿತು. ಇದೇ ವೇಳೆಗೆ ಫೋಯನಿಕ್ಸ್ ಆಶ್ರಮದಲ್ಲಿ ವಾಸಿಸುತ್ತಿದ್ದ ಕಸ್ತೂರಬಾ ತೀವ್ರ ಅನಾರೋಗ್ಯಕ್ಕೆ ತುತ್ತಾದರು. ಈ ಸಂದರ್ಭದಲ್ಲಿ ತನ್ನನ್ನು ಕಾಣಲು ಬಂದ ಪುತ್ರ ಹರಿಲಾಲ್ ಗೆ ತಾಯಿಯ ಯೋಗಕ್ಷೇಮದ ಜೊತೆಗೆ ನಿನ್ನ ಪತ್ನಿ ಗುಲಾಬ್ ಹಾಗೂ ಪುತ್ರಿ ರಾಮಿಯನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಮಾರ್ಗದರ್ಶನ ನೀಡಿದರು.

ಈ ಈ ಎಲ್ಲಾ ಘಟನಾವಳಿಗಳನ್ನು ಗಮನಿಸಿದಾಗ, ಗಾಂದೀಜಿಗೆ ತಮ್ಮ ಪುತ್ರ ಹಿರಿಲಾಲ್ ಕುರಿತಂತೆ ಯಾವುದೇ ಕಹಿ ಭಾವನೆ ಇರಲಿಲ್ಲ. ತನ್ನ ಇಚ್ಚೆಗೆ ವಿರುದ್ಧವಾಗಿ ಹದಿನಾರನೆಯ ವಯಸ್ಸಿಗೆ ವಿವಾಹವಾದ ಸಂದರ್ಭದಲ್ಲಿ ತಮ್ಮ ಅಸಮಾಧಾನವನ್ನು ಅವರು ಹೊರಹಾಕಿದ್ದನ್ನು ಹೊರತು ಪಡಿಸಿದರೆ, ಅದನ್ನು ಎಂದಿಗೂ ದ್ವೇಷವನ್ನಾಗಿ ಅವರು ಪರಿವರ್ತಿಸಲಿಲ್ಲ. ಕಸ್ತೂರಬಾ ಚೇತರಿಸಿಕೊಂಡ ನಂತರ ಹರಿಲಾಲ್ ಮತ್ತೇ ಹೋರಾಟಕ್ಕೆ ದುಮುಕಿದರು. ಪ್ರತಿ ಸಾರಿ ಅವರನ್ನು ಬಂಧಿಸುತ್ತಿದ್ದ ಪೋಲಿಸರು ಗಡಿಪಾರು ಮಾಡುತ್ತಿದ್ದರು. ಹೀಗೆ ಮೂರು ನಾಲ್ಕು ಬಾರಿ ಬಂಧಿಸಿ ಗಡಿಪಾರು ಮಾಡಿದ ನಂತರ ಅವರನ್ನು ಕಾನೂನು ಉಲ್ಲಂಘಿಸಿದ ಕಾರಣಕ್ಕೆ ನ್ಯಾಯಾಲಯಕ್ಕೆ ಹಾಜರು ಪಡಿಸಿದಾಗ ಆರು ತಿಂಗಳ ಕಾಲ ಕಠಿಣ ಶಿಕ್ಷೆಯನ್ನು ವಿಧಿಸಲಾಯಿತು. ತಂದೆ ಮತ್ತು ಮಗ ಒಂದೇ ಸೆರೆಮನೆಯಲ್ಲಿ ಶಿಕ್ಷೆ ಅನುಭವಿಸುತ್ತಿದ್ದರು. ಹರಿಲಾಲ್ ಬಂಧನದಿಂದ ಕಳವಳಗೊಂಡ ಗಾಂಧಿಜಿಯವರು ಜೈಲಿನಿಂದ ತಮ್ಮ ಸೊಸೆ ಗುಲಾಬ್ ಬೆಹನ್ ಗೆ ಪತ್ರ ಬರೆದು ಮಗುವಿನ ಆರೋಗ್ಯ ಮತ್ತು ನಿನ್ನ ಬಗ್ಗೆ ಕಾಳಜಿ ವಹಿಸಬೇಕೆಂದು ಕೇಳಿಕೊಂಡರಲ್ಲದೆ, ತಮ್ಮ ಎರಡನೆಯ ಪುತ್ರ ಮಣಿಲಾಲ್ ಗೆ ಪತ್ರ ಬರೆದು ತಾಯಿ ಕಸ್ತೂರಬಾ ಹಾಗೂ ಅತ್ತಿಗೆ ಗುಲಾಬ್ ಬೆಹನ್ ಮತ್ತು ಮಗುವನ್ನು ಆಶ್ರಮದಲ್ಲಿ ಜೋಪಾನ ಮಾಡುವ ಜವಾಬ್ದಾರಿ ನಿನ್ನದೆಂದು ಹೇಳಿದರು. ಇದು ಸಾಲದೆಂಬಂತೆ ತಮ್ಮ ಮಿತ್ರ ಪೊಲ್ಲಾಕ್ ಅವರಿಗೆ ಪತ್ರ ಬರೆದು ಸೊಸೆ ಹಾಗೂ ಮೊಮ್ಮಗಳ ಯೋಗಕ್ಷೇಮ ವಿಚಾರಿಸುವಂತೆ ಮನವಿ ಮಾಡಿಕೊಂಡಿದ್ದರು. ●

ಅರಣ್ಯ ಹನನ

ನಮ್ಮ ಕಾಲದ ಅತ್ಯಂತ ಕ್ರೂರ ಸಂಗತಿಗಳಲ್ಲಿ ನಾವು ನಿಷ್ಕರುಣೆಯಿಂದ ಭವಿಷ್ಯದ ಕುರಿತಾಗಿ ಯಾವುದೇ ಕಾಳಜಿಯಿಲ್ಲದೆ ನಡೆಸುತ್ತಿರುವ ಅರಣ್ಯನಾಶವೂ ಒಂದು. ಅರಣ್ಯಗಳು ಪ್ರಕೃತಿ ನಿರ್ಮಿಸಿಕೊಂಡ ಜೀವಜಗತ್ತಿನ ತೊಟ್ಟಿಲುಗಳು. ವಾಸ್ತವವಾಗಿ ಮನುಷ್ಯ ಮೊಟ್ಟಮೊದಲು ಕಣ್ಣುಬಿಟ್ಟುದೇ ಅರಣ್ಯದಲ್ಲಿ. ಮನುಷ್ಯನ ಮನಸ್ಸಿನಲ್ಲಿ ಅರಣ್ಯದಿಂದ ದೂರವಾಗಿರುವ ವಾಸ್ತವದ ಕಲ್ಪನೆ ಕಾಣಿಸಿಕೊಂಡದ್ದು ಮನುಷ್ಯನ ಬದುಕಿನ ಇತಿಹಾಸದಲ್ಲಿ ಸಾಕಷ್ಟು ತಡವಾಗಿಯೇ. ಭಾರತದ ಸಂದರ್ಭದಲ್ಲಂತೂ ಕಾಡುಗಳಿಗೊಂದು ಪಾವಿತ್ರ್ಯದ ಪರಿವೇಶವೇ ಇದೆ. ನಮ್ಮ ಪ್ರಾಚೀನ ಸಂಸ್ಕೃತಿ ರೂಪುಗೊಂಡಿದ್ದು ಕಾಡುಗಳ ನಡುವೆ ಇರುತ್ತಿದ್ದ ತಪೋವನಗಳಲ್ಲಿ. ಅಲ್ಲಿನ ಗುರುಕುಲಗಳಲ್ಲಿ, ವೇದೋಪನಿಷತ್ತುಗಳ ಜನ್ಮಭೂಮಿ ಭಾರತದ ಅರಣ್ಯಗಳು ಎಂಬುದು ಎಲ್ಲರಗೂ ತಿಳಿದಿರುವ ಸಂಗತಿ. ವೇದಕಾಲೀನ ಋಷಿಗಳಿಗೆ ಅರಣ್ಯವೆಂಬುದು ಅವರ ಅಸ್ತಿತ್ವದ ಒಂದು ಭಾಗವಾಗಿತ್ತು. ಮಾತ್ರವಲ್ಲದೇ ಅವರ ಶ್ರದ್ಧಾಕೇಂದ್ರವೂ ಆಗಿತ್ತು. ಋಗ್ವೇದದಲ್ಲಿನ 'ಅರಣ್ಯಾನಿ'ಯನ್ನು ಕುರಿತಾದ ಸೂಕ್ತಗಳು ಭಾರತೀಯ ಮನಸ್ಸು ಅರಣ್ಯವನ್ನು ಎಷ್ಟರ ಮಟ್ಟಿಗೆ ಆತ್ಮೀಕರಿಸಿಕೊಂಡಿತ್ತೆಂಬುದಕ್ಕೆ ಸಾಕ್ಷಿಯಾಗಿವೆ.


ಆದರೆ ಅರಣ್ಯಗಳಲ್ಲಿಯೇ ಬೀಜರೂಪದಲ್ಲಿ ಕಾಣಿಸಿಕೊಂಡ ನಾಗರಿಕತೆಯ ಕಲ್ಪನೆ ನಿಧಾನವಾಗಿ ಮೂರ್ತಗೊಂಡು ಅರಣ್ಯಗಳನ್ನೇ ಆಹುತಿ ತೆಗೆದುಕೊಳ್ಳಲು ಪ್ರಾರಂಭಿಸುದುದು ವಿಪರ್ಯಾಸ. ನಾಗರಿಕತೆಯ ಕನಸನ್ನು ಸಾಕಾರಗೊಳಸಿಲು ಹೊರಟ ಮನುಷ್ಯ ಪ್ರಾರಂಭದಲ್ಲಿ ಕೃಷಿಗಾಗಿ, ಆನಂತರ ವಸತಿಯ ವ್ಯವಸ್ಥೆಗಾಗಿ ಕಾಡುಗಳನ್ನು ಕಡಿಯುತ್ತಾ ಬಂದ. ಜನಸಾಂದ್ರತೆ ದಟ್ಟವಾದಂತೆಲ್ಲಾ ಕಾಡು ಬಯಲಾಗುವ ಪ್ರಕ್ರಿಯೆ ವೇಗೋತ್ಕರ್ಷ ಪಡೆಯುತ್ತಾ ಬಂತು. ಆಧುನಿಕ ಯುಗದಲ್ಲಿ ಕೈಗಾರಿಕೆಗಾಗಿ, ವಾಣಿಜ್ಯ ಕಾರಣಗಳಿಗಾಗಿ, ನೀರಾವರಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳಿಗಾಗಿ, ಗಣಿಗಾರಿಕೆಗಾಗಿ ಇನ್ನೂ ಹಲವು ಉದ್ದೇಶಗಳಿಗಾಗಿ ಬೃಹತ್ ಪ್ರಮಾಣದಲ್ಲಿ ಅರಣ್ಯ ಹನನ ನಡೆಯುತ್ತಿದೆ. ಉರುವಲಿಗಾಗಿ, ಪೀಠೋಪಕರಣಗಳಿಗಾಗಿ, ಗೃಹನಿರ್ಮಾಣಕ್ಕಾಗಿ ಮನುಷ್ಯ ಬಹುತೇಕ ಅರಣ್ಯಗಳನ್ನಷ್ಟೇ ಅವಲಂಬಿಸಿದ್ದಾನೆ. ಹಿಮಾಲಯದ ದಟ್ಟ ಕಾಡುಗಳು, ವಿಂಧ್ಯಾವಳಿ ಪ್ರದೇಶದ ಅರಣ್ಯಗಳು, ಕರ್ನಾಟಕದ ಘಟ್ಟಪ್ರದೇಶಗಳ ನಿತ್ಯಹರಿದ್ವರ್ಣದ ಕಾಡುಗಳು ಎಲ್ಲವೂ ಮನುಷ್ಯನ ಆಕ್ರಮಣ ಪ್ರವೃತ್ತಿಗೆ, ದುರಾಶೆಗೆ ಬಲಿಯಾಗುತ್ತಿವೆ.

ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಬೇರೆ ಬೇರೆ ಕಡೆಗಳಲ್ಲಿ ಈ ' ಹಸಿರು ಹತ್ಯೆ'ಯ ಕೌರ್ಯ ನಡೆಯುತ್ತಿರುವುದನ್ನು ಪರಿಸರಪ್ರೇಮಿಗಳು ಗಮನಿಸುತ್ತಲೇ ಇದ್ದಾರೆ. ಒಂದು ಕಾಲದಲ್ಲಿ ಆಹಾರದ ಕಣಜಗಳೆಂದು ಪ್ರಖ್ಯಾತವಾಗಿದ್ದ ಹಲವು ದೇಶಗಳು ಇವತ್ತು ಬಹುಪಾಲು ಮರುಭೂಮಿಯಾಗಿ ಪರಿವರ್ತನೆಯಾಗುತ್ತಿರುವುದು ಈ ಅವ್ಯಾಹತ ಅರಣ್ಯನಾಶದಿಂದಲೇ

ಎನ್ನುತ್ತಾರೆ ವಿಜ್ಞಾನಿಗಳು. ಮರಳುಗಾಡುಗಳನ್ನು ಫಲವತ್ತಾಗಿ ಮಾಡಬೇಕೆಂದು ಪ್ರಯತ್ನಿಸುತ್ತಿರುವ ಆಧುನಿಕ ಮನುಷ್ಯ, ಅದರ ವಿರುದ್ಧದಿಕ್ಕಿನಲ್ಲಿ ಸಾಗುತ್ತಾ ಫಲವತ್ತಾದ ಭೂಮಿಯನ್ನು ಮರುಭೂಮಿಯನ್ನಾಗಿ ಪರಿವರ್ತಿಸುತ್ತಿದ್ದಾನೆ ! ಮನುಷ್ಯ ನಡೆಸುತ್ತಿರುವ ಈ ಬರ್ಬರ ಕೃತ್ಯವನ್ನು ಗಮನಿಸಿದ್ದ ಕವಿ ಕುವೆಂಪು ೧೯೮೦ರಷ್ಟು ಹಿಂದೆಯೇ "ಕಾಡುಗಳನ್ನು ಕಡಿದು ಜಲಾಸಯನ ಪ್ರದೇಶಗಳನ್ನು ಬತ್ತಿಸುತ್ತಿರುವ ನಾವು ಹೀಗೆ ಅಪಮಾರ್ಗದಲ್ಲಿ ಮುಂದುವರೆದದ್ದೇ ಆದರೆ, ಇನ್ನು ಕೆಲವು ವರ್ಷಗಳಲ್ಲಿ ನಮ್ಮ ಭೂಮಿ ಚಂದ್ರಗ್ರಹದಂತೆಯೇ ನಿರ್ಜಲ,ನಿರ್ಜನ,ನಿರ್ವಾಯು ಗ್ರಹವಾಗಿ ಪರಿಣಮಿಸುತ್ತದೆ" ಎಂದು ಎಚ್ಚರಿಸಿದ್ದರು. ಆದರೆ ಧನಗಾಹಿಯಾದ ಆಧುನಿಕ ಮನುಷ್ಯ ಇಂಥ ವಿವೇಕದ ಮಾತುಗಳಿಗೆ ಕಿವುಡನಾಗಿದ್ದಾನೆ.

ಅರಣ್ಯನಾಶದಿಂದ ಉಂಟಾಗುವ ಸರಪಳಿ ಪರಿಣಾಮಗಳು ಒಂದೆರಡಲ್ಲ. ಪರಿಸರ ಅಸಮತೋಲನ, ಮಳೆಹಾನಿ, ಭೂಸಾರನಾಶ, ಪ್ರಾಣಿಸಂಕುಲಗಳ, ಸಸ್ಯವೈವಿಧ್ಯಗಳ ಅವಸಾನ, ವಾಯುಮಾಲಿನ್ಯ, ಅನಾರೋಗ್ಯ – ಇಂಥ ಹಲವಾರು ಸಂಗತಿಗಳು ಮನುಷ್ಯನೂ ಸೇರಿದಂತೆ ಜೀವಲೋಕವನ್ನೇ ಕಂಗೆಡಿಸುತ್ತಿರುವುದಕ್ಕೆ ಅರಣ್ಯನಾಶವೇ ಬಹುಮುಖ್ಯ ಕಾರಣವೆನ್ನುತ್ತಾರೆ ವಿಜ್ಞಾನಿಗಳು. ಮುಂದಿನ ಪೀಳಿಗೆಯನ್ನು ಕುರಿತು ಸ್ವಲ್ಪವಾದರೂ ಕಾಳಜಿಯಿರುವವರು ಕಾಡುಗಳನ್ನು ಕಡಿಯುವ ಮನಸ್ಸು ಮಾಡಲಾರರು. "ಅರಣ್ಯವನ್ನು ರಕ್ಷಿಸಿದರೆ, ಅರಣ್ಯ ನಮ್ಮನ್ನು ರಕ್ಷಿಸುತ್ತದೆ" ಎಂಬ ತಿಳಿವಳಿಕೆ ಮಾತ್ರ ಮನುಷ್ಯನನ್ನು ರಕ್ಷಿಸಲು ಸಾಧ್ಯ.●

– ವೈನತೇಯ



ವಿಶ್ವ ಪರಿಸರ ದಿನ

ಉತ್ತರ ಭಾರತದಲ್ಲಿ ಧೂಳಿನ ಗಾಳಿ ಬೀಸಿ ತಣ್ಣಗಾಗಿದೆ. ಕರ್ನಾಟಕದಲ್ಲಿ ಒಂದು ತಿಂಗಳಿನಿಂದ ಬೀಸುತ್ತಿದ್ದ ಚುನಾವಣೆ ಎಂಬ ಗಾಳಿ ಹೊತ್ತು ತಂದ ಕೆಟ್ಟ ವಾಸನೆಯು ಎಲ್ಲ ಕಡೆ ಪಸರಿಸಿ, ಆ ವಾಸನೆಯು ಶಾಶ್ವತವಾಗಿ ಹೀಗೆಯೇ ಉಳಿದು ಬಿಡಬಹುದೇನೋ ಎಂಬ ಆತಂಕವನ್ನು ಉಂಟುಮಾಡಿದೆ. ಒಟ್ಟಿನಲ್ಲಿ ಪರಿಸರ ಮತ್ತು ಸಮಾಜ ಎರಡೂ ಕಡೆ ನಮ್ಮನ್ನು ಕೊಲ್ಲಬಹುದಾದಷ್ಟು ದೊಡ್ಡ ಪ್ರಮಾಣದಲ್ಲಿ ಗಾಳಿ ಬೀಸಿದೆ. ಈ ಎರಡೂ ಗಾಳಿಗಳ ನಂತರ ಪ್ರತಿವರ್ಷದಂತೆ ಜೂನ್ ೫ ಪರಿಸರ ದಿನಾಚರಣೆ ಮತ್ತೆ ಬಂದಿದೆ. ವಿಶ್ವದ ಜನಕ್ಕೆ ಪರಿಸರದ ಮಹತ್ವವನ್ನು ತಲುಪಿಸಲು ಹಲವು ದಶಕಗಳ ಹಿಂದೆ ವಿಶ್ವ ಸಂಸ್ಥೆಯು ಹಮ್ಮಿಕೊಂಡ ದಿನವಾಗಿದೆ. ಒಂದು ರೀತಿಯಲ್ಲಿ ಈ ವಿಶ್ವ ಪರಿಸರ ದಿನವು ಕಾಟಾಚಾರವಾಗಿ ಹೋಗುತ್ತಿದೆ ಎನಿಸಿದರೂ ಈ ವರ್ಷದ ದಿನಾಚರಣೆಗೆ ಒಂದು ವಿಶೇಷವಿದೆ.

ಈ ವರ್ಷದ ಪರಿಸರ ದಿನಾಚರಣೆಗೆ ಭಾರತ ಅತಿಥೇಯ ರಾಷ್ಟ್ರವಾಗಿ ಆಚರಣೆಯನ್ನು ಸಂಭ್ರಮದಿಂದ ನಡೆಸಲು ತೀರ್ಮಾನಿಸಲಾಗಿದೆ. ಈ ವರ್ಷದ ಪರಿಸರ ದಿನಾಚರಣೆಯು ಪ್ಲಾಸ್ಟಿಕ್ ಮಾಲಿನ್ಯದ ಕಡೆಗೆ ಗಮನ ಸೆಳೆಯುವುದೇ ಆಗಿದೆ. 'ಪ್ಲಾಸ್ಟಿಕ್ ಮಾಲಿನ್ಯ ನಿಯಂತ್ರಿಸಿ' ಧ್ಯೇಯವಾಕ್ಯವು ಸರ್ಕಾರಗಳು, ಕೈಗಾರಿಕೆಗಳು, ಜನ ಸಮುದಾಯಗಳು ಮತ್ತು ವ್ಯಕ್ತಿಗತವಾಗಿ ಪ್ಲಾಸ್ಟಿಕ್ ಮಾಲಿನ್ಯವನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಅಂಶಗಳ ಬಗ್ಗೆ ಗಮನ ಸೆಳೆಯ ಹೊರಟಿದೆ. ಅದರಲ್ಲೂ ಒಮ್ಮೆ ಉಪಯೋಗಿಸಿ ಬಿಸಾಡುವ ಪ್ಲಾಸ್ಟಿಕ್ ಸಮುದ್ರವನ್ನು ದೊಡ್ಡ ಪ್ರಮಾಣದಲ್ಲಿ ಸೇರಿ ಅದು ಉಂಟುಮಾಡುತ್ತಿರುವ ಅಗಾಧ ಪ್ರಮಾಣದ ಸಮಸ್ಯೆಯ ಬಗ್ಗೆ ಗಮನ ಸೆಳೆಯಲು ಪ್ರಯತ್ನಿಸುತ್ತದೆ.

ಪ್ರತಿದಿನ ಸುಮಾರು ೫೦೦ ಮಿಲಿಯನ್ ಪ್ಲಾಸ್ಟಿಕ್ ಚೀಲಗಳನ್ನು ಬಳಸಿ ನಾವು ಬಿಸಾಡುತ್ತಿದ್ದೇವೆ. ಪ್ರತಿವರ್ಷ ೮ ಮಿಲಿಯನ್ ಟನ್‌ನಷ್ಟು ಉಪಯೋಗಿಸಿ ಬಿಸಾಡಿದ ಪ್ಲಾಸ್ಟಿಕ್ ಸಮುದ್ರವನ್ನು ಸೇರುತ್ತಿದೆ. ಅಂದರೆ ಪ್ರತಿ ನಿಮಿಷ ಒಂದು ತುಂಬಿದ ಲಾರಿಯಷ್ಟು ಪ್ಲಾಸ್ಟಿಕ್ ಸಮುದ್ರವನ್ನು ಸೇರುತ್ತಿದೆ. ಕಳೆದ ದಶಕದಲ್ಲಿ ನಾವು ಬಳಸಿ ಬಿಸಾಡಿದ ಪ್ಲಾಸ್ಟಿಕ್ ಪ್ರಮಾಣ ಎಷ್ಟಿತ್ತೆಂದರೆ ನಮ್ಮ ಹಿರಿಯರು ಕಳೆದ ಒಂದು ಶತಮಾನದಲ್ಲಿ ಬಳಸಿದ ಪ್ರಮಾಣದ ಪ್ಲಾಸ್ಟಿಕ್‌ಗೆ ಸಮವಾಗಿತ್ತು. ಇದರಿಂದ ನಾವು ಎಷ್ಟೊಂದು ಪ್ಲಾಸ್ಟಿಕ್ ಅವಲಂಬಿಗಳಾಗಿದ್ದೇವೆಂಬುದು ಅರಿವಾಗುತ್ತದೆ. ನಾವು ಬಳಸುವ ಪ್ಲಾಸ್ಟಿಕ್‌ನಲ್ಲಿ ಶೇ ೫೦ ಏಕ ಬಳಕೆಯ ಪ್ಲಾಸ್ಟಿಕ್ ಆಗಿದೆ. ಇದರಲ್ಲಿ ನಾವು ಅಂಗಡಿಗೆ ಹೋಗುವಾಗ ಸೋಮಾರಿತನದಿಂದ ಬಟ್ಟೆಯ ಕೈ ಚೀಲ ಒಯ್ಯದೆ ಅಂಗಡಿಯಿಂದ ಹಿಡಿದು ತರುವ ಪ್ಲಾಸ್ಟಿಕ್ ಚೀಲಗಳು, ಮನೆಯಿಂದ ಕುಡಿಯುವ ನೀರು ಒಯ್ಯದೆ ಜೇಬಿನಲ್ಲಿ ಹಣವಿದೆ ಎಂದು ನೀರು ಕೊಂಡು ಕುಡಿದು ಬಿಸಾಡುವ ನೀರಿನ ಬಾಟಲಿಗಳು ಹೀಗೆ ನಮ್ಮ ನಿರ್ಲಕ್ಷ, ಅಜ್ಞಾನ ಮತ್ತು ಬೇಜವಾಬ್ದಾರಿತನದಿಂದ ನಮ್ಮ ಹತ್ತಿರ ಎಳೆದು ಕೊಂಡು ನಂತರ ಬಿಸಾಡುವ ವಿವಿಧ ಬಗೆಯ ಪ್ಲಾಸ್ಟಿಕ್ ವಸ್ತುಗಳು ಸೇರಿವೆ. ಪ್ರತಿ ನಿಮಿಷ ಪ್ರಪಂಚದಾದ್ಯಂತ ಒಂದು ಮಿಲಿಯನ್ ಪ್ಲಾಸ್ಟಿಕ್ ಬಾಟಲಿಗಳು ಕಸವಾಗಿ ಮಾರ್ಪಡುತ್ತಿವೆ ಎಂಬುದು ಆತಂಕ

ಉಂಟುಮಾಡುವ ಸಂಗತಿಯಾಗಿದೆ.

ವಿಶ್ವ ಪರಿಸರ ದಿನಕ್ಕೆ ಅತಿಥೇಯ ರಾಷ್ಟ್ರವಾಗಲು ಸಿಕ್ಕಿರುವ ಅವಕಾಶಕ್ಕಾಗಿ ಬೀಗುತ್ತ ಪರಿಸರ ಸಚಿವ ಹರ್ಷವರ್ಧನ ಮಾತನಾಡುತ್ತಾ, ಭಾರತೀಯ ತತ್ವಶಾಸ್ತ್ರ ಮತ್ತು ಜೀವನ ವಿಧಾನ ಶತಶತಮಾನಗಳಿಂದ ಭಾರತೀಯ ಜೀವನ ಪದ್ಧತಿ ಪರಿಸರದೊಂದಿಗಿನ ಸಹಬಾಳ್ವೆಯನ್ನು ಕಲಿಸಿದೆ ಎಂದಿದ್ದಾರೆ. ಆದರೆ ಅದನ್ನು ಪರಾಮರ್ಶಿಸುವ ಕಾಲಘಟ್ಟದಲ್ಲಿ ನಾವು ಬಂದು ನಿಂತಿದ್ದೇವೆ. ನಮ್ಮ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ತುರ್ತಿನ ಕಾಲ ಬಂದಿದೆ. ಈ ದೇಶದ ಸಾಮಾನ್ಯ ಜನರು ಇಂದೂ ಕೂಡ ಸರಳವಾಗಿಯೇ ಬದುಕುತ್ತಿದ್ದಾರೆ, ಪ್ಲಾಸ್ಟಿಕ್ ವಿಷಯಕ್ಕೇ ಬಂದರೆ ಭಾರತೀಯನ ತಲಾವಾರು ಪ್ಲಾಸ್ಟಿಕ್ ಬಳಕೆ ೫ ಕೆ.ಜಿ ಗಿಂತಲೂ ಕಡಿಮೆ ಇದ್ದರೆ, ಉತ್ತರ ಅಮೇರಿಕಾ ದೇಶಗಳ ಪ್ಲಾಸ್ಟಿಕ್ ಬಳಕೆ ೬೦ ಕೆಜಿ ಇದೆ. ಈಗಾಗಲೇ ಎಲ್ಲಾ ಸ್ಥಳಗಳೂ ಪ್ಲಾಸ್ಟಿಕ್ ಮಯವಾಗಿರುವಾಗ ನಮ್ಮ ಜನರೂ ತಲಾವಾರು ೬೦ ಕೆ.ಜಿ ಬಳಸುವಂತಾದರೆ ನಮ್ಮ ಪರಿಸರ ಹೇಗಿರುತ್ತದೆ ಎಂಬುದನ್ನು ಒಮ್ಮೆ ಕಲ್ಪನೆ ಮಾಡಿಕೊಳ್ಳಿ. ಒಂದು ಕಡೆ ತನ್ನ ಎಲ್ಲಾ ಯೋಜನೆಗಳೂ, ಚಿಂತನೆಗಳೂ ಪರಿಸರದ ಉಳಿವಿಗೆ ಮಾರಕವಾಗಿರುವಂತೆ ಮಾಡಿ ಮತ್ತೊಂದೆಡೆ ಅದನ್ನು ಉಳಿಸಲು ಕಂಕಣ ಬದ್ಧರಾಗಿದ್ದೇವೆ ಎಂಬ ಸರ್ಕಾರಗಳು ಇಬ್ಬಂದಿಯಾಗಿವೆ, ಜನ ಸಾಮಾನ್ಯರಿಗೆ 'ಡೆವಲಪ್ಮೆಂಟ್' ಎಂಬ ಮಾಯಾಮೃಗದ ಆಸೆ ತೋರಿಸಿ, ಅದರ ಹಿಂದೆ ಜನ ಸಾಮಾನ್ಯರು ಓಡುವಂತೆ ಮಾಡಿದ್ದಕ್ಕೆ ನಮ್ಮ ನಾಯಕರು ಮತ್ತು ಸರ್ಕಾರಗಳೇ ಪ್ರಮುಖ ಹೊಣೆಗಾರರು. ಮತ್ತೊಂದು ತಮಾಷೆ ಎಂದರೆ ಪರಿಸರದೊಂದಿಗಿನ ಸಹಬಾಳ್ವೆಯಲ್ಲಿರುವವರು ಎಲೆ ಮರೆಯ ಕಾಯಿಯಂತೆ ಬದುಕು ನಡೆಸಿ ಜಾಗ ಖಾಲಿ ಮಾಡುತ್ತಿದ್ದರೆ, ಪರಿಸರದೊಂದಿಗೆ ಸಂಘರ್ಷಕ್ಕೆ ಇಳಿದಿರುವವರು ಪರಿಸರವನ್ನು ದೋಚಿ ಮಾರಾಟ ಮಾಡಿ, ಅಧಿಕಾರ ಹಿಡಿದು ಇಲ್ಲೇ ಶಾಶ್ವತವಾಗಿರುವಂತೆ ಆಡುತ್ತಿದ್ದಾರೆ.

ಪ್ಲಾಸ್ಟಿಕ್ ಮುಕ್ತ ವಾತಾವರಣ ಉಂಟು ಮಾಡಲು ಎರಡು ದಿಕ್ಕಿನಲ್ಲಿ ಕಾರ್ಯೋನ್ಮುಖರಾಗಬೇಕಿದೆ. ಮೊದಲನೆಯದು ಸರ್ಕಾರ ಸರಿಯಾದ ನೀತಿಯನ್ನು ನಿರೂಪಿಸುವುದಾದರೆ ಎರಡನೆಯದು ಜನ ಸಾಮಾನ್ಯರು ಪ್ಲಾಸ್ಟಿಕ್ ಬಳಕೆಯ ಬಗ್ಗೆ ಜಾಗೃತರಾಗುವುದು. ಮೊದಲನೆಯದನ್ನು ಇಂದಿನ ಪರಿಸ್ಥಿತಿಯಲ್ಲಿ ನಿರೀಕ್ಷಿಸುವುದು ಸ್ವಲ್ಪ ಕಷ್ಟವೇ ಸರಿ. ಈ ಪ್ಲಾಸ್ಟಿಕ್ ದಂಧೆಯಲ್ಲಿ ತೊಡಗಿರುವ ಬಂಡವಾಳಶಾಹಿಗಳು ಸರ್ಕಾರ ನಡೆಸಲು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದಾರೆ. ಅವರ ಹಂಗಿನಲ್ಲಿರುವ ಸರ್ಕಾರಗಳು ಯಾವುದೇ ಗಟ್ಟಿಯಾದ ಕಾನೂನನ್ನು ರೂಪಿಸುವುದೆಂದು ನಿರೀಕ್ಷಿಸಲು ಆಗುವುದಿಲ್ಲ. ಇರುವ ಏಕೈಕ ಶಾಶ್ವತ ಪರಿಹಾರವೆಂದರೆ ಜನರು ಜಾಗೃತರಾಗಿ ತಮ್ಮ ಬದುಕನ್ನು ಪ್ಲಾಸ್ಟಿಕ್ ಮುಕ್ತಗೊಳಿಸಿಕೊಳ್ಳುವ ಕಡೆಗೆ ಹೆಜ್ಜೆ ಇಡುವುದು. ಪ್ಲಾಸ್ಟಿಕ್ ಮಾಲಿನ್ಯದ ದುಷ್ಪರಿಣಾಮ ತಿಳಿದಿರುವವರು ಎಲ್ಲರಿಗೂ ಕಾಣುವಂತೆ ಪ್ಲಾಸ್ಟಿಕ್ ಮುಕ್ತ ಜೀವನ ವಿಧಾನದ ಕಡೆಗೆ ಹೆಜ್ಜೆ ಹಾಕಿ ಸುತ್ತಮುತ್ತಲಿನವರನ್ನು ಪ್ರೇರೇಪಿಸುವುದೇ ಸದ್ಯಕ್ಕೆ ಇರುವ ದಾರಿ.●

ತಿಂಗಳ ಕವನಕ್ಕೊಂದು ಟಿಪ್ಪಣಿ

ಖ್ಯಾತ ಕವಿ ಸುಬ್ರಾಯ ಚೊಕ್ಕಾಡಿಯವರ 'ಮೊನ್ನೆ ಸಿಕ್ಕವರು' ಎಂಬ ಕವಿತಾ ಸಂಕಲನದಲ್ಲಿ ಪ್ರಕೃತಿಯಲ್ಲಿನ ಮರ-ಗಿಡ, ಪಕ್ಷಿ-ಪ್ರಾಣಿಗಳನ್ನು ಪ್ರೀತಿಯಿಂದ ಕಂಡು, ಅವುಗಳೊಂದಿಗೆ ಮಾನವ ಜಗತ್ತನ್ನು ಸಮೀಕರಿಸುವ ಧ್ಯಾನಸ್ಥ ಕವಿತೆಗಳಿವೆ. 'ನಮಸ್ಕಾರ' ಎಂಬುದು ಇಂಥ ಕವಿತೆಗಳಲ್ಲಿ ಒಂದು. ನಾಲ್ಕು ಚರಣಗಳಲ್ಲಿ ಅರಳಿಕೊಳ್ಳುವ ಈ ರಚನೆಯಲ್ಲಿ ಮನುಷ್ಯ ಮರದಿಂದ ಪಡೆಯುವ ಉಪಕಾರದ ಆರ್ದ್ರ ಸ್ಮರಣೆಯಿದೆ. ಕವಿತೆಯ ಪ್ರತಿ ಚರಣದ ಕೊನೆಯಲ್ಲೂ 'ಮರವೇ, ನಿನಗೆ ನಮಸ್ಕಾರ' ಎಂಬ ಸಾಲು ಪಲ್ಲವಿಯಂತೆ ಕಾಣಿಸಿಕೊಂಡು, ಮರದ ಬಗೆಗೆ -ಒಟ್ಟಾರೆ ಸಸ್ಯಸಂಕುಲದ ಬಗೆಗೆ - ಮನುಷ್ಯ ಹೊಂದಿರಬೇಕಾದ ಕೃತಜ್ಞತಾಭಾವ ಹಾಗೂ ಗೌರವಭಾವಗಳನ್ನು ವ್ಯಕ್ತಪಡಿಸುತ್ತದೆ.

ಮರವೆಂದರೆ ಮನುಷ್ಯನ ಪಾಲಿಗೆ ತಾಯಿ, ಗೆಳೆಯ, ಗುರು, ಮಾರ್ಗದರ್ಶಕ ಎಲ್ಲವೂ ಹೌದು. ಬಂದ ಕಷ್ಟಗಳನ್ನೆಲ್ಲಾ ತಾನೇ ಅನುಭವಿಸುತ್ತಾ, ತನ್ನ ಕಂದನನ್ನು ಜೋಪಾನವಾಗಿ, ವಾತ್ಸಲ್ಯದಿಂದ ಕಾಪಾಡುವ ಹೆತ್ತಮ್ಮನಂತೆ ಮರ ಮಾನವನನ್ನು ರಕ್ಷಿಸುತ್ತದೆ. ನೆತ್ತಿಯ ಮೇಲೆ ಉರಿಯುವ ಸೂರ್ಯ, ಕೆಳಗೆ ನೀರಿಲ್ಲದೆ ಒಣಗಿಹೋಗಿರುವ ನೆಲ, ಸುತ್ತಲೂ ಬೆಂಕಿಯಂತೆ ಸುಡುತ್ತಿರುವ ಬಿಸಿಲು - ಇವೆಲ್ಲವನ್ನೂ ಸಹಿಸಿಕೊಂಡು ಮನುಷ್ಯನಿಗೆ ತಂಪಾದ ನೆರಳನ್ನು ಒದಗಿಸುವ ಮರ ತಾಯಿಯ ಪ್ರತಿರೂಪವಲ್ಲವೆ? ಆದ್ದರಿಂದಲೇ ಕವಿ 'ನನ್ನ ತಲೆ ಮೇಲೆ ನೆರಳ ನೇದಿರುವ ಮರವೇ, ನಿನಗೆ ನಮಸ್ಕಾರ' ಎನ್ನುತ್ತಾರೆ. ಬಾಲ್ಯದಲ್ಲಿ ಮರಕೋತಿಯಾಟಕ್ಕೆ ಒದಗುವ ಮರ, ಮನುಷ್ಯನ ಮುಪ್ಪಿನ ದಿನಗಳಲ್ಲೂ ತನ್ನ ಯೌವನವನ್ನು ಉಳಿಸಿಕೊಂಡು, ಮತ್ತೆ ಮರಕೋತಿಯಾಟಕ್ಕೆ ಕರೆಯುತ್ತದೆ. ಹೀಗೆ ಜೀವನೋತ್ಸಾಹವನ್ನು ಚೋದಿಸುವ 'ಮರಗೆಳೆಯ'ನಿಗೆ ಕವಿ ನಮಸ್ಕರಿಸುತ್ತಾರೆ. ಲೌಕಿಕ ಪಾರಲೌಕಿಕಗಳ ಆಕರ್ಷಣೆ-ವಿಕರ್ಷಣೆಗಳ ದ್ವಂದ್ವದಲ್ಲಿ ಸಿಲುಕಿ, ಕಂಗೆಟ್ಟಿರುವ ಮನುಷ್ಯನಿಗೆ, ನೆಲ-ಬಾನುಗಳ ಪೋಷಕಾಂಶಗಳನ್ನು ಹೀರಿ, ಸಮನ್ವಯ ಸಾಧಿಸುವ ಮರ, ಮನುಷ್ಯನಿಗೆ ಗುರುವಿನಂತೆ ಮಾರ್ಗದರ್ಶನ ನೀಡುತ್ತದೆ. ಮನುಷ್ಯ ಬದುಕಿನ ಯಾಂತ್ರಿಕ ಪುನರಾವರ್ತನೆಯಿಂದ ಜೀವನಾಸಕ್ತಿಯನ್ನು ಕಳೆದುಕೊಂಡಾಗ ಮರ 'ಕ್ಷಣಕ್ಷಣಕ್ಕೂ ಹೊಸ ಚಿಗುರ ಧರಿಸಿ' ಮನುಷ್ಯನಿಗೆ ಪುನರ್ನವತೆಯ ದಾರಿಯನ್ನು ತೋರಿಸುತ್ತದೆ.

ತಾಯಿ, ಗೆಳೆಯ, ಗುರು, ಮಾರ್ಗದರ್ಶಕ ಹೀಗೆ ಹಲವು ಮುಖಗಳಲ್ಲಿ ನಮ್ಮನ್ನು ಕಾಪಾಡುತ್ತಿರುವ ವೃಕ್ಷಸಂಪತ್ತನ್ನು ಈ ದಿನಗಳಲ್ಲಿ ನಾವು ನಿರ್ದಯವಾಗಿ ನಾಶ ಮಾಡುತ್ತಿದ್ದೇವೆ. ಚೊಕ್ಕಾಡಿಯವರ ಕವಿತೆ ಸಸ್ಯಜಗತ್ತನ್ನು ಕುರಿತು ನಮಗಿರಬೇಕಾದ ಋಣಪ್ರಜ್ಞೆಯನ್ನು ನೆನಪಿಸಿ, ಎಚ್ಚರಿಸುತ್ತದೆ. ●

– ಎನ್. ಶ್ರೀನಿವಾಸ ಉಡುಪ

೧೦೦ ವರ್ಷದ ಹಿಂದೆ ಗಾಂಧಿ



ನಮ್ಮ ತಲೆಮಾರು ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಂಡು ಸದಾ ಅತಂತ್ರರಾಗಿ ನಮ್ಮ ಬದುಕನ್ನೂ , ಭವಿಷ್ಯವನ್ನೂ ಮಕ್ಕಳ ಭವಿಷ್ಯಕ್ಕಾಗಿ ಧಾರೆ ಎರೆಯುತ್ತಿರುವಾಗ ೧೦೦ ವರ್ಷದ ಹಿಂದೆ ಗಾಂಧಿ ತಾನು ನಂಬಿದ ತತ್ವಗಳಿಂದ ಒಂದಿಂಚೂ ಅತ್ತಿತ್ತ ಸರಿಯದೆ ಸಾರ್ವಜನಿಕ ಬದುಕನ್ನೂ, ಖಾಸಗಿ ಬದುಕನ್ನೂ ತೂಗಿಸಿಕೊಂಡು ಹೋದದ್ದೇ ಒಂದು ರೋಚಕ ವಿಷಯ. ತನ್ನ ಮಕ್ಕಳ ಬದುಕನ್ನೂ ಸಾರ್ವಜನಿಕ ಬದುಕಿಗೇ ಧಾರೆ ಎರೆದ ಗಾಂಧಿ ತಮ್ಮ ಮಕ್ಕಳನ್ನೂ ಸಾರ್ವಜನಿಕ ಬದುಕಿಗೆ ಅಣಿಗೊಳಿಸಲು ಪ್ರಯತ್ನಿಸಿದರು.

೧೯೧೮ ರ ಜೂನ್ ೧ ರಂದು ಆಫ್ರಿಕಾದಲ್ಲಿರುವ ತಮ್ಮ ಮಗ ರಾಮದಾಸ ಅವರಿಗೆ ಬರೆದ ಪತ್ರದಲ್ಲಿ ತಮ್ಮ ಇನ್ನೊಬ್ಬ ಪುತ್ರ ದೇವದಾಸ ಅವರ ಬಗ್ಗೆ ಬರೆದಿರುವ ಮಾತು ಮನಮಿಡಿಯುವಂತಿದೆ. ಅವರಿಗೆ ತಮ್ಮ ಮಕ್ಕಳ ಮೇಲೆ ಇದ್ದ ಅಪಾರ ಪ್ರೀತಿಯ ಅರಿವಾಗುತ್ತದೆ. ಅಲ್ಲಿ ಮೋಹವಿಲ್ಲ, ಪ್ರೀತಿ ಕಾಣುತ್ತದೆ. ಬಹುಶ: ಗಾಂಧಿಗೂ ನಮಗೂ ಇರುವ ದೊಡ್ಡ ವ್ಯತ್ಯಾಸ ಅದೇ ಇರಬಹುದು.

ಆಫ್ರಿಕಾದಿಂದ ಹಿಂದಿರುಗಿರುವ ದೇವದಾಸಗೆ ಈಗ ೨೧ ವರ್ಷ. ೨೧ ವರ್ಷದ ಮಗನಿಗೆ ಕಾರ್ಪೊರೇಟ್ ಕಂಪನಿಯಲ್ಲಿ ಲಕ್ಷ, ಲಕ್ಷ ಹಣ ತರುವ ಉದ್ಯೋಗ ದೊರಕುತ್ತಿಲ್ಲವಲ್ಲಾ ಎಂದು ನಮ್ಮ ತಲೆಮಾರು ಕೊರಗುತ್ತಿದ್ದರೆ, ಆ ಪತ್ರದಲ್ಲಿ ರಾಮದಾಸ ಆರೋಗ್ಯವಾಗಿ ಧೃಡಕಾಯನಾಗಿ ಬೆಳೆದಿರುವುದು, ಆಶ್ರಮದಲ್ಲಿ ತಾನೂ ಕಲಿತು ಬೇರೆಯವರಿಗೆ ಕಲಿಸುತ್ತಿರುವುದು, ಗೀತೆಯ ೯ ಅಧ್ಯಾಯಗಳನ್ನು ಕಂಠಪಾಠ ಮಾಡಿರುವುದು, ತನ್ನ ಬಟ್ಟೆಯನ್ನು ತಾನೇ ಒಗೆದು ಕೊಳ್ಳುತ್ತಿರುವುದು, ಅವನು ಓದಿದ ಹಲವು ಪುಸ್ತಕಗಳು, ಆತ ಮದ್ರಾಸಿಗೆ ಹೋಗಿ ಅಲ್ಲಿಯ ಜನರಿಗೆ ಹಿಂದಿ ಹೇಳಿಕೊಟ್ಟು ತಾನು ತಮಿಳು ಕಲಿಯಲಿರುವದು, ಅಲ್ಲದೆ ತನ್ನ ಬದುಕಿನಲ್ಲಿ ರೂಢಿಸಿಕೊಳ್ಳುತ್ತಿರುವ ಅನೇಕ ಚಿಕ್ಕ ಚಿಕ್ಕ ಶಿಸ್ತಿನ ಬಗ್ಗೆ ಮೆಚ್ಚುಗೆಯನ್ನು ದಾಖಲಿಸಿದಾರೆ. ೨೧ ವರ್ಷದ ಮಗನ ಭವಿಷ್ಯದ ಬಗ್ಗೆ ಒಂದಿಷ್ಟೂ ಆತಂಕ ಅವರ ಪತ್ರದಲ್ಲಿಲ್ಲ. ಜೀವನದಲ್ಲಿ ರೂಢಿಸಿ ಕೊಳ್ಳಲೇಬೇಕಾದ ಹಲವು ವಿಷಯಗಳು, ಕ್ಷುಲ್ಲಕವಾದದ್ದು ಎಂದು ನಮ್ಮ ತಲೆಮಾರು ಭಾವಿಸಿರುವಾಗ, ಆ ವಿಷಯಗಳೇ ಗಾಂಧಿಯವರಿಗೆ ಮುಖ್ಯವಾದದ್ದೂ, ಅಗತ್ಯವಾದದ್ದೂ ಆಗಿತ್ತು ಎಂಬುದಕ್ಕೆ ಈ ಪತ್ರ ಸಾಕ್ಷಿಯಾಗಿದೆ.

ತಿಂಗಳ ಚಿತ್ರ



ಹೊಸ ಜೀವನ ದಾರಿಯಲ್ಲಿ ಪರಿಸರ ವಿಚಾರ ಚರ್ಚೆ ಜನಪದ ಚಿತ್ರ ಸಂಗ್ರಹದಿಂದ

Janapada Vichara *Kannada Monthly Digest*
Janapada Seva Trust, Melkote, Dist-Mandya-571431
Tel: 08236 299854 email: janapada@yahoo.com
web: www.janapada.org
Printed at Chandragiri Printers,
Mandya Mob: 9945651584, 9739743237

KA/SK/MND/470/2015-17
Regd No KAR/KAN/2000/3820

ತೆರೆದ ಅಂಚೆ

ಶ್ರೀಮತಿ/ಶ್ರೀ ____________________

____

____